ಅನ್ವೇಷಣೆ

ಸಂಚಿಕೆ : 44

ಸಾಹಿತ್ಯ ಸಂಸ್ಕೃತಿ ವೈಚಾರಿಕತೆ



ಈ ಸಂಚಿಕೆಯಲ್ಲಿ

ಬೆಲೆ ರೂ. 5/-

ಪ್ರಗತಿಪರ ವಿಚಾರಗಳಿಗೆ

ಅನ್ವೇಷಣೆ

ಸಾಂಸ್ಕೃತಿಕ ಚಟುವಟಿಕೆಗಳಿಗೆ

ಸಂಪುಟ : 7 ಮೇ–ಜೂನ್ : 1991 ಸಂಚಿಕೆ : 44

- 'ಅನ್ವೇಷಣೆ' ಸಾಹಿತ್ಯ – ಸಾಂಸ್ಕೃತಿಕ ಚಟುವಟಿಕೆಗಳಿಗೆ ಮೀಸಲಾದ ದ್ವೈಮಾಸಿಕ.
- ಪ್ರಕಟಣೆಗೆ ಕಳುಹಿಸುವ ಲೇಖನ, ವಿಮರ್ಶಾ ಬರಹ, ಕವನಗಳನ್ನು ಆದಷ್ಟು ಟೈಪು ಮಾಡಿ ಕಳುಹಿಸಿ.
- ಅಪ್ರಕಟಿತ ಬರಹ ವಾಪಸ್ಸು ಬೇಕಿದ್ದರೆ ಸಾಕಷ್ಟು ಅಂಚೆ ಚೀಟಿ ಇರಿಸಿ.
- ವಿಳಾಸ ಬದಲಾದರೆ ದಯುವಿಟ್ಟು ತಿಳಿಸಿ
- ಚಂದಾ ಹಣವನ್ನು ಎಂ. ಓ. ಇಲ್ಲವೆ ಡಿ. ಡಿ. ಮೂಲಕ ಕಳಹಿಸಿ. ಚೆಕ್ ಕಳುಹಿಸುವಾಗ ರೂ. 5 ಹೆಚ್ಚು ಕಳುಹಿಸಿ.
- ವಾ. ಚಂದಾ ರೂ. 35 ವ್ಯಕ್ತಿಗಳಿಗೆ
  ರೂ. 50 ಸಂಸ್ಥೆ / ಗ್ರಂಥಾಲಯಂ
  3 ವರ್ಷಕ್ಕೆ 100-ವ್ಯಕ್ತಿಗಳಿಗೆ
  ರೂ. 150-ಗ್ರಂಥಾಲಯುಗಳಿಗೆ

ಆಜೀವ :

ರೂ. 500 ಸಂಸ್ಥೆ/ಗ್ರಂಥಾಲಯುಗಳಿಗೆ

ಸಂಪರ್ಕ ವಿಳಾಸ


ಸಂಪಾದಕ, ಅನ್ವೇಷಣೆ

478, 11ನೇ ಮುಖ್ಯರಸ್ತೆ, ಎಂ. ಸಿ. ಬಡಾವಣೆ

ವಿಜಯನಗರ, ಬೆಂಗಳೂರು 560 040.

ಸಂಪಾದಕನ ಟಿಪ್ಪಣಿ





ಸಂಕ್ರಮಣ ಮತ್ತು ಸಾಹಿತ್ಯ ಸಂದರ್ಭ*

ಕನ್ನಡ ನಿಘಂಟುವಿನಲ್ಲಿ 'ಸಂಕ್ರಮಣ' ಎಂದರೆ ೧) ಮುನ್ನಡೆ ; ಪ್ರಗತಿ
೨) ಒಟ್ಟಿಗೆ ಹೋಗುವಿಕೆ-ಚಲಿಸುವಿಕೆ
೩) ಸಂಧಿಕಾಲ–ಎಂಬ ಅರ್ಥಗಳಿವೆ.

ಸಂಕ್ರಮಣದ ಜೀವಾಳವಾಗಿರುವ ಚಂಪಾ ಅವರ ಅರ್ಥ: ಗೆರೆ ದಾಟುವುದು. ಚಲಿಸುವಿಕೆ ಮತ್ತು ಪ್ರಗತಿಯನ್ನು ಒಪ್ಪುತ್ತ, ಸಂಧಿಕಾಲದ ಸ್ಥಿತಿಯನ್ನು ಹಾಗೂ ಗೆರೆ ದಾಟುವಿಕೆಯನ್ನು ಸಾಹಿತ್ಯ ಸಂದರ್ಭದಲ್ಲಿಟ್ಟು ನೋಡುವುದು ಪ್ರಸ್ತುತ ಪ್ರಬಂಧದ ಮಿತಿ ಕೂಡ. ಏಕೆಂದರೆ ನನ್ನ ಪ್ರಬಂಧದ ವಿಷಯವೇ ಒಂದು ಚೌಕಟ್ಟು ನಿರ್ಮಿಸಿದೆ. ಈ ಚೌಕಟ್ಟು ಪತ್ರಿಕೆ ಮತ್ತು ಕಾಲಘಟ್ಟಗಳ ನಡುವಿನ ಸಂಬಂಧದ್ದು.

ನಮ್ಮ ಸಾಹಿತ್ಯಕ್ಕೊಂದು ಪರಂಪರೆ ಇದೆಯೆಂದು ನಾವೆಲ್ಲಾ ಒಪ್ಪುತ್ತೇವೆ. ಅಕ್ಷರಗಳ ಜೋಡಣೆಯೊಂದಿಗೆ ಸಾಹಿತ್ಯ ಪರಂಪರೆ ಗುರುತಿಸುವ ಪತ್ರಿಕೆಗಳಿಗೂ ಒಂದು ಇತಿಹಾಸ ಇರುತ್ತದೆ. ಪರಂಪರೆ ಮತ್ತು ಇತಿಹಾಸಗಳನ್ನು ತಳಕು ಹಾಕುತ್ತಲೇ ನಡೆದುಬಂದ ದಾರಿಗಳನ್ನು ಗುರ್ತಿಸಿಕೊಳ್ಳುವುದು ನಮ್ಮ ನೆನಪುಗಳ ಶಕ್ತಿಯನ್ನ ವಲಂಬಿಸಿದೆ.

ಇಲ್ಲಿ ಸಾಹಿತ್ಯ ಸಂದರ್ಭದ **ಪರಂಪರೆ,**

ಸಂಕ್ರಮಣದ ವರ್ತಮಾನ-ಭವಿಷ್ಯತ್ ಹಾಗೂ ಇತಿಹಾಸ—ವಾಸ್ತವಗಳ

---

* ಬೆಂಗಳೂರಿನಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಆಶ್ರಯದಲ್ಲಿ ನಡೆದ '**ಸಂಕ್ರಮಣ ೨೫**' ಗೋಷ್ಠಿಯಲ್ಲಿ ಮಂಡಿಸಿದ ಟಿಪ್ಪಣಿ

ಪರಿಶೀಲನೆಗಳತ್ತ ನಮ್ಮ ಕಣ್ಣುಗಳಿವೆ. "ಹೊಸಗನ್ನಡ ಸಾಹಿತ್ಯವು ಅಧ್ಯಯನ ದೃಷ್ಟಿಯಿಂದ ಗುರುತಿಸಬಹುದಾದ ನಾಲ್ಕು ಸಾಹಿತ್ಯ ಚಳವಳಿಗಳ ಮೂಲಕ ಹಾದು ಬಂದಿದೆ. ಈ ಒಂದೊಂದು ಸಾಹಿತ್ಯ ಚಳವಳಿಗಳೂ ಅಂದಂದಿನ ಬರಹದ ಬದಲಾವಣೆಗಳಿಗೆ ಕಾರಣವಾಗುತ್ತ, ಒಂದು ಮತ್ತೊಂದಕ್ಕೆ ಸೃಜನಾತ್ಮಕವಾಗಿ ಪ್ರತಿಕ್ರಿಯಿಸುತ್ತ ಹಾಗೂ ಸಾಹಿತ್ಯದ ನಿರಂತರತೆಗೆ ಪ್ರೇರಕವಾಗುತ್ತ ವೇಗವರ್ಧಕಗಳಂತೆ ವರ್ತಿಸಿವೆ."[1]

ಮೇಲಿನ ಮಾತುಗಳನ್ನು ಪುಷ್ಟೀಕರಿಸಿ ಹೇಳುವುದಾದರೆ ಒಂದು ಸಾಹಿತ್ಯ ಪರಂಪರೆಯನ್ನು ಗುರ್ತಿಸುವಲ್ಲಿ ಪತ್ರಿಕೆಯೊಂದು ವಹಿಸಿದ ಮಹತ್ವದ ಪಾತ್ರವನ್ನು ಹೇಗೆ ಪರಿಗಣಿಸುತ್ತೇವೆಯೋ, ಹಾಗೆಯೇ ಪತ್ರಿಕೆಯೊಂದು ಆಯಾ ಕಾಲಗಳಲ್ಲಾದ ಸಾಹಿತ್ಯಕ ಬದಲಾವಣೆಗಳಿಗೆ ಸ್ಪಂದಿಸಿದ ರೀತಿಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಇಲ್ಲಿ ಸಾಹಿತ್ಯ–ಸಾಂಸ್ಕೃತಿಕ ಮಹತ್ವವನ್ನೊಳಗೊಂಡ "ಸಂಕ್ರಮಣ" ವಾಸ್ತವ ; ಇದೇ ವರ್ತಮಾನ. ಈ ವಾಸ್ತವದಲ್ಲಿ ಭೂತ ಅಡಗಿದೆ. ಭವಿಷ್ಯತ್ ಇದೆ. ನಮಗೆ ವಾಸ್ತವದ ವಸ್ತು ಸ್ಥಿತಿಯೊಂದಿಗೆ ಭೂತದಲ್ಲಡಗಿದ ಇತಿಹಾಸದ ಪರಂಪರೆಯನ್ನು ಕಾಣುವುದು ಮುಖ್ಯವಾಗಿದೆ.

ಸರಿ ಸುಮಾರು ೨೫ ವರ್ಷಗಳ ಯೌವನಿಗ ವಯಸ್ಸಿನ 'ಸಂಕ್ರಮಣ'ಕ್ಕೆ ಮೂವರು ಅಪ್ಪಂದಿರು. ಮಹಾಭಾರತದ ದ್ರೌಪದಿಯು ಐವರು ಗಂಡಂದಿರು ಇತಿಹಾಸ ಪುರುಷರೋ ಪುರಾಣ ಪುರುಷರೋ ಆಗಿದ್ದರೆ, ಸಂಕ್ರಮಣದ ಚಂಪಾ,ಗಿರಡ್ಡಿ, ಪಟ್ಟಣಶೆಟ್ಟರು ಈ ೨೫ರ ಯೌವನಿಗನಿಗೆ ಕರುಳು ಬಳ್ಳಿ ಕೊಟ್ಟವರು. ಅಪ್ಪಂದಿರು ಎಷ್ಟೇ ಸಂಖ್ಯೆಯಲ್ಲಿದ್ದರೂ ನಿಜವಾಗಿ ಪೋಷಣೆಯ ಜವಾಬ್ದಾರಿ ಹೊರುವವನು ಒಬ್ಬ ಅಪ್ಪನೇ ಆದ್ದರಿಂದ ಇದು 'ಚಂಪಾ' ಎಂಬ ಅಪ್ಪನ ಸೊಂಟದ ಗಂಟಾಯಿತು. ಗಂಟು ಎಂದರೆ ತೊಡಕಲ್ಲ. ಬಿಗಿ ಹೆಚ್ಚಿಸಿಕೊಳ್ಳುವಿಕೆ ಎಂದರ್ಥ. ಚಂಪಾ ಒಬ್ಬರೇ ಬಿಗಿದುಕೊಂಡ ಗಂಟು ಕೆಲವೊಮ್ಮೆ ಸಡಿಲವಾಗುತ್ತ, ಮಗದೊಮ್ಮೆ ಬಿಗಿಯಾಗುತ್ತ, ಹಸಿ–ಬಿಸಿ, ಒಣ–ಖಾರ ಇತ್ಯಾದಿ ಚರ್ಚೆಗಳನ್ನು ದಾಖಲಿಸುತ್ತ, 'ಸಂಕ್ರಮಣ ಎಂದರೆ ಚಂಪಾ' 'ಚಂಪಾ ಎಂದರೆ ಸಂಕ್ರಮಣ' ಎನ್ನುವಂತಾಗಿದ್ದು ನಮ್ಮ ಎದುರಿನ ವಸ್ತು ಸ್ಥಿತಿ.

ನವೋದಯ ಕಾಲ ಸನ್ನಿಹಿತ ಅಂದುಕೊಂಡ ಸಂದರ್ಭದಲ್ಲಿ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಕನ್ನಡ ಸಾಹಿತ್ಯದ ಮೇಲಾಗ ತೊಡಗಿದ್ದು ಅರವತ್ತರ ದಶಕದಲ್ಲಿ. ಆಗಲೇ ನವ್ಯದ ಗಾಳಿ ಬೀಸಿ ಇಂಗ್ಲಿಷ್ ಮೇಸ್ಟ್ರುಗಳ ಮೂಲಕ ಈ ನೆಲವನ್ನು ತಾಗಿದ್ದು ಈಗಾಗಲೇ ಇತಿಹಾಸ. 'ಸಂಕ್ರಮಣ'ದ ಹುಟ್ಟು (೧೯೬೪) ಇದೇ ಸಂದರ್ಭದಲ್ಲಾದ

ದ್ದೊಂದು ವಿಶೇಷ. ಮೂವರು ಸಂಪಾದಕರಲ್ಲಿ ಇಬ್ಬರು ಇಂಗ್ಲಿಷ್ ಮೇಸ್ಟ್ರುಗಳು, ಮತ್ತೊಬ್ಬರು ಹಿಂದಿ ಕಲಿತು, ಕಲಿಸುವವರಾಗಿದ್ದವರು.

ನವೋದಯದ ನಂತರದ ಸಾಹಿತ್ಯಕ ಸಂದರ್ಭಕ್ಕೆ, ಚಟುವಟಿಕೆಗಳಿಗೆ 'ಸಂಕ್ರಮಣ' ಸ್ಪಂದಿಸುತ್ತ ಬೆಳೆಯತೊಡಗಿತು. ಇದೇ ಸಂದರ್ಭದಲ್ಲಿ ಅಡಿಗರ 'ಸಾಕ್ಷಿ' ನವ್ಯ ಸಾಹಿತ್ಯಕ್ಕೆ ಮುಖವಾಣಿ ಆಗಿ ಕೆಲಸ ಮಾಡತೊಡಗಿದ್ದರೂ, ಸಂಕ್ರಮಣ ಮಾತ್ರ ಹೊಸ ಹೊಸ ಬರಹಗಾರರ ಆಲೋಚನೆಗಳಿಗೆ ವೇದಿಕೆ ನಿರ್ಮಾಣ ಮಾಡತೊಡಗಿತ್ತು. ಆಗಲೇ ವೈಚಾರಿಕ ವಿಶ್ಲೇಷಣೆಯ ಬರಹಗಳಿಂದ ಸೈದ್ಧಾಂತಿಕ ವಿಚಾರಗಳ ಅಡಿಪಾಯ ಹಾಕಿ, ಬುನಾದಿ ಭದ್ರಪಡಿಸಿಕೊಂಡಿದ್ದಕ್ಕೆ ಆಗಿನ ಸಂದರ್ಭದ ಪತ್ರಿಕೆಯ ಬರಹಗಳನ್ನು ತುಲನೆ ಮಾಡಿ ನೋಡಬಹುದು. ಸಂಕ್ರಮಣದಲ್ಲಿ ಗಟ್ಟಿಯಾದ ತಾತ್ವಿಕ ವಿಚಾರಗಳು ಹೆಚ್ಚು, ಹೆಚ್ಚು ಪ್ರಕಟಗೊಳ್ಳುತ್ತಿದ್ದಂತೆ ತನ್ನದೇ ಆದ ಓದುಗರನ್ನು ಸೃಷ್ಟಿಸಿ ಕೊಳ್ಳುತ್ತ ಸಾಗತೊಡಗಿತು.

ಮೂವರು ಮಿತ್ರರ ಸಂಪಾದಕತ್ವದಲ್ಲಿ ಹಲವು ವರ್ಷ ಪ್ರಕಟವಾದ 'ಸಂಕ್ರ ಮಣ' ಕ್ರಮೇಣ ಚಂಪಾರೊಬ್ಬರ ಪಾಲಿಗೆ ಬಿತ್ತು. ಚಂಪಾ ಪತ್ರಿಕೆಗೆ ಒಬ್ಬಂಟಿಯಾದ ನಂತರ ನಿಜವಾದ ಹೋರಾಟ, ಕಾಳಜಿಗಳು ಪತ್ರಿಕೆ ಮೂಲಕ ಬಿಂಬಿತವಾಗತೊಡಗಿ ದವು ತಮ್ಮೊಳಗಿನ ವೈಚಾರಿಕ ವಿಚಾರಗಳನ್ನು ಮತ್ತಷ್ಟು ಪುಷ್ಟೀಕರಿಸಲು ಪತ್ರಿಕೆ ವೇದಿಕೆಯಾಯಿತು. ಚಂಪಾ ಒಬ್ಬ ಕವಿ, ನಾಟಕಕಾರ ಆಗಿದ್ದರ ಜೊತೆಗೆ ಗದ್ಯ ಬರಹ ದಲ್ಲೂ ವಿಶಿಷ್ಟತೆ ಸಾಧಿಸಿಕೊಂಡಿರುವುದರಿಂದ ಪತ್ರಿಕೆಗೆ 'ಚಂಪಾ ಕಾಲಂ' ಜೀವನಾಡಿ ಯಾಗಿದೆ. ಗದ್ಯದ ಛಾಪು, ವ್ಯಂಗ್ಯ, ಕವಿತೆ-ನಾಟಕಗಳಲ್ಲೂ ಮೇಳೈಸಿ ಓದುಗನಿಗೆ ಕಚಗುಳಿ ಇಡುವುದರಿಂದ ಚಂಪಾ ಒಬ್ಬ ಸಾಂಸ್ಕೃತಿಕ ಕ್ಷೇತ್ರದ ಮಹತ್ವದ ವ್ಯಕ್ತಿ ಯಾಗಿದ್ದಾರೆ.

ಚಂಪಾರಿಗೂ ಚಳುವಳಿಗಳಿಗೂ ತೀರ ಹತ್ತಿರದ ನಂಟು. ನಾನು ಸಾಹಿತ್ಯ ಸಂದರ್ಭವನ್ನು ಸಂಕ್ರಮಣಕ್ಕೆ ತಳುಕು ಹಾಕುವಾಗಲೆಲ್ಲಾ ಚಂಪಾರ ತೊಡಗಿಸುವಿಕೆಯ ಹೋರಾಟಗಳು/ಚಳುವಳಿಗಳು ಬೇರೆ ಬೇರೆ ನಿಲ್ಲದೆ ಜೊತೆ ಜೊತೆಗೇ ಸಾಗುವುದರಿಂದ ಇಲ್ಲಿ ವಿಷಯಾಂತರ ಆದರೂ ಇದನ್ನು ಪ್ರಸ್ತಾಪಿಸಲೇಬೇಕಾಗುತ್ತದೆ. "ಕನ್ನಡ ಸಾಹಿತ್ಯ ಚರಿತ್ರೆಯ ಗತಿಯನ್ನು ಗಮನಿಸಿದವನಿಗೆ, ಅದರ ವಾಹಿನಿಯಲ್ಲಿ ಹಲವು ಬಣ್ಣಗಳ ಹೊಳೆಗಳು ಮಿಳಿತವಾಗಿರುವುದು ಕಂಡು ಬರುತ್ತದೆ. ಆಯಾ ಕಾಲಮಾನದ ಸಾಮಾಜಿಕ-ರಾಜಕೀಯ-ಆರ್ಥಿಕ ಸ್ಥಿತ್ಯಂತರಗಳಿಗೆ ಅನುಗುಣವಾಗಿ ಸಾಹಿತ್ಯವೂ ಬದಲಾದ ರೂಪ ರೇಷೆಗಳಲ್ಲಿ ಒಡ ಮೂಡಿದೆ."[2] ಹೀಗಾಗಿ ಚಂಪಾರ ಹೋರಾಟದ ದಿಕ್ಕು ಹಲವು ಕವಲುಗಳಲ್ಲಿದೆ.

ಹೋರಾಟದ ಮೂಲಕ ಪತ್ರಿಕೆಗೆ ಒಂದು ಸಾಮಾಜಿಕ ಆಯಾಮ ಕೊಟ್ಟು ಜನಪರ ವಿಚಾರಗಳನ್ನು ಪ್ರಕಟಿಸುತ್ತ ಬುದ್ಧಿಗೆ ಕಸರತ್ತು ಕೊಡುವ ಕೆಲಸವನ್ನು ಸಂಕ್ರಮಣ ಮಾಡುತ್ತಾ ಬಂದಿರುವುದಕ್ಕೆ ಹಲವು ಸಾಂದರ್ಭಿಕ, ವಿಶೇಷಾಂಕ ಗಳೇ ಸಾಕ್ಷಿ. ಉದಾ: "ಸಂಕ್ರಮಣ ಕಾವ್ಯ" (ಪಠ್ಯ ಪುಸ್ತಕವಾಗಿದೆ), ಲೋಹಿಯಾ ವಿಶೇಷಾಂಕ, ಅಂಬೇಡ್ಕರ್ ವಿಶೇಷಾಂಕ, ವಿಚಾರವಾದ ವಿಶೇಷಾಂಕ, ಬರಹಗಾರರ ಒಕ್ಕೂಟ ವಿಶೇಷಾಂಕ ಇತ್ಯಾದಿ ಪಟ್ಟಿ ಬೆಳೆಸಬಹುದು.

ಚಂಪಾ ಒಬ್ಬ ಹೋರಾಟಗಾರರಾದ್ದರಿಂದ ವ್ಯವಸ್ಥೆಯ ವಿರುದ್ಧ ದನಿ ಎತ್ತು ತ್ತಲೇ ಸಾಹಿತ್ಯಕ ಬದಲಾವಣೆಗೂ ಸದಾ ತುಡಿಯುವವರಾಗಿ ಹಲವು ಸಾಹಿತ್ಯಕ ವೇದಿಕೆಗಳನ್ನು ಸೃಷ್ಟಿಸಲು ಕಾರಣಕರ್ತರಾಗಿದ್ದಾರೆ. ಎಪ್ಪತ್ತರ ದಶಕದಲ್ಲಿ ಮೈಸೂರಿ ನಲ್ಲಿ ಜರುಗಿದ ಲೇಖಕರ ಕಲಾವಿದರ ಒಕ್ಕೂಟದ ಸ್ಥಾಪನೆಗೆ ಶ್ರಮಿಸಿದವರಲ್ಲಿ: ಚಂಪಾ ಕೂಡ ಪ್ರಮುಖರು. ಒಕ್ಕೂಟದ ಆಶಯಗಳು ಕಾರ್ಯರೂಪಕ್ಕೆ ಬರುವ ಮುನ್ನವೇ (ಒಂದೆರಡು ವರ್ಷಗಳಲ್ಲಿ) ಅದು ಸಾವು ಕಂಡದ್ದು ಹೊಸ ವಿಚಾರಗಳ ಬೆಳೆ ಬಾಳದೇ ಬರಡಾಗಿದ್ದು ಚಂಪಾರಂಥ ಆಲೋಚಕರಿಗೆ ಆಘಾತ ಆದದ್ದು ನಿಜ.

ಕಾಲ ಕಾಲಕ್ಕೆ ಸಾಹಿತ್ಯಕ ಮೌಲ್ಯಗಳು, ಮಾನದಂಡಗಳು ಬದಲಾಗುತ್ತ ಸಾಗು ವುದರಿಂದ ಚಲನಶೀಲತೆಗೆ ಧಕ್ಕೆ ಬರುತ್ತದೆ, ಇದರಿಂದ ಸ್ಥಗಿತಗೊಂಡ ಸಾಹಿತ್ಯಕ ಮೌಲ್ಯಗಳಿಗೆ ಚಂಪಾ ಮತ್ತು ಸಂಕ್ರಮಣ ವಿರೋಧ ವ್ಯಕ್ತಪಡಿಸುತ್ತಲೇ ಬಂದಿದೆ. ಚಂಪಾರ ಬರಹದಲ್ಲಿನ ಲೇವಡಿಗಾಗಿಯೋ, ವೈಚಾರಿಕ ಬೀಜವನ್ನು ಎಲ್ಲೆಡೆ ಬಿತ್ತಿ ಜನ ಜಾಗೃತಿಗೊಳಿಸಿದ್ದಕ್ಕಾಗಿಯೋ ಶಿಕ್ಷೆಯೆಂಬಂತೆ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಜೇಲು ವಾಸವನ್ನು ಅನುಭವಿಸಬೇಕಾಯಿತು. ಬಹುಶಃ ಆ ಸಂದರ್ಭದಲ್ಲಿ ಚಂಪಾರೊಬ್ಬರೇ ಜೇಲು ಕಂಡ ಸಾಹಿತಿಯಿರಬಹುದು. ಮೂಲತಃ ಜಯಪ್ರಕಾಶ್ ನಾರಾಯಣರ ಚಳವಳಿಯಿಂದ ಪ್ರೇರಣೆ ಪಡೆದು ಜೇಲು ಅನುಭವ ಪಡೆದ ಚಂಪಾ ತಮ್ಮ **"೨೨ ಹಗಲು ೨೫ ರಾತ್ರಿ"** ಎಂಬ ಕೃತಿಯಲ್ಲಿ ವಿಶಿಷ್ಟ ಪ್ರಸಂಗಗಳನ್ನು ದಾಖಲಿಸಿದ್ದಾರೆ.

ಆ ಸಂದರ್ಭ ಸಂಕ್ರಮಣಕ್ಕೊಂದು ಸವಾಲು; ನಿಜವಾಗಿ ಸಂಕ್ರಮಣ ಸ್ಥಿತಿ. ಚಂಪಾರಿಗೆ ಹೊಸಜೀವ ಬಂದ ಕಾಲ. ತುರ್ತು ಪರಿಸ್ಥಿತಿ ಮುಗಿದು ದೇಶದಲ್ಲಿ ಹೊಸ ಗಾಳಿ ಬೀಸತೊಡಗಿದಾಗ ಸಂಕ್ರಮಣಕ್ಕೊಂದು ಹೊಸ ರೂಪು ಆಕಾರ. ರಾಜ್ಯಾದ್ಯಂತ ಹಲವು ಪ್ರಗತಿಪರ ಆಲೋಚನೆಯ ಬುದ್ಧಿಜೀವಿಗಳು ಪತ್ರಿಕೆಯ ಸಂಪಾದಕೀಯ ಸಲಹಾ ಮಂಡಳಿಯಲ್ಲಿ ಸೇರಿಕೊಂಡರು. ಇದರ ಜೊತೆಗೆ ಸಾಹಿತ್ಯದಲ್ಲಿ ಹೊಸ ದನಿ ಗಳು ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳಲ್ಲಿ ಬದಲಾವಣೆಗೆ ಹಪಹಪಿಸು ತ್ತಿದ್ದ ಕಾಲ. ನವ್ಯ ಸಾಹಿತ್ಯದ ವ್ಯಕ್ತಿಗತ ವಿಚಾರಗಳು ಮಾಯವಾಗುತ್ತ, ಸಾಮಾಜಿಕ ಆಯಾಮಕ್ಕೆ ಒತ್ತು ಬೀಳ ತೊಡಗಿದ ಕಾಲವಂತೂ ಸಾಹಿತ್ಯ ಸಂದರ್ಭದಲ್ಲಿ ಹೊಸ

ಮನ್ವಂತರಕ್ಕೆ ದಾರಿ ಮಾಡಿಕೊಟ್ಟಿತು. ಅದು ನೋವುಂಡವರ ದನಿಯೆಂಬುದು ಇಲ್ಲಿ ಉಲ್ಲೇಖನೀಯ. ಇದು ದಲಿತ ಬಂಡಾಯವೆಂಬ ಮನೋಧರ್ಮದಲ್ಲಿ ಮೂಡಿದ ಚಳವಳಿಯ ಸಾಹಿತ್ಯ ಸಂದರ್ಭ. ಇದಕ್ಕೆ ಚಂಪಾ ಮತ್ತು ಸಂಕ್ರಮಣ ಅಡಿಪಾಯ ಹಾಕಿದ್ದನ್ನು ಯಾರೂ ಮರೆಯುವಂತಿಲ್ಲ. ಸಾಹಿತ್ಯದಲ್ಲಿ ಅನಿವಾರ್ಯ ಒಪ್ಪಗಳ ಮೂಲಕ ದಲಿತ—ಬಂಡಾಯ ನೆಲೆಪೂರಲು ಸಂಕ್ರಮಣದ ಪಾತ್ರವೂ ಗಮನಾರ್ಹ. "ಕನ್ನಡ ಸಾಹಿತ್ಯದಲ್ಲಿ ಒಂದು ಮಹತ್ವದ ಘಟ್ಟವಾಗಿ ಕಾಣಿಸಿಕೊಂಡಿರುವ ಬಂಡಾಯ ಸಾಹಿತ್ಯ ಚಳವಳಿ ಸಾಹಿತ್ಯಕ್ಕೆ ತಾತ್ವಿಕ ನೆಲೆಯನ್ನು ಒದಗಿಸಿಕೊಳ್ಳುವ ಒಂದು ಗಂಭೀರ ಪ್ರಯತ್ನದ ಅಭಿವ್ಯಕ್ತಿ."[3] ೧೯೭೯ರಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರಥಮ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಚಂಪಾ ಮತ್ತು ಸಂಕ್ರಮಣ ವಹಿಸಿದ್ದ ಪಾತ್ರ ಶ್ಲಾಘನೀಯವಾದದ್ದು. ಅಲ್ಲಿಂದ ಬಂಡಾಯದ ನಿಜವಾದ ಕಾಳಜಿಗಳನ್ನು ದಾಖಲಿಸುತ್ತ, ಸಾಹಿತ್ಯದ ಮಹತ್ವದ ಪ್ರವಾಹವನ್ನು ತನ್ನ ತೆಕ್ಕೆಯಲ್ಲಿ ಪಡೆದದ್ದು ಅಷ್ಟೇ ಹೆಗ್ಗಳಿಕೆಯ ವಿಚಾರ ಕೂಡ.

ಸಂಕ್ರಮಣದ ಮೂಲಕವಂತೂ ನೂರಾರು ಹೊಸ ದನಿಗಳು ಕೇಳಿ ಬಂದಿವೆ. ಚರ್ಚೆ, ಪ್ರತಿಕ್ರಿಯೆಗಳ ಮೂಲಕ ಸಾಹಿತ್ಯ-ಸಾಂಸ್ಕೃತಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿದೆ. ಇವೊತ್ತು ದಲಿತ-ಬಂಡಾಯ ಚಳವಳಿ ಸಾಹಿತ್ಯದ ಪ್ರಮುಖ ಪ್ರವಾಹ ಆಗಿರುವುದಕ್ಕೆ ಸಂಕ್ರಮಣದ ಕೊಡುಗೆಯೂ ಅಪಾರವಾಗಿದೆ ಎಂಬುದನ್ನಿಲ್ಲಿ ನಾವು ನೆನೆಯಬೇಕು.

"ಪರಂಪರೆಗೆ, ಹಿಂದಿನ ಸಾಹಿತ್ಯ ಮಾರ್ಗಕ್ಕೆ ಪ್ರತಿಕ್ರಿಯೆ ತೋರಿಸುತ್ತಲೇ ಸಾಹಿತ್ಯ ಚಳವಳಿಗಳು ರೂಪುಗೊಳ್ಳುತ್ತಾ ಬಂದಿವೆ. ಹಾಗೆ ರೂಪುಗೊಳ್ಳುತ್ತ ತಮ್ಮ 'ಅನನ್ಯತೆ'ಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸಿವೆ. ಸಂಪ್ರದಾಯ ಮತ್ತು ಅದರ ವಿರುದ್ಧದ ಚಳುವಳಿಗಳ ಮೂಲಕವೇ ಸಾಹಿತ್ಯ ತನ್ನ ಜೀವಂತಿಕೆಯನ್ನು ಉಳಿಸಿಕೊಳ್ಳುತ್ತಾ ಹೋಗುತ್ತದೆ."[4] ಎಂದು ಹೇಳುತ್ತಲೇ,

ಕೊನೆಯದಾಗಿ **"ನವ್ಯ"ವೆಂಬ ಅಸಂಘಟಿತ ಸಾಹಿತ್ಯ ಪ್ರಕಾರದ ಬೆಳವಣಿಗೆಗೆ ಪೋಷಕರಾಗಿದ್ದವರು ಪಾಶ್ಚಾತ್ಯ ವಿಚಾರಗಳಲ್ಲಿ ತಲೆದೂಗಿದ್ದರಿಂದ; ಸಂಘಟಿತವಾದ ಚಳವಳಿಯಾಗಿ ರೂಪಗೊಂಡ ಈಚಿನ ದಲಿತ-ಬಂಡಾಯದ ಸಾಹಿತ್ಯ ಪ್ರಕಾರ 'ಜನಪರ' ಆದದ್ದು 'ಕಾವ್ಯ ಬಂತು ಬೀದಿಗೆ' ಎಂಬ ಅರ್ಥದಲ್ಲೇ....**
ಮುಗಿಸುವ ಮುನ್ನ—
ಭಾಷಾ ಚಳವಳಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದ ಚಂಪಾರಿಗೆ ಕನ್ನಡ ಓದುಗರ ಬಗ್ಗೆ ಎಲ್ಲಿಲ್ಲದ ಅಭಿಮಾನ ಬಂಧಿರಬೇಕು. ಅದಕ್ಕಾಗಿ ತಮ್ಮ ಸಂಕ್ರಮಣವನ್ನು

ವ್ಯಾವಹಾರಿಕ (commercial) ಪತ್ರಿಕೆಯನ್ನಾಗಿಸಲೂ ಪ್ರಯತ್ನಿಸಿ ವಿಫಲರಾದರು. ಕೆಲಕಾಲ ವಾರ ಪತ್ರಿಕೆ ಆದ ಸಂಕ್ರಮಣ ಆಧುನಿಕ ಮುದ್ರಣ, ವಿನ್ಯಾಸಗಳ ಪೈಪೋಟಿ ಮಾಡಲಾರದೇ ಆರ್ಥಿಕ ನಷ್ಟ ಅನುಭವಿಸಿ Back to pavilionಗೆ ಮರಳಿ ಪುನ ಸಾಹಿತ್ಯಕ ಪತ್ರಿಕೆ ಆದದ್ದೂ ಇದರ ಇತಿಹಾಸ. (ಈ ಸಂದರ್ಭ ಚಂಪಾ ವ್ಯಾವಹಾರಿಕವಾಗಿ ಹೆಸರು ಕೆಡಿಸಿಕೊಂಡರೆಂಬ ಮಾತೂ ಕೇಳಿಬರುತ್ತಿದೆ.)

ಒಂದು ಪತ್ರಿಕೆ, ಅದರಲ್ಲೂ ಸಾಹಿತ್ಯಕ ಮೌಲ್ಯವನ್ನೊಳಗೊಂಡ ಪತ್ರಿಕೆ ಸೀಮಿತ ಓದುಗರನ್ನು ತಲುಪುತ್ತಿದ್ದರೂ, ಸಾಂಸ್ಕೃತಿಕವಾದ ಮಹತ್ವದಿಂದಾಗಿ ಜನಪ್ರಿಯ ಪತ್ರಿಕೆಗಳಿಗಿಂತ ಇದಕ್ಕಿರುವ ಸ್ಥಾನಮಾನ ಗೌರವಯುತದು. ಇಂಥ ಗೌರವ ಎಷ್ಟೋ ಸಂದರ್ಭದಲ್ಲಿ ಆರ್ಥಿಕ ನಷ್ಟವನ್ನೇ ಪಡೆಯುತ್ತಾದರೂ ಇವುಗಳ ಜೀವಂತಿಕೆಗೆ ವ್ಯಾವಹಾರಿಕ ಬುದ್ಧಿ ಚಾತುರ್ಯವೂ ಮುಖ್ಯವೆಂಬುದನ್ನು ಚಂಪಾ ಅವರು ನಮಗೆ ತೋರಿಸುತ್ತಲೇ 'ಸಂಕ್ರಮಣ'ದ ೨೫ ವಸಂತಗಳ ಗಡಿ ದಾಟಿಸಿದ್ದಾರೆ. ಅದಕ್ಕಾಗಿ ಚಂಪಾರನ್ನು ನಾನು ಸಾಹಿತ್ಯ ಪತ್ರಿಕೆಯೊಂದರ ಸಂಪಾದಕನಾಗಿ ಅಭಿನಂದಿಸುತ್ತೇನೆ. ನಮಸ್ಕಾರ.

—ಆರ್. ಜಿ. ಹಳ್ಳಿ ನಾಗರಾಜ್

ಅಡಿ ಟಿಪ್ಪಣಿ

1. ಡಾ॥ ಜಿ. ಎಸ್. ಶಿವರುದ್ರಪ್ಪ : (ಸಂಪಾದಕ) "ಕನ್ನಡ ಸಾಹಿತ್ಯ ಸಂದರ್ಭ" (1990) : ಎರಡು ಮಾತುಗಳು (ಮುನ್ನುಡಿ) ಪ್ರ : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು-2.
2 ಮತ್ತು 3. ಆರ್. ಪೂರ್ಣಿಮಾ : "ಬಂಡಾಯ ಹತ್ತು ವರ್ಷ" (1990) ಪುಟ : 75, ಸಂ: ಆರ್. ಜಿ ಹಳ್ಳಿ ನಾಗರಾಜ್ ಪ್ರ : ಅನ್ವೇಷಣೆ ಪ್ರಕಾಶನ,ವಿಜಯನಗರ, ಬೆಂಗಳೂರು-40
4. ನರಹಳ್ಳಿ ಬಾಲಸುಬ್ರಹ್ಮಣ್ಯ : "ಕನ್ನಡ ಸಾಹಿತ್ಯ ಸಂದರ್ಭ" (1990) : ಸಾಹಿತ್ಯ ಚಳುವಳಿಗಳು : ಒಂದು ತಾತ್ವಿಕ ವಿವೇಚನೆ, ಪುಟ . 9, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗರಸ್ತೆ, ಬೆಂಗಳೂರು-560002.

ಪ್ರತಿಕ್ರಿಯೆ

ಪೋಲಂಕಿ ಮತ್ತು ಕುಸುಮ ಬಾಲೆ

'ಅನ್ವೇಷಣೆ' ಸಂ. 43ರಲ್ಲಿ ಡಾ॥ ಪೋಲಂಕಿ ರಾಮಮೂರ್ತಿಯವರ "ಕುಸುಮ ಬಾಲೆಯ ಓದು, ಚಂಪಾ.......ಇತ್ಯಾದಿ" ಪ್ರತಿಕ್ರಿಯೆ ಓದಿ, ಈ ಪತ್ರ.......

ಪ್ರಾಜ್ಞ ಓದುಗ, ವಿಮರ್ಶಕ, ಸಹೃದಯರಾಗಿರುವ ಶ್ರೀಯುತರು ಕವಿ ಕಾಣದ ಪವಾಡ, ಕಾಣ್ಕೆ, ಅದ್ಭುತಗಳನ್ನು ಕುಸುಮ ಬಾಲೆಯಲ್ಲಿ ಹುಡುಕಿದ್ದಾರೆ. ಇಂಗ್ಲಿಷ್

ಓದಿರುವ ಇವರು ಪ್ರತಿಯೊಂದಕ್ಕೂ ಉದಾಹರಣೆಯನ್ನು ಅಲ್ಲಿಂದಲೇ ತಂದು ನಮ್ಮ ಎದುರು ಇಟ್ಟು. ನಮಗೆ ಕಾಣದ ಕಾಣ್ಕೆಗಳನ್ನು ತೋರಿಸುತ್ತಿದ್ದಾರೆ. ಇದರಿಂದ ಸ್ವತಃ ದೇವನೂರ ಮಹಾದೇವ ಕೂಡ ಬೆಕ್ಕಸ ಬೆರಗಾಗಿದ್ದಾರೆ. ಇನ್ನು ನಾವು-ನೀವು ಕೂಡ ಬೆಕ್ಕಸ ಬೆರಗಾಗಲೇಬೇಕು.

ಕುಸುಮಬಾಲೆಯನ್ನು ಕುರಿತಂತೆ ಗಂಭೀರ ಚಿಂತನೆಯನ್ನು ಮಾಡುವಲ್ಲಿ ಒಬ್ಬರಾದ ಪೋಲಂಕಿಯವರು, ಆ ಕೃತಿಯನ್ನು ವಸ್ತುನಿಷ್ಠವಾಗಿ ನೋಡಲಿ, ಆದರೆ ಪೋಲಂಕಿ ಥರ ಯಾರು ಅತಿಯಾಗಿ ಓಲೈಸುವುದಿಲ್ಲ. ಇದು ಮಹಾದೇವನ ಮೇಲಿರುವ ವ್ಯಾಮೋಹವೋ ? ಅಥವಾ ನಮಗೆ ಕಾಣದ ಕಾಣ್ಕೆಗಳು ಕುಸುಮಬಾಲೆಯಲ್ಲಿ ಇವೆಯೋ ? ನಾನಂತು ಕಾಣೆ. ಪೋಲಂಕಿಯವರು ಕರ್ನಾಟಕದ ಜನತೆಗೆ ಹಾಗೂ ಇಂಗ್ಲಿಷ್ ಭಾಷೆಯ ಮೂಲಕ ಜಗತ್ತಿನ ಜನತೆಗೆ ಕುಸುಮಬಾಲೆಯನ್ನು ಅನ್ವಯಿಕ-ವಿಮರ್ಶೆ, ಪ್ರಾಯೋಗಿಕ ವಿಮರ್ಶೆಯ ಮೂಲಕ ಅರ್ಥ ಮಾಡಿಸಲು ಶ್ರಮಪಡುತ್ತಿದ್ದಾರೆ.

ಮಹಾದೇವ ಅವರು ದೊಡ್ಡ ಕಲಾವಿದ. ನಮ್ಮೊಳಗಿನ ಅತ್ಯಂತ ಸೂಕ್ಷ್ಮ ಪ್ರಜ್ಞೆಯ ಪ್ರಜ್ಞಾವಂತಿಕೆಯಿಂದ, ತಾವು ಹೊಂದಿರುವ ಜಗತ್ತನ್ನು ಭಾಷೆಯ ಮೂಲಕ ದಾಖಲಿಸುತ್ತಿದ್ದಾರೆ. ವಸ್ತುವನ್ನು ದಲಿತ ಜನಾಂಗದಿಂದ ತೆಗೆದುಕೊಂಡು, ವಿನ್ಯಾಸವನ್ನು ನವ್ಯದ ಪ್ರಕಾರದಿಂದ ತೆಗೆದುಕೊಂಡು ಅಭಿವ್ಯಕ್ತಿಯಲ್ಲಿ ಅಮೂರ್ತವಾಗಿ ನಿಲ್ಲುತ್ತಾರೆ. ಇದರಿಂದ ಮಹಾದೇವ ಕೃತಿಯು ಉದ್ದೇಶವನ್ನು ಈಡೇರಿಸಿದಂತೆ ಆಗುವುದಿಲ್ಲ. ಚಿನ್ನ-ಕಬ್ಬಿಣ ಎರಡು ಲೋಹವಾಗಿದ್ದರೂ, ಈ ಕಾಲಮಾನದಲ್ಲಿ ಚಿನ್ನಕ್ಕೆ ಹೆಚ್ಚಿನ ಮೌಲ್ಯ ಕಟ್ಟುತ್ತೇವೆ. ಬಳಕೆ ದೃಷ್ಟಿಯಿಂದ ಕಬ್ಬಿಣ ಹೆಚ್ಚು ಜನ ಬಳಕೆಯಾಗಿರುತ್ತದೆ. ಚಿನ್ನವನ್ನೆ ಕಟ್ಟುವ ಮಹಾದೇವ ಪೋಲಂಕಿಯಂತಹ ಇಂಗ್ಲಿಷ್ ಭಾಷೆ, ಕಾಣ್ಕೆಗಳನ್ನು ಕಾಣುವ-ಉಳ್ಳವರಿಗೆ ದಕ್ಕುತ್ತವೆ. ನನ್ನಂತಹ ಪಾಮರನಿಗೆ ದಕ್ಕುವುದಿಲ್ಲ. ಬದಲಾಗಿ ನಿತ್ಯ ಬಳಕೆಯ, ಶ್ರೀ ಸಾಮಾನ್ಯನೂ ಬಳಸುವ ಕಬ್ಬಿಣವೇ ಸಾಕು. ಈ ದೆಸೆಯಲ್ಲಿ ಮಹಾದೇವ ಅವರ ಬರಹಗಳು ಚಿನ್ನವನ್ನು ಕಟ್ಟುವ ಬದಲು ಎಲ್ಲರಿಗೂ ದಕ್ಕುವ ಕಬ್ಬಿಣವನ್ನು ಕಟ್ಟಲಿ.

ರೂಢಿಗತ ಸಾಹಿತ್ಯದ ಪರಂಪರೆಯ ದೃಷ್ಟಿಕೋನ ಕುಸುಮಬಾಲೆಯನ್ನು ಏಕಾಏಕಿ ಸ್ವೀಕರಿಸುವುದಿಲ್ಲ. ತನ್ನದೇ ಆದ ಸಿದ್ಧ ಮನಸ್ಸುಗಳಿಂದ ಆ ಕೃತಿಯನ್ನು ನೋಡಬಯಸುತ್ತದೆ. ಆದುದ್ದರಿಂದ ನಮ್ಮ ಸಿದ್ಧಮನಸ್ಸುಗಳನ್ನು ಬದಲಾಯಿಸಿಕೊಳ್ಳಬೇಕು. ಅದು ಬಿಟ್ಟು ಮಹಾದೇವರನ್ನು ಷೇಕ್ಸ್‌ಪಿಯರ್‌ಗೆ, ಕುವೆಂಪುಗೆ ಹೋಲಿಸಿ ಮಹಾಸಂತನಾಗಿಯೋ, ಮಹಾಋಷಿಯಾಗಿಯೋ ಮಾಡುವುದು ಬೇಡ.

ಮಹಾದೇವ ಜನಸಾಮಾನ್ಯರಲ್ಲಿ, ಜನ ಸಾಮಾನ್ಯರಂತೆ, ಜನತೆಯ ನಾಡಿಮಿಡಿತ ಬಲ್ಲವನಾದ ಜನಪರ ಸಾಹಿತ್ಯವನ್ನು ರಚಿಸಲಿ.

ಓರ್ವ ಕವಿಯಿಂದ ನಾವು ನೀರೀಕ್ಷೆ ಮಾಡುವುದು ತಪ್ಪು ಎನ್ನುವ ಮಾತಿದೆ. ಓರ್ವ ಬರಹಗಾರ social perposeಗಾಗಿ ಬರೆಯುವಲ್ಲಿ, ತನ್ನ ಜನಾಂಗದ ಪ್ರಜ್ಞೆಯನ್ನು ಕುರಿತಂತೆ ಬರೆಯುವಲ್ಲಿ, ಆ ಜನಾಂಗ ಆತನಿಂದ ನೀರೀಕ್ಷಿಸುವುದು ತಪ್ಪಲ್ಲವೆಂದು, ಬರಹಗಾರ ಜನತೆಗಾಗಿ ತನ್ನ ಬರಹ ಇದೆಯೆಂದು ಅಂದುಕೊಂಡರೆ ಸಾಕು.

ಸಂಕ್ರಮಣದಲ್ಲಿ ಚಂಪಾ ಅವರು ಬರೆದ ಲೇಖನಕ್ಕೆ ಪೋಲಂಕಿಯವರು ಉತ್ತರದ ರೀತಿಯ ತಮ್ಮ ಲೇಖನದಲ್ಲಿ ಹೊಟ್ಟೆಯೊಳಗಿದ್ದ ಕಿಚ್ಚನ್ನು ಹೊರಗೆಡಹಿದ್ದಾರೆ. ಚಂಪಾ ಅವರು ತಮ್ಮ ಲೇಖನದಲ್ಲಿ ಪೋಲಂಕಿಯವರನ್ನು ತಮ್ಮದೇ ಆದ ಭಾಷೆಯಲ್ಲಿ ಲೇವಡಿ ಮಾಡಿದ್ದಾರೆ. ಅದಕ್ಕೆ ಕಡಿಮೆ ಇಲ್ಲದ ರೀತಿಯಲ್ಲಿ ಪೋಲಂಕಿಯವರು ಅವರನ್ನು ಟೀಕಿಸಿದ್ದಾರೆ. ಈ ಲೇಖನದ ಉದ್ದೇಶ ಚಂಪಾ ಅವರನ್ನು ಕುಟುಕುವುದೇ ಎಂಬ ಅನುಮಾನ ಬರುತ್ತದೆ. ದೇಮ ಅವರು ಶೂದ್ರದಲ್ಲಿ ಚಂಪಾ ಅವರಿಗೆ ಒಂದು ಪ್ರೇಮ ಪತ್ರವನ್ನು ಬರೆದಿದ್ದಾರೆ. ಇಡೀ ಪತ್ರದಲ್ಲಿ ಸೂಕ್ಷ್ಮವಾಗಿ ಚಂಪಾ ಅವರ ಸಂಕ್ರಮಣದ ಲೇಖನಕ್ಕೆ ಉತ್ತರವನ್ನು, ಸಮಜಾಯಿಸಿಯನ್ನು ಪೋಲಂಕಿಯವರ ಮಿತಿಯನ್ನು, ಲಂಕೇಶರ ಸತ್ಯ ಹೇಳುವ ಧೈರ್ಯವನ್ನು ತಮ್ಮದೇ ರೀತಿಯಲ್ಲಿ ತಿಳಿಸಿದ್ದಾರೆ. ಚಂಪಾ ಅವರ ಬರಹದಿಂದ ತಮಗಾದ hurtನ್ನು point-out ಮಾಡಿದ್ದಾರೆ. ಇವೆಲ್ಲವನ್ನು ನೋಡಿದರೆ ಇವರುಗಳಿಗೆ ಜನಪರ ಸಾಹಿತ್ಯದ ಬಗೆಗೆ ಗಂಭೀರ ಕಾಳಜಿಗಳಿಲ್ಲ ಎಂದು ಕಾಣುತ್ತದೆ. ವ್ಯಕ್ತಿಗತ ಪ್ರತಿಷ್ಠೆಗಳೇ ಇಲ್ಲಿ ಪ್ರಧಾನವಾಗಿವೆ.* ಏನು ಬರೆದರು ಓದುವ ನಮ್ಮಂತಹ ಯುವಕರಿರುವಾಗ ನಾವುಗಳು ಇವುಗಳಿಂದ ದಾರಿ ತಪ್ಪದೇ ನಮ್ಮದೇ ಮಾನದಂಡ ಮತ್ತು ಗಂಭೀರ ಚಿಂತನೆಗಳಿಂದ ಆಲೋಚಿಸಬೇಕು.

---

*ಆರೋಪ ಪ್ರತ್ಯಾರೋಪಗಳಿಂದಲೇ ತಮ್ಮ ವ್ಯಕ್ತಿಗತ ನಿಲುವುಗಳಲ್ಲೇ ಭದ್ರವಾಗಿರಲು ಯತ್ನಿಸಿದಂತಿದೆ, ಅದರಾಚೆಗೆ ಜನತೆಯ ಪರವಾಗಿ ಜನತಾ ಹೋರಾಟಕ್ಕೆ ಪೂರಕವಾಗುವಂತಹ ಆಲೋಚನೆಗಳನ್ನು ಬೆಳಸುತ್ತಿಲ್ಲ. ಮಡುಗಟ್ಟಿದ ನೀರು ವಾಸನೆ ಬರುವಂತೆ ಅವರವರ ಮನಸ್ಸಿನ ಕೊಳಕನ್ನು ಇದು ತೋರಿಸುತ್ತದೆ.

—ಹೆಬ್ಬಾಲೆ ಲಿಂಗರಾಜು

ಕನ್ನಡ ಉಪನ್ಯಾಸಕ,
ಸರ್ಕಾರಿ ಪದವಿಪೂರ್ವ ಕಾಲೇಜು
ರಾಮನಗರಂ
ಬೆಂಗಳೂರು ಗ್ರಾಮಾಂತರಜಿಲ್ಲೆ.

ಅನುಪಮಾ ನಿರಂಜನ ಅವರ ಕಾದಂಬರಿಗಳು: ಒಂದು ವಿವೇಚನೆ

—ಡಾ॥ ವಿಜಯಶ್ರೀ ಸಬರದ

ಅನುಪಮಾ ಬದುಕುವುದಕ್ಕಾಗಿ ಸಾಹಿತ್ಯ ರಚಿಸಲಿಲ್ಲ. ಸಾಹಿತ್ಯ ರಚಿಸುವುದಕ್ಕೆ ಬದುಕಿದ್ದು ಅವರ ಬದುಕೇ ಬರಹವಾಗಿತ್ತು. ಅನುಪಮಾ ವೃತ್ತಿಯಲ್ಲಿ ವೈದ್ಯರಾಗಿದ್ದರು ಪ್ರವೃತ್ತಿಯಲ್ಲಿ ಸಾಹಿತಿಯಾಗಿ, ಸಾಹಿತ್ಯದಲ್ಲಿ ಹೆಮ್ಮರವಾಗಿ ಬೆಳೆದು ನಿಂತರು. ಕಥೆ, ಕಾದಂಬರಿ, ಮಕ್ಕಳ ಸಾಹಿತ್ಯ, ವೈದ್ಯಕೀಯ ಸಾಹಿತ್ಯಗಳಲ್ಲಿ ಅವರು ೬೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಮೋಡಿ ಹಾಕುವ ಬರವಣಿಗೆ ಅವರದು. ತಡವರಿಸದೆ ಓದಿಸಿಕೊಳ್ಳುವ ಗುಣ ಅವರ ಎಲ್ಲ ಕೃತಿಗಳ ವೈಶಿಷ್ಟ್ಯ.

ಕನ್ನಡದಲ್ಲಿ ಸತ್ವಯುತವಾಗಿ ಬರೆಯುತ್ತಲೇ ಜನಪ್ರಿಯತೆ ಪಡೆದ ಕಾದಂಬರಿಕಾರರ ಒಂದು ಪರಂಪರೆಯಿದೆ. ಕುವೆಂಪು, ಕಾರಂತ, ಕಟ್ಟೀಮನಿ, ನಿರಂಜನ, ತ.ರಾ.ಸು, ಭೈರಪ್ಪ ಇವರೆಲ್ಲ ಕನ್ನಡದ ಸತ್ವಯುತ ಕಾದಂಬರಿಕಾರರು, ಜತೆಗೆ ಇವರೆಲ್ಲಾ ಕನ್ನಡದ ಓದುಗರಿಗೆ ಚಿರಪರಿಚಿತರು. ಈ ಸಾಲಿಗೆ ಸೇರುವ ಮತ್ತೊಂದು ಹೆಸರು ಡಾ. ಅನುಪಮಾ ನಿರಂಜನ. ಕನ್ನಡ ಕಾದಂಬರಿಕಾರರಲ್ಲಿ ಡಾ. ಅನುಪಮಾ ನಿರಂಜನ ಅವರದು ಬಹಳ ಜನಜನಿತ ಹೆಸರು. ವಸ್ತುನಿಷ್ಠವಾಗಿ ವಿಶ್ಲೇಷಿಸುತ್ತಾ, ವೈಚಾರಿಕವಾಗಿ ಆಲೋಚಿಸುತ್ತಾ ಬದುಕಿನ ದಟ್ಟ ಅನುಭವಗಳನ್ನು ಅವರ ಕಾದಂಬರಿಗಳು ಕಟ್ಟಿಕೊಡುತ್ತವೆ. ಸರಳ ನಿರೂಪಣೆ, ಸ್ಪಷ್ಟ ಆಲೋಚನೆ ಅವರ ಕಾದಂಬರಿಗಳ ಪ್ರಮುಖ ಆಕರ್ಷಣೆಗಳಾಗಿವೆ. ಬದುಕಿನ ಅನೇಕ ಮಹತ್ವದ ವಿಷಯಗಳು ಅಲ್ಲಿ ಹಾಸುಹೊಕ್ಕಾಗಿವೆ.

ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತಾ ಬಂಡಾಯದ ಆಶಯಗಳನ್ನು ಹುಟ್ಟುಹಾಕುತ್ತಾ ಕಲಾತ್ಮಕವಾಗಿ ಅರಳುವ ಬದುಕಿನ ಅನೇಕ ನೋವು–ನಲಿವಿನ ಸಂಗತಿಗಳು, ಶೋಷಣೆಯ ವಿವಿಧ ಮುಖಗಳು, ಮೌಢ್ಯತೆಯ ವಿವರಗಳು ಅವರ ಕಾದಂಬರಿಗಳಲ್ಲಿ ಸ್ಫೋಟಗೊಳ್ಳುವದರಿಂದ ಅನುಪಮಾ ಪ್ರಮುಖ ಲೇಖಕಿಯಾಗಿ ಗಮನ ಸೆಳೆಯುತ್ತಾರೆ.

ಕನ್ನಡದ ಲೇಖಕಿಯರಲ್ಲಿ ವಾಣಿ, ಎಂ. ಕೆ. ಇಂದಿರಾ ಮತ್ತು ತ್ರಿವೇಣಿ ಅವರ ನಂತರ ಅನುಪಮಾ ಅವರದೇ ದೊಡ್ಡ ಹೆಸರು. ವಾಣಿ—ಎಂ. ಕೆ. ಇಂದಿರಾ—ತ್ರಿವೇಣಿ ಅವರು ನಿಂತ ಹಂತದಿಂದ ಅನುಪಮಾ ಅವರ ಬೆಳವಣಿಗೆ ಪ್ರಾರಂಭವಾಗುತ್ತದೆ. ವಾಣಿ—ತ್ರಿವೇಣಿಯವರ ಕೃತಿಗಳಲ್ಲಿ ಮಹಿಳೆಯರ ಬದುಕನ್ನು ಕುರಿತು

ವಿಶ್ಲೇಷಿಸುವ, ಮಾನಸಿಕ ಯಾತನೆಯಿಂದ ನರಳುತ್ತಿರುವ ಮಹಿಳೆಯರ ಬಗೆಗೆ ಆಲೋಚಿಸಲು ಹಚ್ಚುವ ರೀತಿ ಕಂಡು ಬಂದರೆ ಅನುಪಮಾ ಅವರ ಕಾದಂಬರಿಗಳಲ್ಲಿ ಮಹಿಳೆ ಸಮಾನತೆಗಾಗಿ ಹೋರಾಡುವ, ವೈಜ್ಞಾನಿಕವಾಗಿ ಬಾಳುವ ಹೊಸ ಆಶಯಗಳಿವೆ. ಲೇಖಕಿಯ ಮೊದಲು ಕೃತಿಗಳಲ್ಲಿ ಮಹಿಳೆಯರ ಬದುಕನ್ನು ಕಟ್ಟುವ ಕಾರ್ಯ ನಡೆದಿದ್ದರೆ, ನಂತರದ ಕೃತಿಗಳಲ್ಲಿ ಅಸಮಾನತೆಯನ್ನು, ಮಹಿಳೆ—ಪುರುಷರೆಂಬ ಭೇದವನ್ನು ಕೆದಕುವ ಕಾರ್ಯ ನಡೆದಿದೆ. ಹೀಗೆ ಅಸಮಾನತೆಯನ್ನು ಕೆದಕುವುದರಿಂದ, ಅನ್ಯಾಯವನ್ನು ಪ್ರತಿಭಟಿಸುವುದರಿಂದ ಅನುಪಮಾ ವಿಶಿಷ್ಟವಾಗಿ ಕಾಣುತ್ತಾರೆ.

ಕನ್ನಡ ಸಾಹಿತ್ಯದಲ್ಲಿ ಮೊದಲ ಬಾರಿಗೆ ವೈಚಾರಿಕ ನೆಲೆಯನ್ನೊದಗಿಸಿದ ಲೇಖಕಿಯರಲ್ಲಿ ಅನುಪಮಾ ಅವರದು ಪ್ರಥಮ ಹೆಸರು. ಮಹಿಳೆಯೂ ಕೂಡ ಪುರುಷನಷ್ಟೇ ಸಮರ್ಥಳಾಗಿ ಬರೆಯಬಲ್ಲಳೆಂಬುದನ್ನು ಅವರ ಕೃತಿಗಳ ಅಧ್ಯಯನದ ಮೂಲಕ ಕಂಡುಕೊಳ್ಳಬಹುದು.

ಆಧುನಿಕ ಕನ್ನಡ ಸಾಹಿತ್ಯದ ಚಳುವಳಿಗಳಾದಂತಹ ಪ್ರಗತಿಶೀಲ ಚಳುವಳಿ, ನವ್ಯ-ನವ್ಯೋದಯ, ದಲಿತ-ಬಂಡಾಯ—ಈ ಚಳುವಳಿಗಳ ಸಂದರ್ಭದಲ್ಲಿ ಅನುಪಮಾ ಅವರು ಬದುಕಿದ್ದರು. ಯಾವ ಪಂಥಕ್ಕೂ ಸೇರದೆ ಎಲ್ಲಾ ಪಂಥದ ತಾತ್ವಿಕ ನಿಲುವುಗಳನ್ನು ತಿಳಿದುಕೊಳ್ಳುವುದರೊಂದಿಗೆ, ತಮ್ಮ ಬದುಕಿನ ಅನುಭವಗಳನ್ನು ಸರಳವಾಗಿ ಸ್ಪಷ್ಟವಾಗಿ ವೈಚಾರಿಕವಾಗಿ ವಸ್ತುನಿಷ್ಠವಾಗಿ ಅಭಿವ್ಯಕ್ತಿಸಿ, ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಒಂದು ಹೊಸ ಆಯಾಮ ಕಲ್ಪಿಸಿಕೊಟ್ಟರು. ಪ್ರಗತಿಶೀಲರ ಪ್ರಗತಿಪರ ಧೋರಣೆ ಮತ್ತು ಬಂಡಾಯ ಮನೋಭಾವ ಹಾಗೂ ನವ್ಯರ ಆತ್ಮಶೋಧನೆ ಮತ್ತು ಕಲಾತ್ಮಕತೆ, ಈ ಎರಡೂ ಗುಣಗಳು ಡಾ. ಅನುಪಮಾ ಅವರ ಕಾದಂಬರಿಗಳಲ್ಲಿ ಮೇಳೈಸಿವೆ.

ಬಡತನದ ಮನೆತನದಲ್ಲಿ ಬೆಳೆದ ಅನುಪಮಾ ಅವರು ಬಡತನದಲ್ಲಿಯೇ ಬೆಳೆದು ಬಂದ ನಿರಂಜನ ಅವರನ್ನು ಅಂತರ್ಜಾತಿ ಮದುವೆಯಾಗಿ ಪ್ರತಿಭಟನೆಯನ್ನು ಬದುಕಿನಲ್ಲಿ ಪ್ರಾರಂಭಿಸಿ—ಬರಹದಲ್ಲಿ ತೋರಿಸಿಕೊಟ್ಟವರು. ಹೀಗಾಗಿ ಈ ಲೇಖಕಿಯ ಬದುಕು—ಬರಹಗಳಲ್ಲಿ ಸಾಮರಸ್ಯದ ಸಂಬಂಧವಿದೆ. ತಾನು ನಂಬಿದ ತತ್ವಗಳಿಗೆ ತಕ್ಕಂತೆ ಅವರು ಬದುಕನ್ನು ರೂಪಿಸಿಕೊಳ್ಳುತ್ತಾರೆ. ಶತಮಾನದ ಸ್ತ್ರೀ ಶೋಷಣೆಯನ್ನು ಕಿತ್ತೊಗೆದು ಬೆಳಕಿನ ಬದುಕಿಗೆ ಹೊಸ ಆಶಯವಾಗಿ ನಿಲ್ಲುತ್ತಾರೆ. ತಣ್ಣನೆಯ ಕ್ರಾಂತಿ, ಅಬ್ಬರವಿಲ್ಲದ ಬಂಡಾಯ, ಸೃಜನಶೀಲ ಮನಸ್ಸು ಇವರ ಕಾದಂಬರಿಗಳಲ್ಲಿ ಕಾಣುವುದಲ್ಲದೆ ಇವರ ನಡೆ ನುಡಿಗಳಲ್ಲಿ ಅದು ಕಾಣುತ್ತದೆ.

ಅನುಪಮಾ ನಿರಂಜನ ಕಾದಂಬರಿಗಳಲ್ಲಿ 'ಮಾಧವಿ'ಯಂತಹ ಪೌರಾಣಿಕ ಕಾದಂಬರಿಯನ್ನು ಹೊರತುಪಡಿಸಿ ಉಳಿದ ಇಪ್ಪತ್ತೊಂದು ಕಾದಂಬರಿಗಳಲ್ಲಿ

ಸಾಮಾಜಿಕ ವಸ್ತುವೇ ಪ್ರಧಾನವಾಗಿದೆ. ಕೊಳಚೆ ಕೊಂಪೆಯ ದಾಸಿಗಳು, ಕಣಿವೆಗೆ ಬಂತು ಬೇಸಿಗೆ, ಘೋಷ, ನೂಲನೇಯ್ದ ಚಿತ್ರ ಮತ್ತು ಎಳೆ —ಈ ಕಾದಂಬರಿಗಳಲ್ಲಿ ಸಾಮಾಜಿಕ ಪ್ರಜ್ಞೆ ದಟ್ಟವಾಗಿದೆ. ಈ ಎಲ್ಲಾ ಕಾದಂಬರಿಗಳಲ್ಲಿ ಸಾಮಾಜಿಕ ಮೌಲ್ಯಗಳ ಹುಡುಕಾಟವಿದೆ, ಶ್ರೇಣೀಕೃತ ಸಮಾಜದ ಚೌಕಟ್ಟುಗಳನ್ನು ಮುರಿದು ಮುಂದೆ ಸಾಗಬಲ್ಲ ಹೊಸ ಆಶಯಗಳ ಸೃಷ್ಟಿ ಇದೆ. ಅನುಪಮಾ ನಿರಂಜನ ಅವರ ಕಾದಂಬರಿಗಳು ಕೇವಲ ಕುಟುಂಬ ಜೀವನದ ವಸ್ತುವಿಗೆ ಮಾತ್ರ ಸೀಮಿತಗೊಳ್ಳದೆ ಸಾಮಾಜಿಕ ಜೀವನದತ್ತ ಅಲ್ಲಿಯ ಜ್ವಲಂತ ಸಮಸ್ಯೆಗಳತ್ತ ಗಮನ ಹರಿಸಿವೆ. 'ಕೊಳಚೆ ಕೊಂಪೆಯ ದಾಸಿಗಳು' ಕೊಳಚೆ ಪ್ರದೇಶದ ಜನತೆಯ ಬದುಕು ಮತ್ತು ಹೋರಾಟಗಳನ್ನು ಕುರಿತು ಹೇಳುವ ಈ ಕಾದಂಬರಿ ಶತಮಾನಗಳಿಂದ ಶೋಷಿತರಾದ ದಲಿತರ ಬಡವರ ಚಿತ್ರಣವಿದೆ. ಅಮಾಯಕ ಜನರ ಮೌಢ್ಯತೆ, ಸಿಟ್ಟು, ಕಾಮ, ಬಡತನ, ರೋಷ, ಹೋರಾಟ, ಹಸಿವು—ನೋವುಗಳು ಕಾದಂಬರಿಯ ಬೆಳಕಿನಲ್ಲಿ ಸ್ಫೋಟಗೊಂಡಿವೆ. ಕಣಿವೆಗೆ ಬಂತು ಬೇಸಿಗೆ ಕಾದಂಬರಿಯಲ್ಲಿ ಬಡತನದಲ್ಲಿ ನರಳುತ್ತಿದ್ದರೂ ಸ್ವಾಭಿಮಾನದಿಂದ ಬಾಳಲೆತ್ನಿಸಿದ ಜಯಾ ಈ ಸಮಾಜದ ದುಡಿವ ವರ್ಗದ ಮಹಿಳೆಯರ ಸಂಕೇತವಾಗಿ ಕಾಣುತ್ತಾಳೆ. ಈ ಕಾದಂಬರಿಯಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಸಿಡಿದೇಳಲಾರದೆ ಕ್ರೂರ ವ್ಯವಸ್ಥೆಯಿಂದಲೇ ದೂರ ಹೊರಟು ಹೋಗುವ ಬಡವರ ಗೋಳಿನ ಚಿತ್ರಣವಿದೆ. ಘೋಷ, ನೂಲುನೇಯ್ದ ಚಿತ್ರ ಮತ್ತು ಎಳೆ ಈ ಕಾದಂಬರಿಗಳಲ್ಲಿಯೂ ಸಾಮಾಜಿಕ ಪ್ರಜ್ಞೆ ದಟ್ಟವಾಗಿ ಮೂಡಿದೆ.

ಮಾನವೀಯ ಸಂಬಂಧಗಳು ಬಿರುಕು ಬಿಡಲು ಅಂತಸ್ತು, ಅಧಿಕಾರ ಅಹಂಭಾವ, ಕಾಮ ಇತ್ಯಾದಿಗಳೆಲ್ಲಾ ಕಾರಣವಾಗುತ್ತವೆ. ಇಂಥ ಸಂಬಂಧಗಳ ಸೂಕ್ಷ್ಮ ಎಳೆಗಳನ್ನು ಲೇಖಕಿ ತಮ್ಮ ಕಾದಂಬರಿಗಳಲ್ಲಿ ಬಹಳ ಪರಿಣಾಮಕಾರಿಯಾಗಿ ಬಿಡಿಸಿದ್ದಾರೆ. ಮಾನವ ಸಂಬಂಧ ನಿರೂಪಣೆ ಅನುಪಮಾ ಅವರ ಕಾದಂಬರಿಗಳ ವೈಶಿಷ್ಟ್ಯವಾಗಿದೆ. ಅನಂತಗೀತ, ಸಂಕೋಲೆಯೊಳಗಿಂದ, ನೂಲುನೇಯ್ದ ಚಿತ್ರ, ಹಿಮದ ಹೂ, ಸ್ನೇಹ ಪಲ್ಲವಿ, ಹೃದಯ ವಲ್ಲಭ, ಋಣ, ಮೂಡಣ ಪಡುವಣ, ಚಿತ್ತಮೋಹನ, ಮುಕ್ತಿ ಈ ಮುಂತಾದ ಕಾದಂಬರಿಗಳಲ್ಲಿ ಮಾನವೀಯ ಸಂಬಂಧಗಳು ಗರಿಗೆದರಿ ಬೆಳೆದಿವೆ. ಶತಮಾನಗಳ ಮಾನವನ ಚರಿತ್ರೆಗೆ ಪ್ರೀತಿ ಸ್ನೇಹದಂತಹ ಮೌಲ್ಯಗಳು ಹೇಗೆ ಬೆಳಕು ಮೂಡಿಸುತ್ತಾ ಬಂದಿವೆಯೆಂಬುದನ್ನು ಅನಂತಗೀತ ಕಾದಂಬರಿ ಪರೋಕ್ಷವಾಗಿ ಹೇಳುತ್ತದೆ. ಚಿರಂತನ ಮೌಲ್ಯಗಳಾದ ಪ್ರೀತಿ ಸ್ನೇಹಗಳೇ ಮನುಷ್ಯ ಬದುಕನ್ನು ಇದುವರೆಗೆ ಹಸಿರಾಗಿಸಿಬಿಟ್ಟಿವೆಯೆಂಬ ಸತ್ಯ ಅನುಪಮಾ ಅವರ ಅನೇಕ ಕಾದಂಬರಿಗಳಲ್ಲಿನ ವಿವರಣೆಯ ಮುಖಾಂತರ ಸ್ಪಷ್ಟವಾಗುತ್ತದೆ. 'ಸಂಕೋಲೆಯೊಳಗಿಂದ' ಕಾದಂಬರಿಯಲ್ಲಿ ವಿಜಯಾ ಸಂಕೋಲೆಯೊಳಗೆ ನರಳಿ ಸಾಯುವುದು, ಗಂಡನ ರೋಗಗಳನ್ನು ಹಚ್ಚಿಕೊಂಡು ಯಮಯಾತನೆ ಅನುಭವಿಸುವುದು ಇಡೀ ಸಮಾಜ ವ್ಯವಸ್ಥೆಯಲ್ಲಿ ಬೇರು ಬಿಟ್ಟಿರುವ ಪತಿಯೇ

ಪ್ರಧಾನ ಎಂಬ ಪುರುಷ ಸಂಸ್ಕೃತಿಯ ಕರಾಳ ಸ್ವರೂಪವನ್ನು ಬಯಲು ಮಾಡುತ್ತದೆ. ಒಂದು ಸಮಾಜ ವ್ಯವಸ್ಥೆ ಆರೋಗ್ಯದಿಂದ ಬೆಳೆದು ನಿಲ್ಲಬೇಕಾದರೆ ಆ ಸಮಾಜದಲ್ಲಿರುವ ಜನ ಸಮೂಹದ ಸಂಬಂಧಗಳು ಸೌಹಾರ್ದಯುತವಾಗಿರಬೇಕಾಗುತ್ತದೆ. ಅಂದಾಗಲೇ ಸಮಾಜದ ಬೆಳವಣಿಗೆ ಸಾಧ್ಯ. ಅದ್ದರಿಂದ ಹೋರಾಟ ಕ್ರಾಂತಿಗಳಷ್ಟು ಮುಖ್ಯವೋ ಮಾನವೀಯ ಸಂಬಂಧಗಳ ಸೂಕ್ಷ್ಮ ವಿಶ್ಲೇಷಣೆ, ಹೊಸ ಮನಸ್ಸುಗಳ ಹುಡುಕಾಟ ಕೂಡಾ ಅಷ್ಟೇ ಮುಖ್ಯವಾಗಿದೆ. ಈ ದೃಷ್ಟಿಯಿಂದ ಈ ಎಲ್ಲಾ ಕಾದಂಬರಿಗಳು ಗಮನ ಸೆಳೆಯುತ್ತವೆ. ಈ ಸಮಾಜ ವ್ಯವಸ್ಥೆಯ ರೀತಿ—ನೀತಿಗಳು, ಈ ಸಂಸ್ಕೃತಿಯ ವಿಕೃತಗಳು ಹೇಗೆ ಮಾನವ ಸಂಬಂಧಗಳ ಬೆಳವಣಿಗೆಗೆ ಮತ್ತು ವಿನಾಶಕ್ಕೆ ಕಾರಣವಾಗುತ್ತವೆಂಬುದನ್ನು ಇವರ ಹಲವಾರು ಕಾದಂಬರಿಗಳಲ್ಲಿ ಕಾಣಬಹುದಾಗಿದೆ.

ಕನ್ನಡ ಸಾಹಿತ್ಯದಲ್ಲಿ ಒಂದು ಆಶಯವಾಗಿ ಮೂಡಿಬಂದಿರುವ 'ಬಂಡಾಯ' ಈಗ ಒಂದು ಮೌಲ್ಯವಾಗಿ ಬೆಳೆಯುತೊಡಗಿದೆ. ಬಂಡಾಯ ಸಂಘಟನೆಯ ಸಂಕ್ರಮಣ ಕಾಲದಲ್ಲಿ ಬಂದ ಅವರ 'ಮಾಧವಿ', ಬಂಡಾಯ ಸಂಘಟನೆ ಹುಟ್ಟಿದ ನಂತರ ಬಂದ ಅವರ ಏಳಿ, ಮುಕ್ತಿಚಿತ್ರ, ಘೋಷ, ಆಳ ಈ ಮುಂತಾದ ಕಾದಂಬರಿ ಪಾತ್ರಗಳಲ್ಲಿ ಬಂಡಾಯ ಮನೋಭಾವನೆ ಎದ್ದು ಕಾಣುತ್ತದೆ. 'ಮಾಧವಿ' ಕಾದಂಬರಿಯ ಪಾತ್ರ 'ಮಾಧವಿ'ಯ ಬಂಡಾಯ ಒಂದು ರೀತಿಯ ಮೌನ ಪ್ರತಿಭಟನೆಯಾದರೆ 'ಆಳ' ಕಾದಂಬರಿಯಲ್ಲಿ ಮಾಲಿನಿಯ ಬಂಡಾಯ ಸ್ಪಷ್ಟ ತೀರ್ಮಾನವಾಗಿದೆ. ಈ ಬಂಡಾಯ ಮನೋಭಾವವನ್ನು ನಿರೂಪಿಸುವಲ್ಲಿಯೂ ಕೂಡ ಲೇಖಕಿ ಕಾದಂಬರಿಯಿಂದ ಕಾದಂಬರಿಗೆ ಬೆಳೆಯುತ್ತಾ ಹೋಗಿರುವುದು ಕಂಡು ಬರುತ್ತದೆ. 'ಮುಕ್ತಿಚಿತ್ರ' ಅನುಪಮಾ ಅವರ ವಿಶಿಷ್ಟ ಬಗೆಯ ಬಂಡಾಯ ಮನೋಭಾವದ ಪ್ರಮುಖ ಕಾದಂಬರಿ. ಮುದುಕಿಯಿಂದಲೇ ಬಂಡಾಯದ ಕಿಡಿ ಚಿಗುರುವುದು ಈ ಕಾದಂಬರಿಯ ವೈಶಿಷ್ಟ್ಯವಾಗಿದೆ. ಜಾನಕಿಯಂತಹ ಸಹಸ್ರಾರು ಮುದುಕಿಯರಿಗೆ ಮಾತು ಬರಬೇಕಾದದ್ದು, ಅವರೆಲ್ಲಾ ಮೌನದ ಚಿಪ್ಪು ಒಡೆದು ಪ್ರತಿಭಟಿಸಬೇಕಾದದ್ದು, ಸಮಾನತೆಯ ಹಕ್ಕು ಕೇಳಬೇಕಾದದ್ದು, ಹಾಗೂ ಅನಿವಾರ್ಯ ಮತ್ತು ಔಚಿತ್ಯವೆಂಬುದನ್ನು ಲೇಖಕಿ ಸೊಗಸಾಗಿ ನಿರೂಪಿಸುತ್ತಾರೆ. ನಿಜವಾದ ಬಂಡಾಯ, ವರ್ಗ ಸಂಘರ್ಷಕ್ಕೆ ಹಚ್ಚುತ್ತದೆ ಮತ್ತು ನಿಜವಾದ ಸಮಾನತೆಯನ್ನು ಬಯಸುತ್ತದೆ. ಮುಖ್ಯವಾಗಿ ಮಾನವೀಯತೆಯನ್ನು ಹುಟ್ಟು ಹಾಕುತ್ತದೆ. [illegible] ಸಮಾಜದಲ್ಲಿ ಹೃದಯವಂತಿಕೆಯನ್ನು ಬೆಳೆಸುತ್ತದೆ. ಬಂಡಾಯವೆಂದರೆ ಕೇವಲ ಸಿಟ್ಟಲ್ಲ—ಸೇಡಲ್ಲ. ಸಿಟ್ಟನ್ನು ಮೀರಿದ ಸಹನೆ, ಸೇಡನ್ನು ಮೀರಿದ ಮಾನವೀಯತೆ ನಿಜವಾದ ಬಂಡಾಯ ಹೋರಾಟ—ಪ್ರತಿಭಟನೆಯನ್ನು, ವಿಮರ್ಶೆ—ಸ್ವವಿಮರ್ಶೆಯನ್ನು ಜತೆ-

ಜತೆಯಾಗಿಯೇ ಮಾಡುತ್ತದೆ. ಅನುಪಮಾ ಅವರ ಕಾದಂಬರಿಗಳಲ್ಲಿ ಬಂಡಾಯ ಮನೋಭಾವ ಮಾನವೀಯ ಅಂತಃಕರಣದೊಂದಿಗೆ ಸ್ಫೋಟಗೊಂಡಿದೆ.

ಡಾ. ಅನುಪಮಾ ನಿರಂಜನ ಅವರು ದಲಿತರ ಬಗೆಗೆ ಬರೆಯುವದಕ್ಕೂ ಅವರೊಂದಿಗೆ ಕಾದಂಬರಿ ರಚಿಸಿದ ಇತರ ಲೇಖಕಿಯರು ದಲಿತರ ಬಗೆಗೆ ಬರೆಯುವ ದಕ್ಕೂ ತುಂಬಾ ವ್ಯತ್ಯಾಸವಿದೆ. ಅವರ ಕಾದಂಬರಿಗಳಲ್ಲಿನ ದಲಿತ ಪಾತ್ರಗಳನ್ನು ಕಂಡಾಗ ಅಂತಃಕರಣ ಮಿಡಿಯುತ್ತದೆ. ದಲಿತರನ್ನು ಕಂಡು ದೂರ ಸರಿಯುವ ಎಂತಹ ಕಠಿಣ ಮನಸ್ಸೂ ಅವರ ಕೃತಿಗಳ ಅಧ್ಯಯನದಿಂದ ಮೃದುವಾಗುತ್ತವೆ. ಉದ್ದೇಶ ಪೂರ್ವಕವಾಗಿ ಲೇಖಕಿ ಯಾವುದೇ ವ್ಯಕ್ತಿ–ಜಾತಿ–ಸಮಾಜವನ್ನು ತಿರಸ್ಕರಿಸದೆ, ಅತ್ಯಂತ ಸಂಯಮದಿಂದ ಮತ್ತು ಕಲಾತ್ಮಕವಾಗಿ ಆಯಾ ವ್ಯಕ್ತಿ-ಜಾತಿ-ಸಮಾಜದ ಚಿತ್ರಣವನ್ನು ಸೈಜ ರೀತಿಯಿಂದ ಬಿಡಿಸುತ್ತಾ ಹೋಗುತ್ತಾರೆ. ಮೊದಲೇ ಒಂದು ಸಿದ್ಧಾಂತದ ಹಣೆಪಟ್ಟಿ ಹಚ್ಚಿಕೊಂಡಾಗಲಿ, ಇಲ್ಲವೆ ಪೂರ್ವಗ್ರಹ ಪೀಡಿತ ದೃಷ್ಟಿ ಯಿಂದಾಗಲಿ ಅವರು ದಲಿತರನ್ನು ನೋಡದೆ, ಮಾನವೀಯತೆಯ ದೃಷ್ಟಿಯಿಂದ ವಾಸ್ತವತೆಯ ತಳಹದಿಯ ಮೇಲೆ ಅಂತಹ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಶೋಷಣೆಗೆ ದಲಿತ–ಬಡವ ಎಂಬ ಭೇದವಿಲ್ಲ. ಸ್ವಾರ್ಥಕ್ಕೆ ಮೇಲು–ಕೀಳೆಂಬ ಭಿನ್ನತೆ ಯಿಲ್ಲ ಎಂಬ ಅಂಶ ಕೊಳಚೆ ಕೊಂಪೆ ದಾನಿಗಳಲ್ಲಿ ಸ್ಪಷ್ಟವಾಗಿದೆ. ಅಂಥೋಣಿ— ಜಾರ್ಜ—ಜಂಪನಬಾಯಿ ಎಲ್ಲರೂ ಬಡವರೇ. ಶತಮಾನಗಳಿಂದ ನೋವುಂಡವರೇ ಆಗಿದ್ದರೂ ಅವರು ತಮ್ಮಲ್ಲೇ ಒಬ್ಬರಿಗೊಬ್ಬರು ಶೋಷಣೆ ಮಾಡುತ್ತಾರೆ. ಜಾತಿ ಯಿಂದ ಮನುಷ್ಯರ ಪ್ರತಿಭೆ ಪ್ರಾಮಾಣಿಕತನವನ್ನು ಅಳೆಯಬಾರದು ಎಂಬುದಕ್ಕೆ 'ಸೇವೆ' ಕಾದಂಬರಿಯಲ್ಲಿ ಉತ್ತರವಿದೆ. ಕನ್ನಡದ ಲೇಖಕಿಯರು ಕೇವಲ ಅಡುಗೆ ಮನೆಯ ಕತೆಗಳನ್ನು ರಚಿಸುವಂತಹ ಸಂದರ್ಭದಲ್ಲಿ ಡಾ. ಅನುಪಮಾ ಅಂತವರಿಂದ 'ಕೊಳಚೆ ಕೊಂಪೆಯ ದಾಸಿಗಳು' ಮತ್ತು 'ಸೇವೆ'ಯಂತಹ ದಲಿತ ಪಾತ್ರ ಪ್ರಧಾನ ಕಾದಂಬರಿಗಳು ಬಂದಿರುವುದು ಗಮನಿಸುವ ಸಂಗತಿಯಾಗಿದೆ.

ಅನುಪಮಾ ಅವರು ಒಬ್ಬ ವೈದ್ಯೆಯಾಗಿ ತಮ್ಮ ವೈದ್ಯಕೀಯ ಅನುಭವಗಳನ್ನು ಕೆಲ ಕಾದಂಬರಿಗಳಲ್ಲಿ ಪರಿಣಾಮಕಾರಿಯಾಗಿ ಹೇಳಿದ್ದಾರೆ. ಅದರ ಜತೆಗೆ ಅವರು ಸಮಾಜ ವಿಜ್ಞಾನಗಳ ಸಂಬಂಧವನ್ನಿಟ್ಟುಕೊಂಡ ಅನೇಕ ಕೃತಿ ರಚಿಸಿದ್ದಾರೆ. ಅವರ ಸಸ್ಯ ಶ್ಯಾಮಲಾ, ಚಿತ್ತಮೋಹನ, ನಟಿ, ಸೇವೆ ಈ ಮೊದಲಾದ ಕಾದಂಬರಿಗಳಲ್ಲಿ ಮನೋವೈಜ್ಞಾನಿಕ ವಿಶ್ಲೇಷಣೆ ಇದೆ. ಈ ದೇಶದ ಮಹಿಳೆ ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಶತಮಾನಗಳಿಂದ ಶೋಷಣೆಗೊಳಗಾಗಿದ್ದರಿಂದ ಆಕೆ ಇನ್ನೂ ಆ ಸೆರೆ ಯಿಂದ ಬಿಡಿಸಿಕೊಂಡು ಬರುವುದು ಸಾಧ್ಯವಾಗಿಲ್ಲದೆಂಬ ಸತ್ಯವನ್ನು ತ್ರಿವೇಣಿ ಮತ್ತು ಅನುಪಮಾ ಅವರು ಸೃಷ್ಟಿಸಿದ ಮಹಿಳಾ ಪಾತ್ರಗಳು ಹೇಳುತ್ತವೆ. ಯಾವ ಪುರುಷ

ಪಾತ್ರವೂ ಹೀಗೆ ಮನೋರೋಗಿಯಾಗಿ ನರಳುವ, ಸೂಕ್ಷ್ಮಭಾವನೆಗಳಲ್ಲಿ ಕರಗಿ ಪರಿ
ತಪಿಸುವ ಚಿತ್ರವನ್ನು ಮಹಿಳಾ ಲೇಖಕಿಯರ ಕೃತಿಗಳಲ್ಲಿ ಕಾಣುವುದು ವಿರಳವಾಗಿದೆ.
ಭಯ ಮತ್ತು ಅಜ್ಞಾನದಿಂದ ಶತಮಾನಗಳಿಂದ ಮೌಢ್ಯತೆಯಲ್ಲಿಯೇ ಉಳಿದ ಮಹಿಳೆ
ಹೆಚ್ಚು ಭಾವುಕಳಾಗಿರುವುದು, ಮತ್ತು ಸಂಕೋಚದ ಸ್ವಭಾವದವಳಾಗಿರುವುದು
ಇದಕೆಲ್ಲಾ ಕಾರಣವೆನಿಸುತ್ತದೆ.

೧೯೭೬ರಲ್ಲಿ ಪ್ರಕಟವಾದ ಅನುಪಮಾ ಅವರ 'ಮಾಧವಿ' ಕಾದಂಬರಿ ಕನ್ನಡ
ದಲ್ಲಿ ವಿಶಿಷ್ಟವಾದ ಕೃತಿ. ಪೌರಾಣಿಕ ವಸ್ತುವನ್ನಾರಿಸಿಕೊಂಡು, ವೈಜ್ಞಾನಿಕ ದೃಷ್ಟಿ
ಕೋನದಿಂದ ವಿಶ್ಲೇಷಿಸುತ್ತಾ ಶತಮಾನಗಳ ಹಿಂದೆ ನಡೆದ ಕಥೆಯ ಪ್ರಸ್ತುತತೆಯನ್ನು
ಕಾದಂಬರಿ ಧ್ವನಿಸುವುದರಿಂದ ಮತ್ತು ವೈಚಾರಿಕತೆಯನ್ನು ಬೆಳಗಿಸುವ ಕಾರಣದಿಂದ
ಈ ಕೃತಿಗೆ ಬಹಳ ಮಹತ್ವವಿದೆ. ಪ್ರಸ್ತುತ ಪ್ರಜಾಪ್ರಭುತ್ವದಲ್ಲಿ ಬಂಡೇಳುವುದು,
ಅನ್ಯಾಯದ ವಿರುದ್ಧ ಪ್ರತಿಭಟಿಸುವುದು ಸಹಜವಾದುದು, ಆದರೆ ಶತಮಾನಗಳ
ಹಿಂದೆ ರಾಜಶಾಹಿ ಸಂಸ್ಕೃತಿಯಲ್ಲಿ ಹುಟ್ಟಿ ಮಹಿಳೆ ಬಂಡಾಯ ಗುಣವನ್ನು ಸ್ಫೋಟಿಸು
ವುದು ಅಂದಿನ ವ್ಯವಸ್ಥೆಯ ಅನೇಕ ಮಿತಿಗಳ ನಡುವೆಯೂ ಆಕೆ ಪ್ರತಿಭಟಿಸಿ ಸಮಾನ
ತೆಯ ದಾರಿ ತೋರಿಸುವುದು ನಿಜಕ್ಕೂ ಮಹತ್ವದ ವಿಷಯವಾಗುತ್ತದೆ. ಈ ಉಪ
ಖಂಡದಲ್ಲಿ ಸ್ತ್ರೀದಾಸ್ಯದ ವಿರುದ್ಧ ಮೊದಲು ಬಂಡೆದ್ದವಳು ಮಾಧವಿ. ಆದರೆ
ಇದು ಕಣ್ಣಿಗೆ ಕುಕ್ಕುವ ರೋಷಪಡಿಸುವ ಬಂಡಾಯವಾಗಿರದೆ, ತಣ್ಣನೆಯ
ಬಂಡಾಯವಾಗಿದೆ. ಇಲ್ಲಿಯ ನಾಯಕಿ ಎಲ್ಲ ಶೋಷಣೆಯನ್ನು ಅನುಭವಿಸಿದ ನಂತರ
ಬಂಡಾಯವೇಳುತ್ತಾಳೆ 'ಮಾಧವಿ' ಎಲ್ಲ ಕಾಲದ ಶೋಷಿತ ಸ್ತ್ರೀಯರ ಪ್ರತಿನಿಧಿ
ಯಾಗಿದ್ದಾಳೆ. ಈ ಕಾದಂಬರಿಯ ಕೇಂದ್ರ ವಸ್ತುವಾಗುತ್ತಲೇ ಇಡೀ ಮಹಿಳಾ
ವಿಮೋಚನೆಯ ಪರಂಪರೆಯೊಂದನ್ನು ಮಾಧವಿ ಕಟ್ಟಿಕೊಡುತ್ತಾಳೆ.

ಅನುಪಮಾ ಅವರ ಕಾದಂಬರಿಗಳಲ್ಲಿ ಪುರುಷ ಪಾತ್ರಗಳಿಗಿಂತ ಸ್ತ್ರೀ ಪಾತ್ರಗಳೇ
ಹೆಚ್ಚು ಗಮನಾರ್ಹವಾಗಿವೆ. ಕನ್ನಡ ಕಾದಂಬರಿಕ್ಷೇತ್ರ ಬರೀ ನಾಯಕ ಪ್ರಧಾನ
ಕಾದಂಬರಿಗಳನ್ನೇ ಹೊಂದಿದ್ದಾಗ, ಅನುಪಮಾ ಅವರಂತಹ ಲೇಖಕಿಯರ ಪ್ರವೇಶ
ದಿಂದ ನಾಯಿಕಿ ಪ್ರಧಾನ ಕಾದಂಬರಿಗಳು ಹೊರಬರಲು ಸಾಧ್ಯವಾಯಿತು. ಇವರ
ನಾಯಿಕಿ ಪ್ರಧಾನ ಕಾದಂಬರಿಗಳು ಹೆಚ್ಚು ವಿವೇಚನಾತ್ಮಕವಾಗಿ, ವೈಚಾರಿಕವಾಗಿ,
ಬೆಳೆಯುತ್ತಾ, ಬಂಡಾಯ ಮನೋಧರ್ಮವನ್ನು ಳವಡಿಸಿಕೊಂಡಿವೆ. ಹೀಗಾಗಿ ಇವರ
ಸ್ತ್ರೀ ಪಾತ್ರಗಳು ಹೆಚ್ಚು ಗಮನ ಸೆಳೆಯುತ್ತವೆ.

ಹೀಗೆ ಡಾ. ಅನುಪಮಾ ನಿರಂಜನ ಅವರದು ಕನ್ನಡದಲ್ಲಿ ಗಮನ ಸೆಳೆಯುವ
ಸಾಹಿತ್ಯ. ಸೋಲಿನ ಮಡುವಿನ ನಡುವೆಯೂ ಎದ್ದು ಕಾಣುವ ಅವರ
ಜೀವನೋತ್ಸಾಹ ಬೆರಗುಗೊಳಿಸುವಂಥದು. ನೋವು ಮತ್ತು ನಲಿವನ್ನು ಸಮಾನವಾ

ವಾಗಿ ತೆಗೆದುಕೊಳ್ಳುತ್ತಾ ಬದುಕಿನ ದಟ್ಟ ಅನುಭವಗಳನ್ನು ಅನುಪಮಾ ಅವರು ತಮ್ಮ ಕೃತಿಗಳಲ್ಲಿ ಪ್ರಾಮಾಣಿಕವಾಗಿ ಮತ್ತು ನಮ್ರತೆಯಿಂದ ದಾಖಲಿಸಿದ್ದಾರೆ. ಅನುಪಮಾ ಅವರು ಯಾವುದೇ ರಿಯಾಯತಿಯಿಂದ ಮುಂದೆ ಬಂದವರಲ್ಲ. ಮಹಿಳಾ ಸಾಹಿತಿಯೆಂಬ ರಿಯಾಯತಿ ಇವರಿಗೆ ಅನ್ವಯವಾಗುವುದಿಲ್ಲ. ಕನ್ನಡದ ಒಬ್ಬ ಪ್ರಮುಖ ಸಾಹಿತಿಯಾಗುತ್ತಲೇ ಮಹಿಳೆಯರ ಅನೇಕ ಸಮಸ್ಯೆಗಳಿಗೆ ಇವರು ತಮ್ಮ ಕೃತಿಗಳಲ್ಲಿ ಕಲಾತ್ಮಕ ರೀತಿಯಿಂದ ಉತ್ತರ ನೀಡಿದ್ದಾರೆ. ವಸ್ತು–ಧೋರಣೆ–ಆಶಯಗಳ ದೃಷ್ಟಿಯಿಂದ ಕನ್ನಡಕ್ಕೆ ಅನುಪಮಾ ಅವರ ಕೊಡುಗೆ ವಿಶಿಷ್ಟವಾದುದು.

ಭಾರತೀಯ ಲೇಖಕಿಯರಾದ ಮಾಧವಿ ಕುಟ್ಟಿ, ಅಮೃತಾ ಪ್ರೀತಂ, ಮಹಾದೇವಿವರ್ಮಾ ಈ ಮುಂತಾದವರೊಡನೆ ಅನುಪಮಾ ನಿರಂಜನರನ್ನೂ ಹೆಸರಿಸಬಹುದಾಗಿದೆ. ಅನೇಕ ಚಳುವಳಿಗಳಲ್ಲಿ ಭಾಗವಹಿಸಿ,ಬದುಕಿನ ಅನೇಕ ನೋವುಗಳನ್ನುಂಡು ವೈಚಾರಿಕವಾಗಿ, ವೈಜ್ಞಾನಿಕವಾಗಿ ಬೆಳೆದುನಿಂತ ಸಾಹಿತಿ ಅನುಪಮಾ ಅನೇಕ ಕ್ಷೇತ್ರಗಳಲ್ಲಿ ತಮ್ಮ ಸೇವೆ ಸಲ್ಲಿಸಿದ್ದಾರೆ.

ಆಕ್ಟೋಪಸ್

—'ನೈಷಧಂ'

ತಳಬುಡವಿಲ್ಲದ ಕಾಲಸಾಗರದಲ್ಲಿ
ಕೊನೆ ಮೊದಲಿಲ್ಲದ ಗಾಢತೆಯಡಿಯಲ್ಲಿ
ಬಣ್ಣ ಮಿತಿ ಇಲ್ಲದ ನೀಲಿಯೊಳಗಡೆಯಲ್ಲಿ
ಮುಳುಗಿ ತೇಲುತ್ತೇನೆ. ಇಲ್ಲಿ ನನ್ನ ಬದುಕು.

ಈ ಕಾಲಾಕಾಶದ ಅಮಿತತೆಯಲ್ಲಿ —
ಬೆಳಕು ಬೆಡಗು ನೊರೆಗಡ್ಡೆಗಳಲ್ಲಿ
ಆಸೆ ಆಕಾಂಕ್ಷೆ ನೋವುಗಳಲ್ಲಿ
ಮುಳುಗುತ್ತೇನೆ ತೇಲುತ್ತೇನೆ. ಇದು ನನ್ನ ಬವಣೆ.

ಇಷ್ಟರಲ್ಲೇ ತನ್ನ ಗ್ರಹಣಾಂಗವೆಸೆವುದು ಅಷ್ಟಪಾದಿ,
ಮಿರಮಿರ ನೋಡುವ ಪೈಶಾಚಿಕ ಆಕ್ಟೋಪಸ್.
ಸ್ಪರ್ಶಶೀತಲ, ನನ್ನ ಬೆನ್ನ ಬವಣೆ, ನಲಿವು
ಎಲ್ಲವನ್ನೂ ನುಂಗುವ ಈ ಗ್ರಹಣಾಂಗ ಸ್ಪರ್ಶ. ಇದು ಸಾವು.

ಇಲ್ಲಿ ಪ್ರತಿ ದಿನವೂ ಬದುಕು ಸಾವು. ಆದರೂ
ಕೊನೆಯೊಮ್ಮೆ ಸಾವು ! ಇರವು ಇರಬೇಕು ಹೇಗೆ ?

ದಲಿತ ಬಂಡಾಯ ಕತೆಗಳು : ಹೊಸ ಸಂಸ್ಕೃತಿಯನ್ನು ರೂಪಿಸುತ್ತಾ...

—ಡಾ|| ರಹಮತ್ ತರೀಕೆರೆ

ದಲಿತ-ಬಂಡಾಯ ಪರಿಕಲ್ಪನೆಯ ಅರ್ಥವೇನು, ಈ ಚಳುವಳಿಯ ಪ್ರೇರಣೆಗಳು ಯಾವುವು ಎಂಬ ಚರ್ಚೆಯ ಘಟ್ಟ ಪ್ರಾಯಶಃ ಮುಗಿದಂತಹೋಗಿ, ಅದರಸೃಜನಶೀಲ ಸಾಕ್ಷಿಗಳಾಗಿರುವ ಕತೆ ಕಾವ್ಯವು ಸಕ್ರಿಯ ಹೋರಾಟದ ತುಣುಕುಗಳೂ ಈ ಹತ್ತು-ಹದಿನೈದು ವರುಷಗಳಲ್ಲಿ ಸಾಗಿಬಂದು, ಮೌಲ್ಯಮಾಪನಕ್ಕೆ ನಮ್ಮೆದುರು ನಿಂತಿವೆ. ಬಂಡಾಯ ಚಳುವಳಿಯು ಕಾವ್ಯ-ಪ್ರಧಾನವಾಗಿರುವಂತೆ ಕಂಡರೂ, ಎಂಬತ್ತರ ದಶಕದಲ್ಲಿ ಬಂದ ಕತೆ ಕಾದಂಬರಿಗಳು ಕನ್ನಡಕ್ಕೆ ಹೊಸಸತ್ವವನ್ನು ಸೇರಿಸಲಾರಂಭಿಸಿ ಹಾಗ ಹೊಸ [illegible] ಶುರುಮಾಡಿತು ಮಧ್ಯಮ ವರ್ಗದ, ಶಿಷ್ಟ ಜಾತಿಯ ಲೇಖಕರ ಆಡೊಂಬಲವಾಗಿದ್ದ ಸಣ್ಣಕತೆಯ ಕ್ಷೇತ್ರಕ್ಕೆ ಮೊದಲ ಸಲಕ್ಕೆ ಶಿಕ್ಷಣ ಪಡೆದು ಬಂದ ಗ್ರಾಮೀಣ ಕೆಳಜಾತಿ ವರ್ಗಗಳ, ಅಲ್ಪಸಂಖ್ಯಾತ ಸಮುದಾಯದ ತರುಣ ತಲೆಮಾರು ಕಾಲಿಡುತ್ತಾ, ಹೊಸ ಸಾಂಸ್ಕೃತಿಕ ಚಲನೆಯ ಆಶಯಗಳನ್ನು ಪ್ರಕಟಿಸುತ್ತಿರುವುದು ಸ್ಪಷ್ಟವಾಗಿದೆ. ದಲಿತ ಬಂಡಾಯ ಕತೆಗಳ ಮುಖ್ಯಪಾಲು ನವ್ಯದ ಕೊನೆಯ ಹೊತ್ತಿನಲ್ಲಿ ಬರವಣಿಗೆ ಶುರುಮಾಡಿದ (ಅಲ್ಲಿಂದ ಹೊರಳಿಬಂದ) ಇಂಥದೇ ತುಸು ಹಿಂದಿನ ತಲೆಮಾರಿನಲ್ಲಿದೆ. 'ಹೊರಳಿಕೆಗೆ ಕಾರಣ, ನವ್ಯದ ಅಭಿವ್ಯಕ್ತಿ ವಿಧಾನಗಳು ಮತ್ತು ತಾತ್ವಿಕತೆಯು ಈ ಕತೆಗಾರರ ಅನುಭವ (ಸಾಮಾಜಿಕ ಸ್ತರ) ದೊಂದಿಗೆ ಹೊಂದಾಣಿಕೆಯಾಗದೆ ಸೃಷ್ಟಿಸಿದ ಬಿಕ್ಕಟ್ಟು ಎಂದು ನನಗನಿಸುತ್ತದೆ. ಇದು ಎಪ್ಪತ್ತರ ದಶಕದ ಸಾಮಾಜಿಕ-ರಾಜಕೀಯ ಸಾಂಸ್ಕೃತಿಕ ಸೆಳೆತಗಳೊಂದಿಗೆ ಸಂಬಂಧಿಸಿದೆ. ದೇವರಾಜ ಅರಸರ ಭೂಸುಧಾರಣೆ ಮತ್ತು ಹಾವನೂರು ವರದಿ ಜಾರಿಯಿಂದ ಬಿಡಿದು, ಬೂಸಾ ಪ್ರಕರಣ, ಜಾತಿ ವಿನಾಶ ಸಮ್ಮೇಳನ. ಬರಹಗಾರರ ಕಲಾವಿದರ ಒಕ್ಕೂಟ, ಪ್ರಗತಿಪಂಥದಂಥ ಸಮಾವೇಶಗಳು, ತುರ್ತು ಪರಿಸ್ಥಿತಿ ಒಟ್ಟು ಹಾಕಿದ ಡೆಮಾಕ್ರಟಿಕ್ ಶಕ್ತಿಗಳು, ಸಮುದಾಯ, ದಲಿತ ಸಂಘರ್ಷ ಸಮಿತಿಗಳ ಹುಟ್ಟಿನವರೆಗೆ ಎಲ್ಲಸೇರಿ ಒಂದು ತಾತ್ವಿಕ [illegible] ಮಾಡಿದವು. ಬಂಡಾಯ ಸಾಹಿತ್ಯ ಸಮಾವೇಶ ಇದರ ತಾರ್ಕಿಕ ಅಂತ್ಯ (ಒಂದು ರೀತಿಯಲ್ಲಿ ತಾತ್ವಿಕ ಆರಂಭ) ಆಗಿತ್ತು. ಇದರ ಬಂದೇ [illegible] ಮೂಡಿದ ಎಚ್ಚರ. 'ಬಂಡಾಯ

ಕತೆಗಳ' ಮುನ್ನುಡಿಕಾರರು ಈ ಎಚ್ಚರದ ಬಿಂದುವನ್ನು ೧೯೬೯ರ ಕಾಂಗ್ರೆಸ್ ವಿಭಜನೆಯಿಂದಾದ ಆಳುವ ಶಕ್ತಿಗಳ ಧ್ರುವೀಕರಣ ಮತ್ತು ರಾಜಧನರದ್ದತಿ, ಬ್ಯಾಂಕುಗಳ ರಾಷ್ಟ್ರೀಕರಣದಂಥ ರಾಜಕೀಯ ನಿರ್ಧಾರಗಳ ಮೂಲಕ ಕೆಳವರ್ಗಗಳಲ್ಲಿ ಉಂಟಾದ ಸ್ಪಂದನದ ಹೊತ್ತಿನಿಂದ ಗುರ್ತಿಸುತ್ತಾರೆ. ಚಾರಿತ್ರಿಕವಾದ 'ಹೊಲೆಮಾದಿಗರ ಹಾಡು'ಗೂ ಮುಂಚೆ, 'ದ್ಯಾವನೂರು', 'ಅಬಚೂರಿನ ಪೋಸ್ಟಾಫೀಸು' (೧೯೭೩)ಗಳ ಮೂಲಕ ಈ 'ಜಲಸೆ'ಯ ಹೆಜ್ಜೆಗಳು ಕನ್ನಡ ನೆಲದ ಮೇಲೆ ಬಿದ್ದಿದ್ದವು ಎಂದರೆ ಬಂಡಾಯ ಸಾಹಿತ್ಯದ ಮೊದಲ ಮೊಳಕೆಗಳೊಡೆದಿದ್ದು ಸಣ್ಣಕತೆಯ ಒಡಲಿನಿಂದಲೇ, ಅದರಲ್ಲೂ ಸಾಂಸ್ಕೃತಿಕ ಕಾಳಜಿಗಳು ಸಮುದಾಯದ ಪರವಾಗಿ ಮುಖಮಾಡಬೇಕೆಂದೂ ನವ್ಯದ ಜಡ ತಾಂತ್ರಿಕ ಅಭಿವ್ಯಕ್ತಿ ವಿಧಾನಗಳನ್ನೂ ಹುಸಿ ಕ್ರಾಂತಿಕಾರಿತನವನ್ನೂ ಮಧ್ಯಮ ವರ್ಗದ ಹಿತಾಸಕ್ತಿಗಳನ್ನು ತೊರೆಯಬೇಕೆಂದು ಕಟ್ಟುಮುರಿದಂತೆ ಹೇಳಿದ ತೇಜಸ್ವಿಯವರ ಐತಿಹಾಸಿಕ ಮಹತ್ವದ ಅಬಚೂರಿನಪೋಸ್ಟಾಫೀಸಿನ ಮುನ್ನುಡಿಯು ('ಹೊಸ ದಿಗಂತದೆಡೆಗೆ') ಕೈಮರದಂತಿದೆ. ದುಡಿಮೆಯ ಅನುಭವದೊಡನೆ, ಗ್ರಾಮೀಣ ಜಮೀನ್ದಾರಿ ದಬ್ಬಾಳಿಕೆ, ಜಾತಿ-ಅಸ್ಪೃಶ್ಯತೆಗಳು ನಿರ್ಮಿಸಿರುವ ತಾರತಮ್ಯಗಳ ಸಂವೇದನೆಯುಳ್ಳ, ಕೆಳ ಜಾತಿ/ವರ್ಗಗಳಿಂದ ಬಂದ ಕತೆಗಾರರಿಗೆ ನವ್ಯದ ಪರಿಸರದಲ್ಲಿ ಕಟ್ಟಿದ ಉಸಿರು, 'ನಿರಾಳವಾಗಿ ಆಡುತ್ತಿದೆ' ಅನಿಸುವ ಹೊತ್ತಲ್ಲಿ, ಅಂದರೆ ಸಮಾಜವಾದಿ ಏಪತಾತ್ವಿಕತೆಯೊಂದಿಗೆ ಗುರುತಿಸಿಕೊಂಡು ತಮ್ಮ ಅನುಭವ ಸಂವೇದನೆಗಳಿಗೆ ತಕ್ಕನಾದ ಅಭಿವ್ಯಕ್ತಿಯನ್ನು ಹುಡುಕುತ್ತಿರುವಂತೆಯೇ ಅವರ ಉತ್ತಮಕಥೆಗಳು ಪ್ರಕಟವಾದವು. ದತ್ತ – ಅಮಾಸ (ದೇವನೂರು) ಅವನು ನಪುಂಸಕ – ಕ್ಷಾಮ (ಬರಗೂರು) ಹುಟ್ಟಿದ ಬಟ್ಟೆ – ಮೀನುಗಳು (ನಾಗವಾರ) ಸ್ವರೂಪ – ತಬರನಕತೆ (ತೇಜಸ್ವಿ) ಇವುಗಳು ರಚನೆಯಾದ ಕಾಲಕ್ಕೂ, ಇವುಗಳ ಸಾಹಿತ್ಯಕ–ತಾತ್ವಿಕ ಸ್ವರೂಪಕ್ಕೂ ಇರುವ ಅಂತರವನ್ನು ಗಮನಿಸಬೇಕು. ಹೀಗನ್ನುವಾಗ ನವ್ಯದಲ್ಲೇ ಉಳಿದ ಲೇಖಕರು ಪ್ರತಿಗಾಮಿಗಳಾಗಿದ್ದರು ಎಂದೇನಲ್ಲ. 'ಜೇನ್ಯಾ', 'ರೊಟ್ಟಿ', 'ಬರ'ದಂಥ ಕತೆಗಳು ಈ ಹೊತ್ತಲ್ಲಿ ಬಂದವು. ದೇಸಾಯಿಯವರು ವಿವಾಹಿತರ ಲೈಂಗಿಕ ಸಂಬಂಧಗಳಲ್ಲಿ ನೈತಿಕ ಪ್ರಶ್ನೆಯನ್ನು ಪರಿಶೀಲಿಸುತ್ತಿದ್ದರು. ಅನಂತಮೂರ್ತಿ 'ಘಟಶ್ರಾದ್ಧ' ಬರೆದಿದ್ದರು. (ಉಡುಪರ ಮರುಮದುವೆ ಬಗ್ಗೆ ಕಥೆ ಪ್ರಕಟಿಸುವ ವ್ಯಂಗ್ಯ ವಿಷಾದಗಳು ತುಂಬ ಪರಿಣಾಮಕಾರಿಯಾದುವು) ಸಮಸ್ಯೆಯೆಂದರೆ ಈ ಕಥೆಗಳ ಜಗತ್ತು ಹೆಚ್ಚಾಗಿ ನಗರ ಮಧ್ಯಮ ವರ್ಗ ಶಿಷ್ಟ ಜಾತಿಯದಾಗಿತ್ತು ; ಸಮಸ್ಯೆಯನ್ನು ಪರಿಶೀಲಿಸುವ ಕತೆಗಾರರ ತಾತ್ವಿಕತೆಯು ವ್ಯಕ್ತಿ ನೆಲೆಯದಾಗಿತ್ತು. ಯಮುನಕ್ಕನನ್ನು ಅನಾಥ ಮಾಡುವ ಘಟಶ್ರಾದ್ಧದ ಸಮಾಜಕ್ಕಿಂತ ಭಿನ್ನವಾದ ಜಗತ್ತಿನಲ್ಲಿ ಕೈಲಾಗದ ಗಂಡನನ್ನು ತೆಗೆದು ಬಿಸಾಡಿ ಜೀತದಾಳಿನೊಂದಿಗೆ 'ಕೂಡಿಕೆ'ಯಾಗುವ

ಬೆಣ್ಣೆನ ಥೀಕತ್ತಿ ಕತೆಯಾಗಲು ಹವಣಿಸುತ್ತಿತ್ತು (ನಾಗಪಾರ). ನನ್ನ ಮತ್ತು ಬಂಡಾಯ ಕತೆಗಳನ್ನು ವಿಸ್ತೃತ ದೃಷ್ಟಿಯಿಂದ ನೋಡಿದಾಗ, ಕಾಮದ ಅದಮ್ಯ ಗುಣ, ತಾಯಿಯ ವಾತ್ಸಲ್ಯ, ಇತರೆ ಮನುಷ್ಯ ಭಾವಗಳು, ಮನಸ್ಸಿನ ತೊಳಲಾಟ-ದ್ವಂದ್ವಗಳು ಒಂದು ಕಡೆಯಾದರೆ, ಬಡತನ ದಾರಿದ್ರ್ಯ - ಸಾಮಾಜಿಕ ಅಪಮಾನ-ದಬ್ಬಾಳಿಕೆ-ಪ್ರತಿಭಟನೆಗಳು ಇನ್ನೊಂದೆಡೆ ಮುಖ್ಯವಾಗಿವೆ ಮತ್ತು ಇವು ಲೇಖಕರ ವರ್ಗನಿಲುವುಗಳಿಗೆ ತಗುಲಿಕೊಂಡಿವೆ. ಒಂದೇ ಅಪವಾದವೆಂದರೆ, ಈ ಹೊತ್ತಿನ ಆಸುಪಾಸಿನಲ್ಲಿ ಜೀತ, ಗಡಿಪಾರು, ಜಿಂಕೆಯಮರಿ, ಕನಸಿನ ಯುಗಾದಿಯಂಥ ಕತೆಗಳನ್ನು ಬರೆದಿದ್ದ, ನವ್ಯದ ಸೆಳೆತಗಳಿಗೆ ಅಷ್ಟಾಗಿ ಒಳಗಾಗದ, ಚೆನಗರಹಳ್ಳಿಯವರದೆನಿಸುತ್ತವೆ. ಅವರು ನೇರವಾಗಿ ಕುವೆಂಪು, ಗಾರ್ಕಿ, ಪ್ರೇಮಚಂದ್, ದಾಸ್ತೊವ್‌ಸ್ಕಿಯಂಥ ಮಾನವತಾವಾದಿ-ವಾಸ್ತವವಾದಿ ಲೇಖಕರ ಪ್ರಭಾವಕ್ಕೆ ಒಳಗಾಗಿದ್ದರು. ಕನ್ನಡದ ಪ್ರಗತಿಶೀಲರು ಕ್ಷೀಣವಾಗಿಯಾದರೂ ಒಂದು ಪರಂಪರೆಯನ್ನು ಬಿಟ್ಟಿದ್ದರು. ಅವರಲ್ಲೂ ನಿರಂಜನರ 'ಕೊನೆಯ ಗಿರಾಕಿ' ಕಣ್ಣೋರೈಸುವ ಸಾಧನೆ ಮಾಡಿತ್ತು. ಕುವೆಂಪು ಅವರ 'ಸಾಲದ ಮಗು' ಚೆನಗರಹಳ್ಳಿಯವರ 'ಜೀತಕ್ಕೆ' ಪ್ರೇರಣೆಯೊದಗಿಸಿವೆ. ಅಂದರೆ ನವ್ಯದ '[illegible]' ಬಂಡಾಯ ನಿಲುವನ್ನು ತಳೆಯಲು ಕನ್ನಡದಲ್ಲಿ ಪರಂಪರೆ ಇತ್ತೆಂದೇ (ನವ್ಯ Standardise ಮಾಡಿಬಿಟ್ಟಿದ್ದ ತಂತ್ರಪ್ರಧಾನವಾದ ಸಾಂಕೇತಿಕ ರೂಪದ ಚಲಾವಣೆಯ ಕಾಲದಲ್ಲೂ) ಚೆನಗರಹಳ್ಳಿ ನೇರವಾಗಿ ಅನುಭವ ಪ್ರಧಾನವಾಗಿ ಬರೆಯಲು ಸಾಧ್ಯವಾಯಿತು. ಆಗ ಬರೆಯುತ್ತಿದ್ದ ಸುಧಾಕರ ಅವರು (ಚೆನಗರಹಳ್ಳಿಯವರಿಗೆ ಪ್ರೇರಣೆಯಾದವರು) ದಟ್ಟವಾದ ಗ್ರಾಮೀಣಾನುಭವವನ್ನು, ಜನಪದ ನುಡಿಗಟ್ಟನ್ನು ಅಪ್ಪಿಕೊಂಡಿದ್ದರೂ ನವ್ಯದ ಸಾಂಕೇತಿಕ ವಿಧಾನಕ್ಕೂ, ಲೈಂಗಿಕ ಸೆಳೆತವನ್ನುಳ್ಳ ವಸ್ತುವಿಗೂ ಬಾಗಿದ್ದರೆನ್ನಬಹುದು. ಅವರ ಕಾಡಿನ ಅತ್ಯುತ್ತಮ ಕತೆಯಾದ 'ಜಲದ ಕಣ್ಣು' ಕೂಡ (ಇದರ ಕಲಾತ್ಮಕತೆ ಚಿತ್ತಾಲರ 'ಸೆರೆ'ಗೆ ಸಮಾನವಾಗಿದೆ) ಇದನ್ನು ಸಮರ್ಥಿಸುತ್ತದೆ. ಅವರ ಕತೆಗಳ ಶಿಸ್ತು ಮತ್ತು ಅಚ್ಚುಕಟ್ಟುತನಗಳು ತುಂಬ ಅನನ್ಯವಾದವು. ಮಧ್ಯಮವರ್ಗದವ ಶಿಷ್ಟ ಭಾಷೆ-ನುಡಿಗಟ್ಟುಗಳು ಜಡತೆ ನಿರ್ಜೀವತೆಯನ್ನು ಪಸರಿಸಿದ ಹೊತ್ತಲ್ಲಿ, ಪ್ರಾದೇಶಿಕ ವಿಶಿಷ್ಟವಾದ ಜನಪದ ಸತ್ವವೊಂದನ್ನು ಹುಗಿಸಿ, ಚೇತೋಹಾರಿಯಾದ ಲವಲವಿಕೆಯನ್ನು [illegible] ಸುಧಾಕರ ಚೆನಗರಹಳ್ಳಿಯವರ ಸಾಧನೆಯು ಈಗ, ಬಂಡಾಯ ಕತೆಗಳ ಹೊಸ ತಲೆಮಾರಿನಲ್ಲಿ ಮರುಕಳಿಸುತ್ತಿದೆ. ಗ್ರಾಮೀಣ ಅನುಭವ ಪ್ರಪಂಚವು ತನಗೆ ತಾನೇ ಒಂದು ಗುಣಾತ್ಮಕ ಸತ್ವವಾಗಿತ್ತು. [illegible] ಗ್ರಾಮ ವಾತಾವರಣದಲ್ಲಿ, ಅದರ [illegible], [illegible] ಗಳನ್ನು ನಿರಾಕರಿಸಿಕೊಂಡ, [illegible], ಸೀಮಿತವೂ ಆದುದು ; ಇವರ ಅನುಭವ ಅಮ್ಯ

ಮತ್ತು ಬಳಿಕ ಕೂಡ ವ್ಯಕ್ತಿ ಕೇಂದ್ರಿತ ಸ್ಥಿತಿಯು ವಿಶ್ಲೇಷಣೆಗೆ ಒಳಪಡುವಂಥದು. ಬಂಡಾಯ ಕತೆಗಳಲ್ಲಿ ತೆರೆದುಕೊಳ್ಳುವ ಗ್ರಾಮೀಣ ಜಗತ್ತು ಊಳಿಗ ಮಾನ್ಯ ವ್ಯವಸ್ಥೆಯೊಳಗೆ ಬದುಕುತ್ತಿರುವ ದುರ್ಬಲರ ವೇದನೆಗಳನ್ನು ಕಾಣಿಸುವ, ವರ್ಗಕಲ್ಪನೆಯಿಂದ ಕೂಡಿದ ಸಂಘರ್ಷಮಯವಾಗಿದೆ. 'ಮೂಡಲ ಸೀಮೆಯಲ್ಲಿ ಕೊಲೆಗಿಲೆ ಮುಂತಾಗಿ' 'ಚಲುವನ ಪರಂಗಿ ಗಿಡಗಳು' 'ಬೆಟ್ಟ ಸಾಲು ಮಳೆ'ಯಿಂದ ಹಿಡಿದು ಈಗಿನ 'ನೇಪಥ್ಯದ ನೋವು' (ಚಂದ್ರಕಾಂತವರು) ಕತೆಯತನಕ. ಆದರೆ ಬಂಡಾಯವು ಒಂದು ತಾತ್ವಿಕ ದೃಷ್ಟಿಕೋನವಾಗಿದ್ದು, ಅದು ಅನುಭವದ ಸ್ವರೂಪಕ್ಕೆ ಸಂಬಂಧಿಸಿಲ್ಲ. ಹೀಗಾಗಿಯೇ ಬಂಡಾಯ ಚಳುವಳಿಗೂ ಮುಂಚೆ ಬಂಡಾಯ ಕತೆಗಳು ಹುಟ್ಟಿವೆ. ಬಂಡಾಯ ಕತೆಗಳಲ್ಲಿ ನವ್ಯದಲ್ಲಿಯಂತೆ ವ್ಯಕ್ತಿಯ ಮನೋವಿಶ್ಲೇಷಣೆ ಮುಖ್ಯವಾಗುವುದಿಲ್ಲ. ವ್ಯಕ್ತಿಯೊಬ್ಬನ ತೊಳಲಾಟಕ್ಕೆ ಕಾರಣವಾಗಿರುವ ಪರಿಸರದ (ವ್ಯವಸ್ಥೆಯ) ಮೇಲೆ ಅಲ್ಲಿ ಗಮನ ಹರಿಯುತ್ತದೆ. ಯಾಕೆಂದರೆ ಜಾತಿ, ವರ್ಗ, ಮುಂತಾದವರ ಬಿಕ್ಕಟ್ಟುಗಳಿಗೆ ಅವರ ವೈಯಕ್ತಿಕ ತಪ್ಪುಗಳು ಕಾರಣವಾಗಿಲ್ಲ. ಇಂಥ ಬಿಕ್ಕಟ್ಟಿನ ನೋವುಗಳ ಪ್ರಾತಿನಿಧ್ಯದಲ್ಲಿ ಸಮುದಾಯ, ಚರಿತ್ರೆಯ ಕಥೆಯನ್ನು ಅನುಸರಿಸುವುದು ಇಲ್ಲಿ ಪ್ರಧಾನವಾಗಿರುತ್ತದೆ. 'ಮೌನಿ'ಯ ಕುಪ್ಪಣ್ಣ ಭಟ್ಟರ ವೇದನೆ ಅವರೊಬ್ಬರದೇ ಅಲ್ಲದೆ ದ್ಯಾವನೂರಿನ ರಂಗಪ್ಪನದು, ಅವನಂಥ ಲಕ್ಷಾಂತರ ದುರ್ಬಲರದು. ಆದ್ದರಿಂದ ಬಂಡಾಯ ಕಥೆಯು ಸುದೀರ್ಘ ಇತಿಹಾಸದಿಂದ ಹರಿದ ಹಾದಿಯಿಂದಿರುತ್ತದೆ. ಆ ತುಂಬ ಹಾದಿಯೇ ಇತಿಹಾಸದ ಒಂದು ಸಮಗ್ರ ನೋಟವನ್ನೊದಗಿಸಲು ಶ್ರಮಿಸುತ್ತಾ ಅನಿವಾರ್ಯವಾಗುತ್ತದೆ. ಕಳೆದುಹೋದ ಒಂದು ಲೋಕವನ್ನು, ಬದುಕನ್ನು, ಹುಡುಕುವ ಕ್ಷುದ್ರ ಸಾಧಾರಣ ಘಟನೆಯೂ ಅಸಾಧಾರಣ ಬದುಕಿನ ಮಹಾ ಗಾಥೆಯಾಗಲು ಬಯಸುತ್ತದೆ. ಅದು ಶರತ್ಚಂದ್ರರ 'ಮಹೇಶ' ಕಥೆಯಾಗಲಿ, ಕುವೆಂಪು 'ಮಲೆಗಳ ಕೊರಗನ' ಕಥಾವಳಿ, ರಿಚರ್ಡ್ ರೈಟ್, ಚಿನುವಾ ಅಚಿಬೆ, ನಗೂಗಿ, ಮೊದಲಾದವರ ಕತೆ ಕಾದಂಬರಿ ಕಾವ್ಯಗಳು ಜಗತ್ತಿನ ದಮನಿತರ ದನಿಯಾಗುವ ಬಗೆ ಹೀಗೇ ಇದೆ. ಇಂಥ ಸಾಹಿತ್ಯವನ್ನು ಕೇವಲ ಕಲಾತ್ಮಕತೆಯ ಕಣ್ಣಿನಿಂದ ನೋಡುವ ಸಾಂಸ್ಕೃತಿಕ ಕಾರಣಗಳಿಂದ ವಿಮರ್ಶೆ ತಪ್ಪಾಗುತ್ತದೆ. 'ಒಂದು ಊರಿನ ಕಥೆ'ಯಲ್ಲಿ ನಾಯಕ ತನ್ನ ಮನೆಯನ್ನು ಜಿಗುಪ್ಸೆಯಿಂದ ನೋಡುವ ಸಂದರ್ಭದಲ್ಲಿ ರೂಪಕತ್ವ ವಿಮರ್ಶೆಗೆ ಮೊದಲು ಕಾಣುವುದು ಅಲ್ಲಿನ 'ಕಾವ್ಯಾತ್ಮಕ ಶೈಲಿ'; ಆದರೆ ಬಂಡಾಯ ವಿಮರ್ಶೆಗೆ ಇಂಥ ಸ್ಥಿತ್ಯಂತರಕ್ಕೆ ಸಾಂಸ್ಕೃತಿಕ ಕಾರಣಗಳ ಹುಡುಕಾಟ ಮುಖ್ಯವಾಗುವುದು. ಬಂಡಾಯ ಕತೆಗಳು ವಸ್ತು ಮತ್ತು ಧೋರಣಾ ಪ್ರಧಾನವಾದವು (ಇದು ಕೆಲವೊಮ್ಮೆ ಬಂಡಾಯ ಕತೆಗಳ ಮಿತಿಯೂ ಆಗುತ್ತದೆ) ಕುಂಬಿ, ಬೆಸಗರಹಳ್ಳಿ, ಕಟ್ಟಿಮನಿಯವರಲ್ಲಿ ಗಟ್ಟಿ ಮುಟ್ಟಾದ ವಸ್ತುವೊಂದು ಇದ್ದು ಕಾಣುತ್ತದೆ.

ಬರಗೂರು, ಪಾಟೀಲರವರಲ್ಲಿ ಧೋರಣೆಯು ಎದ್ದು ಕಾಣುತ್ತದೆ. ನವ್ಯದ ಆತ್ಮಪ್ರಧಾನ ಕತೆಗಳಿಂದ ಬಂಡಾಯದ್ದು ಕಲಿಯಬೇಕಾದುದು ಬಹಳ ಇದೆ ಅನುಭವಗಳೂ ಒಂದೇ ವಸ್ತುವನ್ನು ಎರಡೂ ಮಾರ್ಗಗಳು ಬೇರೆಯಾಗಿ ಆರಿಸಿರುವ ಮತ್ತು ಕಂಡಿರುವ ರೀತಿಗೆ ಬೇಕಾದಷ್ಟು ಉದಾಹರಣೆಗಳು ಸಿಗುತ್ತವೆ. ಅನಂತಮೂರ್ತಿ ಮತ್ತು ಬೆಸಗರ ಹಳ್ಳಿಯ 'ತಾಯಿ' ಕಥೆಗಳು ಅಥವಾ ಲಂಕೇಶರ ಮತ್ತು ಬೆಸಗರಹಳ್ಳಿಯವರ ಅಸ್ಪೃಶ್ಯತೆಯ ವಸ್ತುವುಳ್ಳ 'ಮುಟ್ಟಿಸಿಕೊಂಡವನು' 'ತಕರಾರಿನ ಯುಗಾದಿ' ಕಥೆಗಳು, ನವ್ಯದವರಿಗೆ ಮನಸ್ಸಿನ 'ಸೆಳೆತಗಳು' ಮುಖ್ಯವಾದರೆ ಬಂಡಾಯಕ್ಕೆ ಮನುಷ್ಯ ಸಮಾಜದ ಮನಸ್ಸಿನ 'ಸಂಘರ್ಷ'ಗಳು ಮುಖ್ಯವಾಗಿವೆ. ಇಲ್ಲಿ ಪ್ರಶ್ನೆ ಸರಿ ತಪ್ಪುಗಳದ್ದಲ್ಲ. ನಮ್ಮ ಚರಿತ್ರೆಯ ಸಂದರ್ಭದಲ್ಲಿ ಯಾವುದು ಸಂಬದ್ಧವೆನ್ನುವುದು.

ಬಂಡಾಯ ಕಥೆಗಳ ಬೇರುಗಳು ಎಲ್ಲೆಲ್ಲಿ ಹರಡಿವೆ ? ಕನ್ನಡೇತರ ಪ್ರಭಾವದ ಮಾತಾದುದಾದರೆ ಭಾರತೀಯ ಪ್ರಗತಿಶೀಲ ಬರಹಗಾರರು ಪ್ರೇಮಚಂದ್— ಶರತ್ಚಂದ್ರರು, ರಷ್ಯನ್ ಕತೆಗಾರರು ಇದ್ದಾರೆ - ಮುಖ್ಯವಾಗಿ ಬೆಸಗರಹಳ್ಳಿಯವರಿಗೆ ಮಹಾದೇವ ಅವರಿಗೆ. ('ಹೆಣದ ಬಟ್ಟೆ' ಮತ್ತು 'ಒಡಲಾಳ'ದಲ್ಲಿ ಹಸಿವಿನೊಳಗಾದವರು ಶ್ರೀಮಂತ ಮನೆಯ ಊಟವನ್ನು ನೆನೆಯುವುದು.) ದಲಿತ ಲೇಖಕರಲ್ಲಿ ಬ್ಲ್ಯಾಕ್ ಲಿಟರೇಚರ್ ಮತ್ತು ಮರಾಠಿ ದಲಿತ ಸಾಹಿತ್ಯದ ಢಾಳ ಪ್ರಭಾವಗಳೂ ಜತೆ ಕಾಣಬರುತ್ತಿದ್ದು ಇದರ ಪತ್ತೆ ಬಾಕಿ ಇದೆ. ಜೊಳಮಾರು---ಕಟ್ಟಾ ತಿಮ್ಮರು ಮಲೆಯಾಳಿ ಕತೆಗಾರರಿಂದ (ಕುಬಿಸ್ಟಾ ಮತ್ತು ಕಾದೂರು ನೀಲಕಂಠಪಿಳ್ಳೆಯ 'ಹಾವಿನ ಬೊಂಬೆಗಳಲ್ಲಿ' ಜನಗಣತಿ ಪ್ರಸಂಗ ಗಮನಿಸಿ) ಅವರಲ್ಲೂ ಪ್ರೇಂ ಚಂದರಿಂದ ಪ್ರಭಾವಗೊಂಡಿದ್ದಾರೆ. ವ್ಯಕ್ತಿಗಳ ಪಾತ್ರಗಳ ಮೂಲಕ ವಸ್ತುವನ್ನು ಗ್ರಹಿಸುವ ವಿಧಾನ, ಮನೋವಿಕ ದೃಷ್ಟಿಕೋನಗಳು ಪ್ರೇಂ ಕುವೆಂಪುವಿನಂಥ ಲೇಖಕರಲ್ಲಿ ವಿಶೇಷವಾಗಿದೆ. ಮಹಾದೇವ ಮತ್ತು ಕುವೆಂಪು ಬಂಡಾಯ ಕಥೆಗಳ ಮೇಲೆ ಗಾಢ ನೆರಳನ್ನು ಚೆಲ್ಲಿದ್ದಾರೆ. ಬಂಡಾಯ ಕಥೆಗಳ ರೂಪಗಳನ್ನು ಗಮನಿಸಿದರೆ ನಾಕು ನವ್ಯದ (ನಾಗರಾಜ) ನವೋದಯದ ಅದರಲ್ಲೂ ಮಾಸ್ತಿಯವರ (ವಾಚಿಕಾರ, ಪ್ರಗತಿಶೀಲದ (ಬರಗೂರು) ಮಾದರಿಗಳು ನೆನಪಿಗೆ ಬರುತ್ತವೆ. ನಾಗವಾರರ ಕಥೆಗಳನ್ನು ಅರಿಯುವ ದೃಷ್ಟಿಯಿಂದ ಮಾಸ್ತಿಯವರ 'ವೆಂಕಟಶಾಮಿಯ ಪ್ರಣಯ'ದಂಥ ಕತೆಗಳಿಗೆ ಹೋಲಿಸಬೇಕೆನಿಸುತ್ತದೆ. ಕುವೆಂಪುವಿನಲ್ಲಿ ನವೋದಯ [illegible] ಅನಿರೀಕ್ಷಿತ ಪರಿಣಾಮ ಕೊಡುವ ಕತೆಗಳಿವೆ. ಬಂಡಾಯದ [illegible] ಕತೆಗಾರರ [illegible] ನವ್ಯದಿಂದಲೇ ಬಂದುದು. ನವ್ಯದವರ ಬಗೆ [illegible] ಗಳಿದ್ದಂತಿದೆ. ವಾಸ್ತವವಾಗಿ ನವ್ಯ ಕತೆಗಾರರು ಒಂದೇ ಕಾಮಕ್ಕೆ ಅಂಟಿಕೊಂಡು ಬಿದ್ದಿರಲಿಲ್ಲ. ರಾಮಾನುಜನ್ನರ 'ಅಣ್ಣಯ್ಯನ ಮಾನವಶಾಸ್ತ್ರ' ಕಥೆಯಲ್ಲಿರುವ

ನಿಷ್ಠುರ ವಿಮರ್ಶಾತ್ಮಕ ಗುಣವು (ಶಾಸ್ತ್ರಿಯವರು 'ಕಣ್ಣು ಬಿಚ್ಚಿಕೊಂಡ'ದ ಜೋಯಿಸರ ಪಾತ್ರ ಚಿತ್ರಿಸುವಾಗ ತೋರ್ವ ಇಂಥ ಆರೋಗ್ಯಕರ ನಿಲುವು ತಾಳಿದ್ದಾರೆ.) [illegible]. ಇಡೀ ಕನ್ನಡ ಕಥೆಗಾರಿಕೆಯಲ್ಲಿ ಬಂಡಾಯಕ್ಕೆ ಪರಂಪರೆಯು ಕರುಳ ಬಳ್ಳಿ ಸಂಬಂಧವಿದೆ. ಆದರೆ ಅದರ ಮುಖದಲ್ಲೇ ಬಿಡಿ ಬೇರೆ ಬಂದರೆ ಇಲ್ಲ. ಆವಾಸ, ದೇವರಹೆಣ, ಗಾಂಧಿ, ರೊಟ್ಟಿಯಾ, ಕಪ್ಪು ಹುಡುಗನ ಹಾಡು, ಹಸ್ತ, ಬಡೇಸಾಬು ಪುರಾಣ, ಪಾಯ-ಹೀಗೆ ಎಷ್ಟೋ ವಿಶಿಷ್ಟವಾದ/ಶ್ರೇಷ್ಠವಾದ ಕಥೆಗಳು ಸಾಲಾಗಿ ಕಾಣುತ್ತವೆ. ತಿರುಮಲೇಶರ 'ನೆಳಲೆ ಮರದ ಶ್ರೀಗಳು' ಬಂಡಾಯದ ಹೊತ್ತಿನಲ್ಲಿ ಬಂದ ಕಥೆಯೆಂಬುದನ್ನು ನೆನೆದರೆ ನಮ್ಮವರನ್ನು ಬಂಡಾಯ ಚಳುವಳಿ ಮುಟ್ಟಿರುವುದು ತಿಳಿಯುತ್ತದೆ. ಚಿತ್ತಾಲ-ದೇಸಾಯಿಯವರನ್ನು,ಸುಧಾಕರ,ಶಾಂತರಸರು ಈ ಹೊತ್ತಿನ ಮುಖ್ಯ ಕತೆಗಾರರಾಗಿ ಬೆಳೆಯುತ್ತಿದ್ದಾರೆ. ಇತ್ತೀಚೆಗೆ ಸುಧಾಕರರು (ಅವರ 'ಸಂತೆ ದಾರಿ' ಕತೆಯನ್ನು ಗಮನದಲ್ಲಿಟ್ಟುಕೊಂಡು) ವ್ಯಕ್ತಿತ್ವದಂಥ ಅವಸ್ಥೆಯನ್ನು ಅರ್ಥೈಸುತ್ತಲೇ ಸಾಮಾಜಿಕ ಸಂಘರ್ಷದ ಮುಖಗಳನ್ನು ಬೆಳೆಯುತ್ತಿರುವುದು ಕುತೂಹಲಕರವಾಗಿದೆ. ಸುಧಾಕರರಂತೆ ಗಾಢ ಜಾನಪದ ಸತ್ವದಿಂದ ವ್ಯವಹಿಸಿ ಬರೆಯುವ ಹನೂರು, ಕಾಳೇಗೌಡ ಬೀದನಹಳ್ಳಿ, ಚಕ್ಕೆರೆ ಅವರ ಕತೆಗಳಲ್ಲಿ ವಿಶಿಷ್ಟತೆಯಿದೆ. ಆದರೆ ಜಾನಪದ ಸತ್ವವನ್ನು ನಾಗರಿಕ ಜಗತ್ತಿಗೆ ತೋರಿ ವಿಸ್ಮಯಗೊಳಿಸುವ ಪ್ರಜ್ಞಾಪೂರ್ವಕತೆಯಿದ್ದಾಗ, ಅದಕ್ಕೆ ಸಮಕಾಲೀನತೆಯ ಹೊತ್ತಲ್ಲಿ ದಕ್ಕುವ ಹೊಸ ರೂಪಾಂತರವಾಗಲೀ, ತಾತ್ವಿಕ ಆಯಾಮವಾಗಲೀ ದಕ್ಕುವುದಿಲ್ಲ. ಹನೂರರಿಗೆ ಈ ಸಮಸ್ಯೆಯಿದ್ದಂತಿದೆ. ಜಾನಪದವನ್ನು ಪ್ರಚಾರಿಕ ನೆಲೆಯಲ್ಲಿ ಬಳಸಿದಾಗ ಅದು ಅಸಂಗತ್ಯ/ಅಲಂಕಾರದಂತೆ ಭಾರವಾಗುತ್ತದೆ. ಬುಡಕಟ್ಟು ಸಂಸ್ಕೃತಿಯ ಪರಿಕರಗಳನ್ನು ಬಳಸುವ ಆಚೆ ತಾತ್ವಿಕತೆ ಮತ್ತು ಕಲೆಗಾರಿಕೆಯ ಆಳಗಳನ್ನು ಶೋಧಿಸುವುದು ತನ್ನ ವಿಮರ್ಶಕ ಪ್ರಜ್ಞೆಯಿಂದ. ಪ್ರಾದೇಶಿಕ ವಿಶಿಷ್ಟವಾದ ಭಾಷೆ/ನುಡಿಗಟ್ಟು/ಅನುಭವಗಳು ಅಮೂಲ್ಯ ನಿಜ. ಆದರೆ ಲೋಲುಪವಾಗಿ ಅವುಗಳ ಬಳಕೆಯಾಗುವುದು ರಂಜನೆಯಂತಾಗಿ ಬಿಡುತ್ತದೆ. ಹೊಸತಾಗಿ ಬರಹ ಶುರು ಮಾಡುವ ಎಷ್ಟೋ ಗ್ರಾಮೀಣ ಲೇಖಕರು ಈ ಮಾರ್ಗದಲ್ಲೇ ಸಿಕ್ಕುಬಿದ್ದಿದ್ದಾರೆ. [illegible] [illegible] ಕತೆಗಾರರು ಮೊದಲ ಕತೆಗಳಿಗೂ ಈಗಿನ 'ಹೊಲೆ' ಮಾದಿಗರಂಥ [illegible] ಕತೆಗಳಿಗೂ ಇರುವ ವ್ಯತ್ಯಾಸವು ಅವರು ಇಂಥ ಅಪಾಯಗಳಿಂದ ತಪ್ಪಿಸಿಕೊಂಡು ಬಂದು ಬರೆಯುತ್ತಿರುವುದರಲ್ಲಿದೆ. (ಅಥವಾ ಚಕ್ಕೆರೆಯವರಿಗೆ ನಮ್ಮ ಪ್ರಜ್ಞಾ [illegible] [illegible]ವನ್ನು ತ್ಯಜಿಸಿ ಬರೆಯುತ್ತಿರುವುದರಲ್ಲಿದೆ) ಮಾಲಗತ್ತಿಯವರು ಜನಪದ ಕಥಾ ಕಲೆಯ ಗೆಯು ಸಂಪ್ರದಾಯಗಳನ್ನಿಟ್ಟುಕೊಂಡು ಮಾಡಿರುವ ಪ್ರಯೋಗಗಳು (ಗೋದಾನ ಮತ್ತು ಜೀತ, ಅಹಿಂಸಾವಾದ್ದರಿಂದ) ಸೋಲು ಗಂಡಿರುವುದಕ್ಕೆ ಅವರ ಪ್ರಯೋಗ

ಶೀಲತೆಯೇ ಸರ್ವಸ್ವವಾಗಿರುವ ಮೈಮರೆವು ಕಾರಣವಾಗಿದೆ. ದಲಿತಾನುಭವವು ಉದಾರವಾದಿ ಅಥವಾ ಫ್ಯಾಂಟಸಿ ಮಾರ್ಗಗಳಿಗಿಂತ ವಾಸ್ತವವಾದಿ ಕ್ರಮಗಳಲ್ಲೇ ಯಾಕೆ ಪ್ರಬುದ್ಧವಾಗಿ ಪ್ರಕಟವಾಗುತ್ತಿದೆ ಎಂಬ ಪ್ರಶ್ನೆಯು ಇಂಥಲ್ಲಿ ಹುಟ್ಟಿಕೊಳ್ಳುತ್ತದೆ. (ಮುಳ್ಳೂರು, ಕೆ. ಬಿ. ಸಿದ್ಧಯ್ಯನವರ ಕಥೆ ಕಾವ್ಯಗಳೂ ಹೀಗೆನ್ನುವಾಗ ನನ್ನ ಮನಸ್ಸಿನಲ್ಲಿವೆ.)

ದಲಿತ ಬಂಡಾಯದ ಕತೆಗಳನ್ನು ನಾಲ್ಕು ಬಗೆಯಲ್ಲಿ ವಿಂಗಡಿಸಿ ನೋಡಬಹುದೆನಿಸುತ್ತದೆ ದಲಿತ ಸಂವೇದನೆಯ ಕತೆಗಳು, ಮುಸ್ಲಿಂ ಜಗತ್ತಿನ ಕತೆಗಳು, ಸ್ತ್ರೀ ಸಂವೇದನೆಯ ಕತೆಗಳು ಹಾಗೂ ಇದರ ಶೂದ್ರ/ಕೆಳಜಾತಿ ಮತ್ತು ವರ್ಗದ ಲೇಖಕರು ಬರೆದ ಕತೆಗಳು. ಈ ವಿಭಾಗ ಕ್ರಮವು ಜಾತಿ, ಧರ್ಮ, ಲಿಂಗಾಧಾರಿತವಾಗಿರುವುದು ವಿಚಿತ್ರವೆನಿಸಿದರೂ ಅನಿವಾರ್ಯವಾಗಿಬಿಟ್ಟಿದೆ. ಯಾಕೆಂದರೆ ಇವು ಇಂಡಿಯಾದ ವಾಸ್ತವಗಳಾಗಿದ್ದು, ಕೆಲವೊಮ್ಮೆ ವರ್ಗ ನೆಲೆಯನ್ನು ನಿರ್ಧರಿಸುವಂತಹ ಅಂಶಗಳಾಗಿವೆ. ಇಲ್ಲಿ ಶಿಷ್ಟ ಜಾತಿಯ/ನಗರ ಮೂಲದ ಲೇಖಕರು (ಮಹಿಳೆಯರು ಯಾವ ನೆಲೆಯಿಂದ ಬಂದವರೂ ದಲಿತರೇ,) ಇಲ್ಲವೆನ್ನುವಂತಾಗಿರುವುದು ಗಮನಿಸಬೇಕಿದೆ. ಪ್ರತಿಭಟನೆ ಮಾಡುವ ಮೊದಲ ಹಕ್ಕುಳ್ಳ ಸ್ತ್ರೀಯರು, ಯಾವ ಸ್ತ್ರೀ ವಿರೋಧಿ ವಾಸ್ತವದಲ್ಲಿ ನ್ಯಾಯಕ್ಕಾಗಿ ಹೋರಾಡಬೇಕಿದೆಯೋ ಅವ್ಯವಸ್ಥೆಯ ಅಪೇಕ್ಷೆಗನುಸಾರವಾಗಿಯೇ ಗಂಡಂದಿರ ಹೆಸರನ್ನಂಟಿಸಿಕೊಂಡು ಬರೆಯುತ್ತಿರುವುದು ವಿಡಂಬನೆಯಾಗಿದೆ. ಬಂಡಾಯ ಕತೆಗಾರರಿಗೆ ಕಾವ್ಯನಾಮಗಳಿಲ್ಲದಿರುವುದು, ಅವರ ಹೆಸರುಗಳಲ್ಲಿ ಹಳ್ಳಿಗಳು ಸೇರಿಕೊಂಡಿರುವುದು ಮುಖ್ಯವಾಗಿದೆ. ನಿರ್ಲಕ್ಷಿತ ವೃತ್ತಿ/ಹಳ್ಳಿ/ಜಾತಿಗಳ ಹೆಸರಿನಲ್ಲಿ ಬರೆಯುತ್ತಿರುವ ಬಗೆಯೂ ಪ್ರತಿ ಸಂಸ್ಕೃತಿ ನಿರ್ಮಾಣದ ಪ್ರಕ್ರಿಯೆಯಾಗಿದೆಯೇ ? ಯಾವುದನ್ನು ಆಳುವ ಸಂಸ್ಕೃತಿಯು ಕೀಳುಗಳೆದಿದೆಯೋ ಅದನ್ನೇ ಚೈತನ್ಯಗೊಳಿಸಿ ಎದುರು ನಿಲ್ಲಿಸುವುದು, (ಕಪ್ಪು ಚಳುವಳಿಯ ನಿಗ್ರಿಟ್ಯೂಡ್ ಪ್ರಜ್ಞೆಯು ಇದನ್ನು ಮಾಡಿಸಿತು.) ಅಂದರೆ ಕೀಳು ವೃತ್ತಿ/ಜಾತಿ, ಕಪ್ಪುಬಣ್ಣ, ಅಂಗವಿಕಲತೆ, ಹೆಣ್ಣು. ಸ್ಥಳೀಯವಾದುದು. ದೇಸಿ ಭಾಷೆ, ಗ್ರಾಮಗಳಿಗೆ ಸಂಬಂಧಿಸಿದ್ದನ್ನು (ಮೆಟ್ಟು ಹೊಡಿ, ಹೊಲೆಯ, ಕರಿಯ ಕುಂಟ ಹೆಣ್ಣಿಗ, ನಾಟಿ, ಹಳ್ಳಿ ಗಮಾರ ಇವು ಶಿಷ್ಟ ಸಂಸ್ಕೃತಿಯ ಪರಿಭಾಷೆಯಲ್ಲಿ ನಿಂದಾಸೂಚಕಗಳು) ಸ್ವಾಭಿಮಾನೀಕರಿಸುವುದು. ಮೇಲ್ವರ್ಗಕ್ಕೆ ಮುಜುಗರವಾಗುವುದು ಇಲ್ಲಿ ಆತ್ಮೀಯವಾಗುತ್ತದೆ. ಪೆರಿಯಾರ್ ವೈಚಾರಿಕತೆಯನ್ನುಂಡ ತಮಿಳಿನಲ್ಲಿ ಈ ಪ್ರಕ್ರಿಯೆ ತೀವ್ರವಾಗಿದೆ. ರಾವಣನನ್ನು ಉದಾತ್ತೀಕರಿಸಿ ಕಾವ್ಯ ಬರೆಯುವುದು ಇತ್ಯಾದಿ. ಇದರಲ್ಲಿ ಪುದುಮೈಪಿತನ್ ಎಂಬುವನ, ಅಹಲ್ಯೆ ರಾಮ ಶಾಪ ನಿವಾರಣೆಯನ್ನು ನಿರಾಕರಿಸುವ 'ಸಾಬ ವಿಮೋಚನಂ' ಕಥೆ ಪ್ರಸಿದ್ಧವಾಗಿದೆ. ರಿಚರ್ಡ್ಸನ್ ಬರೆಯಲು ಶುರುಮಾಡಿದಾಗ ಅಮೆರಿಕೆಯ ಜನಾಂಗವಾದಿ

ಸಂಸ್ಕೃತಿ ಬಿಚ್ಚಿಬಿದ್ದಿತು. ಕುಂವೀಯವರ ಡೋಮ/ಎಲುಗನೆಂಬ ಕೊರಚನ ಕಥೆಗಳು ಈ ಕೆಲಸ ಮಾಡುತ್ತವೆ. ಹಾದಿ ಉದುರಿಸುತ್ತಿದ್ದ ಹಿಕ್ಕೆಯನ್ನು ಅಮವಾಸ್ಯೆ ರಾತ್ರಿಯಂದು ಮುಗಿಲತುಂಬ ಚೆಲ್ಲುತ್ತಿದ್ದ ಚುಕ್ಕೆಗಳಿಗೆ ಅಲ್ಲಿ ಹೋಲಿಸುವ ವರ್ಣನೆ ಬರುತ್ತದೆ. ಪ್ರತಿಷ್ಠಿತ ಸಮಾಜ ತುಚ್ಛವೆಂದು ಕಡೆಗಣಿಸಿದ ಕೊಸೇ ಮನುಷ್ಯರು (ಕುವೆಂಪು ಅವರ ಗುತ್ತಿಯಂತೆ) ಇಲ್ಲಿ ಪ್ರಧಾನ ಪಾತ್ರರು. ಇವರಿಗೆ ಇತಿಹಾಸವಿಲ್ಲ ('ಅವನ ಅಪ್ಪ ಎತ್ತರವನೋ ಏನೋ' 'ಅವನ ಅಪ್ಪ ಅಮ್ಮ ಬದುಕಿದ್ದರೆ ಕೇಳಬಹುದಿತ್ತು', ದೇವನೂರರ ಕತೆಗಳು) ಅನಾಥರು. ಇವರು ದುರ್ಬಲರಾದರೂ ಅಸಾಧಾರಣ ಶಕ್ತಿವಂತರಾಗಿ, ಧೀಮಂತರಾಗಿ ಚಿತ್ರಿತರಾಗಿದ್ದಾರೆ. ಸಾರಾ 'ಚಪ್ಪಲಿಗಳು' ಕಥಾಸಂಕಲನವನ್ನು 'ನನ ಮಗಳ ಉರಿಯಲ್ಲಿ ಬಾಡಿ ಮುರುಟಿ ಹೋಗುತ್ತಿರುವ ಸೋದರಿಯರಿಗೆ' ಅರ್ಪಿಸುತ್ತಾರೆ. ಪಾಲಿಕಾರರ (ಕುತ್ತದಲಿ ಕುದ್ದವರ ಕಥೆಗಳು) ಮತ್ತು ಶಾಂತರಸರ ಕಥೆಗಳು ಸ್ತ್ರೀಪಾತ್ರ ಪ್ರಧಾನವಾಗಿವೆ. ನೀರಮಾನ್ವಿಯವರ ಇತ್ತೀಚಿನ ಕಥೆಗಳಲ್ಲೂ, ಆ ಭಾಗದಿಂದ ಬರೆಯುತ್ತಿರುವ ಚಂದ್ರಕಾಂತವಡ್ಡು ಅವರಲ್ಲೂ ಇದನ್ನು ಕಂಡಾಗ ಕುತೂಹಲವೆನಿಸುತ್ತದೆ (ಈ ಚರ್ಚೆ ಮುಂದೆ ಇದೆ) ಹೆಣ್ಣು ತನ್ನ ಅಸಹಾಯಕ ಪರಿಸ್ಥಿತಿಯಲ್ಲೂ ಬದುಕುವುದನ್ನು ಅಸೀಮ ಚೈತನ್ಯದಿಂದ ಆರೋಗ್ಯಕರವಾದ ಪ್ರತಿಭಟನೆ ಮಾಡುವುದನ್ನು ಈ ಕತೆಗಾರರು ಚಿತ್ರಿಸುತ್ತಾರೆ. ನಾಗವಾರರ ಕತೆಗಳಲ್ಲಿ ಹೆಣ್ಣು ಸಮಾಜದ ಅರ್ಥವಿಲ್ಲದ ಸಂಪ್ರದಾಯಗಳನ್ನು, ಧಿಕ್ಕರಿಸುವ ಧೀರೆಯಾಗಿದ್ದಾಳೆ-ಆರಂಭದ 'ಕೂಡಿಕೆ'ಯಿಂದ ಈಗಿನ 'ಮಾಯೆ'ಯವರೆಗೆ. ಈ ಅರ್ಥದಲ್ಲಿ ನಾಗವಾರರು ಒಂದೇ ಆಶಯವನ್ನು ಬಗೆಬಗೆಯಲ್ಲಿ ಮರು ಸೃಷ್ಟಿಗೊಳಿಸುತ್ತಿರುವಂತೆ ಕಾಣುತ್ತದೆ. ಬಂಡಾಯ ಪ್ರಣಾಳಿಕೆಯಲ್ಲಿ ಲಿಂಗಭೇದ ನೀತಿಯ ವಿರುದ್ಧ ಹೋರಾಟ ಕಟ್ಟುವ ಪ್ರಸ್ತಾಪವಿದೆ. ಇದಕ್ಕೆ ಸಹ ಲೇಖಕಿಯರ ಸ್ಪಂದನವೂ ಕೂಡುತ್ತಿದೆ. ನಿಜವಾದ ಹೆಣ್ಣಿನ ಸ್ವಾತಂತ್ರ್ಯವನ್ನು ಒಂದು ಸಮಾಜದಲ್ಲಿ ಆಕೆ ಅನುಭವಿಸುವ ಲೈಂಗಿಕ ಸ್ವಾತಂತ್ರ್ಯದಲ್ಲಿದೆ ಎಂದು ಸ್ತ್ರೀ ವಾದಿಗಳು ಹೇಳುತ್ತಾರೆ. ವೀಣಾ ಶಾಂತೇಶ್ವರರ ಕಥೆಗಳಲ್ಲಿ ಈ ನಿಲುವು ಬಲು ದಿಟ್ಟವಾಗಿ ಬರುತ್ತದೆ. ಆದರೆ ಸಾರಾ ಕಥೆಗಳ ಹೆಣ್ಣು ಸಮಾಜದ ಕಟ್ಟುಪಾಡುಗಳನ್ನು ಹೀಗೆ ಹರಿಯುವುದು ಕಾಣುವುದಿಲ್ಲ. ಆಕೆಯಿನ್ನೂ ಸಾಂಪ್ರದಾಯಿಕ ಚೌಕಟ್ಟಿನಲ್ಲೇ ನಿಂತು ಪ್ರತಿಭಟಿಸುವ ಹಂತದಲ್ಲಿದ್ದಾಳೆ. ಈ ವ್ಯತ್ಯಾಸಗಳಿಗೆ ಕಾರಣವೂ ಇದೆ. ವಿದ್ಯೆ, ನಾಗರಿಕತೆ, ಉದ್ಯೋಗಗಳಂಥ ಸವಲತ್ತು ವೀಣಾರ ಕಥಾ ನಾಯಕಿಯರು ಪ್ರಬುದ್ಧರಾಗಿದ್ದರೆ, ಮುಸ್ಲಿಂ ಹೆಣ್ಣು ವಾಸ್ತವದಲ್ಲಿ ಆ ಸ್ಥಿತಿಗೆ ತಲುಪಿಲ್ಲದಿರುವುದು. ಒಬ್ಬ ಲೇಖಕ/ಕಿ ಲೈಂಗಿಕ ಸಂಬಂಧಗಳನ್ನು ನಿರೂಪಿಸುವಾಗ ತಾಳುವ ನಿಲುವು ಬಹಳ ಮುಖ್ಯವಾಗಿರುತ್ತದೆ. ಸುಬ್ಬಮ್ಮನ ಹಾದರವನ್ನೂ ಅಥವಾ ಪೀಂಚಲು-ಮುಕುಂದಯ್ಯರ ಸ್ನೇಹವನ್ನು ಕುವೆಂಪು ಕಂಡರಿಸುವ

ಬಗೆಯನ್ನು ನಿರೂಪಿಸುತ್ತದೆ. ನಿನ್ನ ಕಥೆಗಳಲ್ಲಿ [illegible] [illegible] ದೇವ್ಯಗೆ [illegible]. ಕಾಮಾಂತರದ ಸಂಬಂಧಗಳಲ್ಲಿ ಇಂಥ ಒಂದು ಸಂಕೇತ [illegible] ವಸ್ತು. ದೇವ್ವನ್ನು ಹೊನ್ನು ಮುಗ್ಗುಗಳಂಥ ಭೋಗ್ಯ ವಸ್ತುಗಳನ್ನಿಟ್ಟು ಸಮ ತರುವ ನಮ್ಮ ಸಾಂಪ್ರದಾಯಿಕ ಕಲ್ಪನೆಯನ್ನು ನವ್ಯದವರು ಚೆನ್ನಾಗಿ ಬಳಸಿದರು. [illegible] ಜಾಪ್ [illegible] [illegible] [illegible] [illegible], [illegible] [illegible] ಉಂಟಾದ ನೈತಿಕ ತಳಮಳ, ವ್ಯಾವಹಾರಿಕತೆಗಳು ನಿರಂಕುಶವಾಗಿರುವ ಆಧುನಿಕ ಜಗತ್ತು [illegible]. ಶಾಂತರಸ, ಪಾಪಿಕಾರ, ನೀರವಮಾನಿ ಕಥೆಗಳಲ್ಲಿ ದೇವ್ಯ ಮಾಂಸದ ಜೊತೆಸಂತೆಯೂ ಅದಕ್ಕಾಗಿ ಕಿತ್ತಾಡುವ ನಾಯಿಗಳಂತೆ ಗಂಡಸರೂ ಕಾಣುವ ವಾಸ್ತವವಿದೆ. ರಾಜ ಪ್ರಭುತ್ವ ಬಿಟ್ಟು ಹೋಗುವ [illegible] ದೇವ್ಯ ಜೀವನದಲ್ಲಿ ದೇವ್ಯ ಗಂಡುಗಳೆದರ ನೈತಿಕ ಅವನತಿಯಿರುತ್ತದೆ. ಅಂಥ ಕಥೆ ರಾಜಮ್ಮ ಜಕ್ಕವ್ವ, ಬಿಸಲವ್ವ, ಮಲ್ಲಮ್ಮನಂಥವರು ಬಂಡಾಯ ಕಥೆಗಳಲ್ಲಿ ಮೂಡುತ್ತಿದ್ದಾರೆ:

ಗಂಡು-ಹೆಣ್ಣಿನ ಲೈಂಗಿಕ ಸಂಬಂಧವು ಆಳುವ ವರ್ಗದ ವಿರೋಧಕ್ಕಾಗಿ ಬಳಕೆ [illegible]. ಒಂದು ಕೆಳ ಜಾತಿಯ ಗಂಡು ಮತ್ತು ಮೇಲ್ಜಾತಿಯ [illegible] (ಅಂಥ ಕರ್ಮ ಸಂಕೇತದ ಆಶಯಗಳು ಕುಸುಮ ಬಾಳೆಯಲ್ಲಿವೆ) [illegible] ಮತ್ತು [illegible] ದೊಂಬತಿ/ಮಗಳ ಸಂಬಂಧಗಳು. ಲೈಂಗಿಕವಾಗಿ [illegible] ನೈತಿಕವಾಗಿ ಮಾನಸಿಕವಾಗಿ ಬಲಿಷ್ಠನಾಗಿರುವ [illegible] ಶಾಂತರಸ, [illegible] [illegible] ನಾಗಪ್ಪಾರೆಡ್ಡಿ, [illegible] ದಳ್ಳಿಯವರೂ (ಕಾಯರ್ [illegible] ಮಾಡಂಗಳ್ಳಿಯವರೂ) ತರುತ್ತಾರೆ. [illegible] [illegible] ತರುತ್ತಾರೆನಿಸುತ್ತದೆ. [illegible] [illegible] [illegible] [illegible]

ಕಾಣುತ್ತವೆ. ಆಶಯಕ್ಕೆ ಸಂಬಂಧಿಸಿ ಇನ್ನೊಂದು ಮಾತು ನೆನಪಿಗೆ ಬರುತ್ತಿದೆ: ಜನಪದ ಕತೆಗಳಲ್ಲಿ ಕಿರಿಯ/ಅಂಗವಿಕಲ ಅಥವಾ ದುರ್ಬಲನಾದವನು ಎಲ್ಲ ಕಂಟಕಗಳನ್ನು ಪಾರುಮಾಡಿ ಯಶಸ್ವಿಯಾಗುವುದು ಪ್ರಸಿದ್ಧ ಆಶಯವಾಗಿದೆ. ಜಾನಪದವನ್ನು ಜನಪರ ನಿಲುವಿನಲ್ಲಿ ಬೆಸೆಯಬೇಕೆನ್ನುವ ಬಂಡಾಯ ಲೇಖಕರು ಇದನ್ನು ಮತ್ತೊಂದು ಬಗೆಯಲ್ಲಿ ಪುನರಾವರ್ತನೆ ಮಾಡುತ್ತಿದ್ದಾರೆಯೇ ?

ಬಂಡಾಯದ ಬಹುಮುಖ್ಯವಾದ ಹಾಗೂ ಅದರ ನೈತಿಕ ಶಕ್ತಿಯಾಗಿರುವ ದಲಿತ ಸಾಹಿತ್ಯಕ್ಕೇಕೆ ಒಟ್ಟು ಕನ್ನಡಕ್ಕೇ ದೊಡ್ಡ ಪ್ರತಿಭೆಗಳಲ್ಲೊಂದಾಗಿರುವ ಮಹಾದೇವ ಎರಡೂ ದಶಕಗಳಿಂದ ಏಳೆಂಟು ಕಥೆಗಳನ್ನು ಬರೆದರೂ ಅವುಗಳ ಬಗ್ಗೆ ದೊಡ್ಡ ಚರ್ಚೆ ನಡೆದಿದೆ—ನವ್ಯ ವಿಮರ್ಶಕರಿಂದಲೂ ಕಲೆಗಾರಿಕೆಯ ಎತ್ತರವನ್ನು ಸೂಚಿಸುವ ಮಹಾದೇವರ ಪ್ರಭಾವ ಬಂಡಾಯ ಕತೆಗಳನ್ನು ಹೇಗೆ ಆವರಿಸಿದೆಯೆಂದರೆ ಹೊಸ ಕತೆಗಾರರು ಇದರಿಂದ ತಪ್ಪಿಸಿಕೊಳ್ಳುವುದೇ ಸವಾಲಾಗಿದೆ. ಕನ್ನಡ ವಿಮರ್ಶೆ ಮಾಡಿದ ತಪ್ಪೆಂದರೆ ಮಹಾದೇವರನ್ನು ಮನಸಲ್ಲಿಟ್ಟುಕೊಂಡು ಬಂಡಾಯದ ಕತೆಗಾರರನ್ನು (ಕವಿಗೆ ಕಾವ್ಯವನ್ನೂ) ಸಕಾರಾತ್ಮಕವಾಗಿ ವಿಮರ್ಶಿಸಿದ್ದು. ಹೀಗಾದರೆ ಬಂಡಾಯದಲ್ಲಿ ಮೂಡಿಬರುತ್ತಿರುವ ವೈವಿಧ್ಯವನ್ನು ಅರ್ಥಮಾಡಿಕೊಳ್ಳದ ಅಪ್ರಜಾಪ್ರಭುತ್ವೀಯ ಸ್ಥಿತಿಯುಂಟಾಗುತ್ತದೆ ತಂತ್ರವನ್ನು ವಿವರಗಳಲ್ಲಿ ಅಡಗಿಸುವುದು, ವಿನೋದಶೀಲತೆಯಿಂದ ವಸ್ತುನಿಷ್ಠೆಯನ್ನು ಸಾಧಿಸುವುದು, ಮತ್ತು ಅಂತಃಕರಣ ಕಲಕುವಿಕೆ—ಚಿಂತನಶೀಲಗೊಳಿಸುವಿಕೆಗಳನ್ನು ಒಟ್ಟಿಗೇ ಮಾಡುವುದು ಇವೆಲ್ಲ ಮಹಾದೇವರ ಕಥೆಗಾರಿಕೆಯ ಅನನ್ಯಗುಣಗಳಾಗಿವೆ. ದಲಿತರ ಹಸಿವು ಅವರಿಗೆ ಕಾಡಿಸಿದ ಸಂಗತಿಯಾಗಿವೆಯಾದರೂ ಅವರ ಸಾಂಸ್ಕೃತಿಕ ಚೈತನ್ಯವನ್ನು ಮಹಾದೇವ ಮರೆಯುವುದಿಲ್ಲ. ಕುಂವಿಯವರ ಹಸಿವೇ ಸರ್ವಸ್ವವಾದ ದಲಿತ ಜಗತ್ತಿನಲ್ಲಿ ಈ ಎರಡನೇ ಅಂಶದತ್ತ ಗಮನವಿಲ್ಲ. ಆದರೆ ಬೆಸಗರಹಳ್ಳಿಯವರು ಚಿತ್ರಿಸಿದ ಸುಮಾನಿಯಂಥ (ಅತಿ ವಿನಯವಂತ, ಹೋರಾಟವರಿವುಳ್ಳ ಆದರೆ ವಾಸ್ತವದಲ್ಲಿ ಕೈಸಾಗದ) ಪಾತ್ರಗಳೇಕೆ ಕುಂವಿ ಮಹಾದೇವರಲ್ಲಿ ಇಲ್ಲ. (ಕುಸುಮ ಬಾಲೆಯ ಚೆನ್ನ ರಸತನಕ ಕಾಯಬೇಕಾಯಿತು !) ಎಂದರೆ ಅವರು ಕಾಣಿಸುವ ದಲಿತ ಜಗತ್ತಿನ ವಾಸ್ತವವೇ ಅಂಥದು—ಪ್ರಜ್ಞಾ [illegible]ಯಾಗದುದು. ಆದರೂ ಬದುಕುವ ಹದದಲ್ಲಿ, ಕುಣಿತ, ಕಥೆಗಾರಿಕೆ, ಚಿತ್ರಬಿಡಿಸುವ, ಪ್ರಾಣಿ ಸಸ್ಯಗಳನ್ನು ಸಾಕುವ ಮೂಲಕ ಅವು ಸೃಜನಶೀಲ ಜೀವಂತಿಕೆಯನ್ನು ವ್ಯಕ್ತಮಾಡುತ್ತವೆ. ಅವಕ್ಕೆ ಪ್ರತಿರೋಧ ಅಥವಾ ಪ್ರತಿಭಟಿಸುವಿಕೆ ಇಲ್ಲವೆಂತಿಲ್ಲ : ಉದಾ. 'ನಿನ್ನ ಸಾವ್ಕಾರಿಕೆ ಇದ್ರ ನಿನ್ನ ಹಟ್ಟಿಗೆ ಕನ್ಲ' (ಮಾರಿಕೊಂಡವರು) 'ಕಂಡವರ ಹೊಲಸುಕ್ಕಂದು ಹೊಟ್ಟೆ ಬೆಳೆಸ್ಕಂಡಿರೊ ನಾವು ಎತ್ಲಾಗ ಹೋಗ್ಬೇಕು ಅಳಿ' (ಮೂಡಲ ಸೀಮೇಲಿ....) ಆದರೆ ಅವು ಬದುಕುತ್ತಿರುವ ಭೀಕರ ವಾಸ್ತವದಲ್ಲಿ

ವ್ಯವಸ್ಥೆಯನ್ನು ಎದುರಿಸಲಾರವು. ಆದರೂ ಅಪಹಾಸದ ಮೂಲಕ, 'ನನ್
ಮೊಮ್ಮಗ ಸುರಲೋಕದಲಿ ರಾಜಭಾರ ಮಾಡುವಂಥ' ವರ ಬೇಡುವ ಸಾಕಪ್ಪನ
ಮೂಲಕ, ಅವರು ಸಾಧ್ಯತೆಗಳನ್ನು ಸೂಚಿಸುತ್ತಾರೆ. ಮಹಾದೇವ ಸರಳವಾಗಿ ಕಥೆಯನ್ನು
ಹೇಳುತ್ತಲೇ ವಿವರಗಳಿಂದ ಸಂಕೀರ್ಣ ತಾತ್ವಿಕ ಕೇಂದ್ರವನ್ನು ರೂಪಿಸುವ ರೀತಿಗೆ
'ಮೂಡಲ ಸೀಮೇಲಿ'....ಕಥೆಯನ್ನು ಪರಿಶೀಲಿಸಬಹುದು : ಗೌಡರಪಟ್ಟಿ ಕಂಬ
ನಿಲ್ಲಿಸಿರುವ ರಂಗಪ್ಪನಿಗೆ ಮೂರು ದಿನದಿಂದ ಕೂಳಿಲ್ಲದಿರುವುದು, ಊರಿಗೆ ಬಂದ
ಕೆಲವೇ ದಿನಗಳಲ್ಲಿ ಶಾಸ್ತ್ರಿ ಮೇಷ್ಟ್ರು ಯಂತ್ರಗಿಂತ್ರದ ಮೂಲಕ ಹೊಲಕೊಂಡು ಬಾವಿ
ತೆಗೆಸಿರುವುದು, ಮೂರು ಕಾಸಿನ ಗೇಮಿಲ್ಲದಿದ್ದರೂ ಮುನ್ನೂರು ರೂಪಾಯಿ
ತಕ್ಕಳೋ ನರ್ಸಮ್ಮನ ಲಕ್ಕು, ರಾಜನ ಹರಿದ ಚಡ್ಡಿ—ಗೌರಮ್ಮನ ಗರಿಗರಿ ಸೀರೆ,
ರಂಗಪ್ಪನ ಬಾಸ ಕಾಣಿಸುವ ಹಟ್ಟಿ ಮತ್ತು ಕಣ್ಣಿದ್ದಷ್ಟು ತುಂಬಿಕೊಳ್ಳುವ ಗೌಡರಪಟ್ಟಿ
ಊರಿಗೆ ಲೈಟು ಬರುವ ಸಂಭ್ರಮ—ರಂಗಪ್ಪನಿಗೆ ಕಣ್ಣು ಕತ್ತಲೆಯಿಟ್ಟು ಬಾಸಿಂದ
ಕತ್ತಲು ಧುಮುಕುವುದು -ಹೀಗೆ ವರ್ಗವಿರೋಧಿ ಅಂಶಗಳನ್ನು ಕೂಡಿಸುವುದು ಇಂಥ
ಸಂಕೀರ್ಣ ತಾತ್ವಿಕತೆಯನ್ನು ಪಾಲಿಕಾರರ ಕತೆಗಳು ನಿಭಾಯಿಸುವ ಆಹ್ವಾನವನ್ನು
ಸ್ವೀಕರಿಸುವುದಿಲ್ಲವಾಗಿಯೇ ಅವರಲ್ಲಿ ಮಹತ್ವಾಕಾಂಕ್ಷೆಯಿಲ್ಲ. ಆದರೆ [illegible]
ವಷ್ಟು ಸರಳತೆಯಲ್ಲಿ, ಪಾಲೀಕಾರರು, ವಸ್ತುಗಾಗಿ ಹುಡುಕಾಟ ನಡೆಸದೆ, ಸಾಧಾರಣ
ಸಂಗತಿಗೂ ಅದನ್ನು ಕಾಣುವ ಸಮಾಜಪರ ದೃಷ್ಟಿಕೋನ ಮಾತ್ರದಿಂದಲೇ ಅದ್ಭುತ
ಸ್ಪರ್ಶ ಕೊಡುತ್ತಾರೆ. ಉದಾ : ಬುದ್ಧನ ನಾಡಿನಲ್ಲಿ ಶಾಸ್ತ್ರಿ ಮಾಸ್ತರ ಮಕ್ಕಳು,
ಪಾಲೀಕಾರರ ರಿಸ್ಕ್ ಇಲ್ಲದ ಈ ಕಥೆಗಾರಿಕೆಯೂ ಅಭಿಜಾತವಾಗಿದೆ. ಅವರು
ಬೇಕೆಂದೇ ನವ್ಯದ ಸಾಂಕೇತಿಕ ವಿಧಾನವನ್ನು ತ್ಯಜಿಸಿ, ಮಾನವೀಯ ಗ್ರಹಿಕೆಯ ಕ್ರಮ
ದಿಂದಲೇ (ಜತೆಗೆ ಜಾನಪದ ಸತ್ವ ಸೇರಿಕೊಳ್ಳುತ್ತದೆ.) ಇದನ್ನು ಸಾಧಿಸುತ್ತಾರೆ.
ಒಂದು ಬಗೆಯ ಮುಗ್ಧತೆ, ಮಾನವೀಯ ಅನುಕಂಪ, ದುರ್ಬಲರ ದುಃಖಕ್ಕೆ ಧಾವಿ
ಸುವ ಮನಸ್ಸುಗಳಿಂದ ಅವರ ಕತೆಗಳಲ್ಲಿ ನಿರ್ಮಾಣವಾಗುವ ಆರ್ದ್ರತೆಯೇ ಅಲ್ಲಿನ
ಜೀವಾಳವಾಗಿದೆ. ಸತ್ಯ-ನ್ಯಾಯದಂಥ ಮೌಲ್ಯಗಳ ಸರಳ ಪಾತಳಿಯಲ್ಲಿ ಅವರ ಕತೆ
ಗಳು ಎದ್ದು ನಿಲ್ಲಬಯಸುವುದರಿಂದ ಕೆಲವೊಮ್ಮೆ ಘಟನೆಯು ಆಸಕ್ತಿದಾಯಕ ನಿರೂ-
ಪಣೆಯಷ್ಟಕ್ಕೇ ನಿಂತು ಬಿಡುತ್ತವೆ. ಪಾಲೀಕಾರರ ಜಗತ್ತಿನಲ್ಲಿ ಎಲ್ಲ ದುರ್ಬಲರೂ
(ಮುಖ್ಯವಾಗಿ ಸ್ತ್ರೀಯರು) ಜಾಗ ಪಡೆಯುತ್ತಾರೆ. ಆದರೆ ಕುಂವಿಯಲ್ಲಿ ಅತ್ಯಂತ
ಕೆಳಸ್ತರದ ದಲಿತರ ಭೀಬತ್ಸ ಬದುಕು ಹೊರ ಬಂದು ದಿಗ್ಭ್ರಮೆಗೊಳಿಸುತ್ತದೆ.
ಲೋಕದ ಭೀಕರ ಹಸಿವು ಅವರ ಕತೆಗಳಲ್ಲಿ ಅರಿಯದಂತೆ ಚಿತ್ರಿತವಾಗುತ್ತದೆ—ಪ್ರೇಮ
ಚಂದರ 'ಹೆಣದ ಬಟ್ಟೆ'ಯಲ್ಲಿರುವಂತೆ. ಕುಂವಿಯವರ ಗಮನ ಈ ಘೋರ ಕತ್ತಲ
ತೊಣ್ಣೆಯತನ್ನು ಅದುಮಿಟ್ಟಿರುವ ಆರ್ಥಿಕ-ಸಾಮಾಜಿಕ ಒತ್ತಡಗಳ ಮೇಲೆಯೇ

ಹೆಚ್ಚು ಹರಿದಿದೆ. ನವ್ಯದ ಸವೆದ ಜಾಡಿನಲ್ಲಿ ಸಾಗುವ ಅವರ ಆರಂಭದ ಕತೆಗಳ, 'ಶೋಷಣೆ'ಯ ಸ್ವರೂಪವನ್ನು ವಾಚ್ಯವಾಗಿಯೇ ಗ್ರಹಿಸಲೆತ್ನಿಸಿದ್ದವು. ಆದರೆ ಕನ್ನಡದ ಶ್ರೇಷ್ಠ ಕತೆಗಳಲ್ಲೊಂದಾಗಿರುವ ಈಗಿನ 'ದೇವರ ಹೆಣ' ಕಥೆಯ ಹೊತ್ತಿಗೆ ಈ ಮಿತಿಗಳೆಲ್ಲ ನೀಗಿಕೊಂಡು ಅವರು ಪ್ರಬುದ್ಧ ಕತೆಗಾರಿಕೆಯನ್ನು ಪ್ರಕಟಿಸುತ್ತಿರುವರು. ಇದಕ್ಕೆ ಕಾರಣ ಕುಂವಿ ವಾಸ್ತವ ಮಾರ್ಗದತ್ತ ಸರಿಯುತ್ತಿರುವುದು, ವಿನೋದ ಹಾಗು ವ್ಯಂಗ್ಯದ ಮೂಲಕ ವಸ್ತುನಿಷ್ಠೆಯನ್ನು, ಕಲಾತ್ಮಕ ತಾಳ್ಮೆಯನ್ನೂ ಗಳಿಸಿಕೊಳ್ಳುತ್ತಿರುವುದು ವಾಸ್ತವಕ್ಕಿಂತ ಆಶಯವನ್ನೇ ಮುಖ್ಯವಾಗಿಸಿಕೊಂಡು ಕತೆ ಧಾವಿಸುವಾಗ ಅಥವಾ ಓದುಗರಿಗೆ ಶಾಕ್ ಕೊಡುವ ಸಾಂಪ್ರದಾಯಿಕ ತಂತ್ರ ಉದ್ದೇಶಪೂರ್ವಕವಾಗಿದ್ದಾಗ 'ಕತ್ತಲನು ತ್ರಿಶೂಲ ಹಿಡಿದ ಕಥೆ'ಯ ಮಿತಿಗಳು (ಕತ್ತಲನಿಗೆ ಮುಡಿಗಳನ್ನು ಕೆಡವಬೇಕೆಂಬ ಸಿಟ್ಟು ಬರುವುದು/ತ್ರಿಶೂಲ ಹಿಡಿದು ನುಗ್ಗುವ ಮೆಲೋಡ್ರಾಮಾಟಿಕ್ ಘಟನೆ) ಕಾಣಿಸಿಕೊಳ್ಳುತ್ತವೆ. ಜನಪ್ರಿಯ ಕತೆಗಾರರಿಗೆ (ಜೊಳುಷಾರು, ಶಾಂತರಸರಿಗೂ) ಉಂಟಾಗುವ ಪ್ರಲೋಭನೆಯ ಅಪಾಯವಿದು. ಕುಂವಿ ಕತೆಗಳ ದಲಿತರು ವಾಲಿಕಾರರ ಸ್ತ್ರೀ ಪಾತ್ರಗಳಂತೆ) ಜಳುವಳಿಯ ವೈಚಾರಿಕ ಪ್ರಜ್ಞೆಯ ಹಿನ್ನೆಲೆಯಿಲ್ಲದವರೂ, ಅಸಹಾಯಕರೂ ಆದರೂ ತಮ್ಮ ಸಹನೆಯ ಕಡೇ ಬಿಂದುವಿನಲ್ಲಿ ಸಿಡಿದು ಪ್ರತಿಹಿಂಸೆಗೆ ಇಳಿಯುತ್ತಾರೆ. ನನಗನಿಸಿದಂತೆ ಕುಂವಿ ಕಥೆಗಳ ಶಕ್ತಿಯೆಂದರೆ ಅವರ ಶೈಲಿಯ ಕಸುವು. ಪ್ರಾದೇಶಿಕ ವಿಶಿಷ್ಟ ಭಾಷೆಯಲ್ಲಿ ತಮ್ಮೆಲ್ಲ ಪ್ರಾಣವನ್ನು ತುಂಬಿ, ತೆತ್ತುಕೊಂಡು ಬರೆವ ಕತೆಗಾರನ involvement ತಾನು ನಿರ್ಮಿಸುವ ಜಗತ್ತಿನೊಡನೆ ಆತ್ಮೀಯತೆಯಿರುವುದು, ತಾನು ನೀಡುತ್ತಿರುವ ವಿವರಗಳು ಅನನ್ಯವೆಂಬ ಪ್ರಜ್ಞೆ — ಈ ಮೂರೂಸೇರಿ ಅವರ ಶೈಲಿಯು ಸಮೃದ್ಧತೆಯಿಂದ, ಜೀವದುಂಬಿಕೊಂಡಿದೆ. ತಾನು ಬರೆವುದು ಜೀವಂತ ಚಿತ್ರದಂತೆ ಎದ್ದು ಬರಬೇಕೆಂಬ ಮಹತ್ವಾಕಾಂಕ್ಷೆಯಲ್ಲಿ ಕುಂವಿ ಬರೆಯುತ್ತಿದ್ದಾರೆ. ಆದರೆ ಅನುಭವ ಮತ್ತು ಭಾಷೆಯ ಸೂರೆ ಹೊಡೆಯುವ ಆವೇಗವು ಶೈಲಿಯನ್ನು ಮಾಡುವ/ಅಂದಗೆಡಿಸುವ ಎಚ್ಚರವನ್ನು ಅವರು ವಹಿಸಬೇಕಿದೆ.

ಬೆಸಗರಹಳ್ಳಿ, ನಾಗವಾರರು, 'ನವ್ಯದ ಸೊಕ್ಕಿನ ದಿನ'ಗಳಲ್ಲಿ ಬರೆಯಲಾರಂಭಿಸಿದವರಾದರೂ, ಅವರ ಸಮಾಜವಾದಿ ತಾತ್ವಿಕತೆಯ ನಿಷ್ಠೆ ಮತ್ತು ವೈಯಕ್ತಿಕ ನಿರ್ಧಾರಗಳಿಂದ ಸಾಮಾಜಿಕ ಸಂಘರ್ಷಗಳನ್ನು ಅವರ ಕತೆಗಳು ತ್ಯಾಗ ಮಾಡಲಿಲ್ಲ. ನಿಷ್ಠುರವಾದ ಸ್ವವಿಮರ್ಶೆಯಿದ್ದುದರಿಂದಲೇ ಇವರಲ್ಲಿ ಭೂಮಾಲಿಕ ಪಾಳೇಗಾರಿಕೆಗಳನ್ನು ವಿರೋಧಿಸುವ ಮತ್ತು ದಲಿತ ಜಗತ್ತನ್ನು ಪ್ರೀತಿಯಿಂದ ಕಾಣಿಸುವ ಗುಣಗಳಿವೆ. ಆದರೆ ನಾಗವಾರರು ಆಯ್ದುಕೊಂಡ ರೂಪ, ನವ್ಯದ ಅಂತರ್ಮುಖಿಯಾದ ಶೈಲಿಯದಾಗಿತ್ತು. ಹೀಗಾಗಿ 'ಕೂಡಿಕೆ'ಯಂಥ ಶಿಸ್ತಿನ ಒಳ್ಳೇ ಕತೆಯಲ್ಲೂ ಬಿಬಿಬನಿ

ಯಾವ ಜೀವನದ ಛಾಯೆಯೂ ಗ್ರಾಮೀಣಾನುಭವವೂ ಪ್ರಜ್ಞಾ ಬೆಳವಣಿಗೆಯಿರದ ಪಾತ್ರ ಗಳೂ ನವ್ಯದ ಅಭಿವ್ಯಕ್ತಿ ವಿಧಾನದಲ್ಲಿ ಸಿಕ್ಕಿ ಉಸಿರು ಹಿಡಿದಂತೆ ಪ್ರಕಟವಾಗುತ್ತವೆ. ಇವರಿಬ್ಬರು ನಾಗವಾರರಿಗಿಂತ ಹಿಂದಿನ ಅನಂತರದ ಕತೆಗಳಲ್ಲಿ ಈ ವಸ್ತು ಮತ್ತು ಅಭಿವ್ಯಕ್ತಿ ಕ್ರಮದ ಬಿಗಿತುಕೊಳ್ಳ ಆಗದ ಬಿಗುವು ಕಡಿಮೆಯಾಗುತ್ತಾ ಬಂದಿತು. ಬೆಸಗರ ಹಳ್ಳಿ ಗಟ್ಟಿಯಾದ ವಸ್ತುವನ್ನು ಆರಿಸಿಕೊಂಡು, ತಂತ್ರದ ಬಗ್ಗೆ ಜಾಸ್ತಿ ತಲೆಕೆಡಿಸಿ ಕೊಳ್ಳದೆ ಬರೆಯುವ ಕಾರಣದಿಂದ ಅವರ ಕಥೆಗಳು ನೇರವಾಗಿ ಸಹಜವಾಗಿವೆ. ಮಾನವನನ್ನು ನಲುಗಿಸುವ ವ್ಯವಸ್ಥೆಯು ಅದು ಯಾವುದೇ ಇರಲಿ, ನಿಷ್ಠುರವಾಗಿ ನೋಡುವ ಬೆಸಗರಹಳ್ಳಿ ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳಂಥ ಕತೆಯನ್ನು ತುರ್ತು ಪರಿಸ್ಥಿತಿ ಹೊತ್ತಲ್ಲಿ ಬರೆಯಲು ಸಾಧ್ಯವಾಯಿತು. ತಾತ್ವಿಕತೆಯನ್ನು ಧ್ಯಾನ ಮಾಡುತ್ತಾ ಬರೆಯದಿದ್ದರೂ ಅವರ ಶ್ರೇಷ್ಠ ಕತೆಗಳು ಸರಳ ತರ್ಕಗಳಲ್ಲಿ ವಿಶ್ಲೇಷಿಸ ಲಾಗದಂತೆ ಸಂಕೀರ್ಣವಾಗಿವೆ. ಬೆಸಗರಹಳ್ಳಿಯವರದು ಭಾವುಕವಾಗಿ ಆರ್ದ್ರ ಜಗತ್ತು. ಎಂತಲೇ ಅಲ್ಲಿ ಬೌದ್ಧಿಕತೆಯು ಆವರಿಸಿಕೊಳ್ಳುವುದಿಲ್ಲ. ಇದಕ್ಕೆ ಹೋಲಿಸಿದರೆ, ನಾಗವಾರರ ಕತೆಗಳು, ಬೌದ್ಧಿಕ ಸತ್ವದಿಂದ ಮತ್ತು ಭಾವುಕತೆಯ ನಿರಸನದಿಂದ ಪ್ರಜ್ಞಾವಂತ ಮನಸ್ಸಿನ ಸೃಷ್ಟಿಗಳಾಗಿವೆ. ನಾಗವಾರರಲ್ಲಿ ವ್ಯಕ್ತಿತ್ವ ನಾಶಮಾಡಬಲ್ಲ ಆಸ್ತಿ ಜಾತಿಯಂಥ 'ಶಕ್ತಿ'ಗಳ, ಸಂವೇದನೆ ಗಾಢವಾಗಿದೆ. ಬಂಡಾಯದಲ್ಲೇ ಅವರ ಕಥೆಗಳು ವಿಶಿಷ್ಟ ಸಂವೇದನೆಯನ್ನು ಪ್ರತಿನಿಧಿಸುತ್ತವೆ. ಹೊಸ ಸಾಂಸ್ಕೃತಿಕ ಬದಲಾ ವಣೆಯನ್ನು ಕನಸುತ್ತಾ, ಪ್ರೇಮ ಪ್ರೀತಿಯಂಥ (ಕೇವಲ ಲೈಂಗಿಕವಲ್ಲದ) ತೀವ್ರ ಗಳಿಗೆಗಳಲ್ಲಿ ಮನುಷ್ಯ ನಿರ್ಮಿತ ಕೃತಕ ಬೇಲಿಗಳನ್ನು ಧಿಕ್ಕರಿಸಿ ನೈಜ ಮಾನುಷ್ಯತನ ಸ್ಥಾಪಿಸುವುದು ಅವುಗಳ ಆಶಯವಾಗಿದೆ. ಇದನ್ನು ಕೇವಲ ಆದರ್ಶವಾಗಿ ಕಾಣಿಸದೆ, ವಾಸ್ತವದ ಖಚಿತ ತಿಳಿವಳಿಕೆಯ ನೆಲೆಯಲ್ಲಿ ನಿಂತುಕೊಂಡೇ ಪರಿಭಾವಿಸುತ್ತವೆ. ದೊನ್ನ ದೊಂಬರಿಗೆ ಗಿರಿಜೆ ಎಳನೀರು ಹೋಳಿಗೆಗಳನ್ನು ಕೊಡುವ ಭಾಗಗಳು ಸೌಮ್ಯ ಕಲೆ ಗಾರಿಕೆಯ ಮತ್ತು ತಾತ್ವಿಕತೆಯ ಉನ್ನತ ಕ್ಷಣಗಳಾಗಿವೆ. ಬಹಳ ಸೂಕ್ಷ್ಮವಾದುದನ್ನು ಹಿಡಿದುಕೊಳ್ಳುವ ನಾಗವಾರರ ಕಲೆಗಾರಿಕೆಯಲ್ಲಿ ಚಿತ್ತಾಲರ ಕುಸುರಿ ಕೆತ್ತನೆಯ ಕಾಳಜಿ ಗಳೇನೂ ಇಲ್ಲ. ಅವರೆ ಅನುಭವವನ್ನು ಚೆಲ್ಲಿಕೊಂಡಂತೆ ಬರೆಯುವ ಕಡೆ (ನೀಳ್ಗತೆ ಗಳಲ್ಲಿ) ಇಂಥ ಸೂಕ್ಷ್ಮಗಳು ಏಕಾಗ್ರ ಓದಿನಿಂದ ಮಾತ್ರ ದಕ್ಕುತ್ತವೆ. ನಾಗವಾರರು ಪಾತ್ರಗಳ ಮೇಲೆ ಬಿಗಿಹಿಡಿತ ಹೊಂದುವುದರಿಂದ ಅವು ತಮ್ಮ ಮಾತುಗಳಿಗಿಂತ ವಿವರಣೆಗಳಿಂದಲೇ ಬೆಳೆಯುತ್ತವೆ. ಹೀಗಾಗಿ ನಾಟಕೀಯತೆ ಅವರಲ್ಲಿ ಕಡಿಮೆ. ಬಹಳ ತೀವ್ರ ಭಾವ ವಿನ್ಯಾಸವನ್ನು ತೋರಿಸುವ ಬರಗೂರರು ವಸ್ತುವಿನ ಏಕತಾನದಿಂದ '[illegible]' ಕಥೆಯ ಮೂಲಕ ಹೊರಬರಲು ಯತ್ನ ನಡೆಸಿದ್ದಾರೆ. ತೀವ್ರ ಸ್ವರದ ತೀರ ಅನುಭವ ಮತ್ತು ಪ್ರಜ್ಞಾಪೂರ್ವಕವಾದ ವೈಚಾರಿಕ ಎಚ್ಚರಗಳು ಅವರ ಕತೆಗಳ ಮಿತಿಯಾಗಿವೆ.

ಮುಸ್ಲಿಂ ಜಗತ್ತಿನ ಮೌನವು ಒಡೆದಿದ್ದು ಬಂಡಾಯ ಕತೆಗಳ ಇನ್ನೊಂದು ಆಯಾಮವಾಗಿದೆ. ಈ ಕತೆಗಾರರು-ಬೊಳುವಾರು, ಕಟ್ಪಾಡಿ, ಸಾರಾ, ಬಾನು, ರಷೀದ್, ಮುಮ್ತಾಜ್ ಬರೆಯುವತನಕ ಕನ್ನಡ ಪ್ರಜ್ಞೆಗೆ ಈ ಲೋಕ ದಲಿತ ದಂತೆಯೇ ಅಜ್ಞಾತವಾಗಿತ್ತು. ಪಶಾಪತುಶಾಹಿಯ ತಂತ್ರ ಹಾಗೂ ಮತೀಯ ರಾಜಕಾರಣದ ದುರಾಸೆ ಹುಂಬತನಗಳ ಫಲವಾಗಿ ಒಡೆದುಹೋದ ಎರಡು ಸಮುದಾಯಗಳು ಒಳಗೇ ಶಂಕೆ–ಅಪನಂಬಿಕೆಗಳಲ್ಲಿ ದ್ವೇಷ-ಆತಂಕಗಳನ್ನು ಬೆಳೆಸಿಕೊಂಡು, ಮನಸ್ಸುಗಳ ನಡುವೆ ಗೋಡೆಗಳನ್ನೇ ಎಬ್ಬಿಸಿಕೊಂಡು ಬದುಕಿದವು. ಪರಿಣಾಮವೇನೆಂದರೆ ಮುಸ್ಲಿಂ ಸಮುದಾಯವು ಸ್ವರಕ್ಷಣೆಯಲ್ಲಿ ನಿರತವಾಗಿ, ಸ್ವವಿಮರ್ಶೆಯನ್ನು ಕಳೆದು ಕೊಂಡು ಬಿಟ್ಟಿತು ಮತ್ತು ಪುರೋಹಿತಶಾಹಿಯ ಹಿಡಿತಕ್ಕೆ ಬಿದ್ದಿತು. ಈ ಕಥೆಗಾರರು ನಿಷ್ಠುರವಾಗಿ, ಜನಾಂಗ ವಿಮರ್ಶೆ ಮಾಡುತ್ತಾ ಪ್ರೀತಿ ಸಹಾನುಭೂತಿಯಿಂದ ಬರೆಯುತ್ತಾ ಸಂಕುಚನಗೊಂಡ ಸಮುದಾಯವನ್ನು ಬಿಡುಗಡೆ ಮಾಡುತ್ತಾ ಎರಡು ಉದ್ದೇಶಗಳನ್ನು ಸಾಧಿಸಿದರು. ಒಂದು ; ಇಲ್ಲೂ ಮನುಷ್ಯ ಸಹಜ ದುಃಖ ದುಮ್ಮಾನಗಳಿವೆ ಎಂದು ಬಹುಸಂಖ್ಯರ ತಪ್ಪುಕಲ್ಪನೆಯನ್ನು ನಿವಾರಿಸಿದ್ದು, ಎರಡು: ಸಮುದಾಯವನ್ನು ಧರ್ಮದ ಮುಖವಾಡದಲ್ಲಿ ಒಳಗೇ ಗೆದ್ದಲಿನಂತೆ ನಾಶ ಮಾಡುತ್ತಿದ್ದ ಪ್ರತಿಗಾಮಿ ಶಕ್ತಿಗಳನ್ನು ದುರ್ಬಲರ (ಸ್ತ್ರೀಯರ) ಪರವಾದ ದೃಷ್ಟಿಕೋನದಿಂದ ಅನಾವರಣಮಾಡಿ, ಎಚ್ಚರ ಮೂಡಿಸಿದ್ದು. ಸ್ತ್ರೀಯರು ಬರೆದಿದ್ದಂತೂ ಕ್ರಾಂತಿಯಂತಾಯಿತು. ಈ ಹಿಂದೆ ಬಂದ ಮುಸ್ಲಿಂ ಬರಹಗಾರರು ಬೆಳೆಸಿಗೊಂಡ ಸಂಕೋಚದಿಂದ ಆಗದ ಕೆಲಸವನ್ನು ಮಾಡುತ್ತಿರುವ ಈ ಬರಹಗಾರರು ಬಂಡಾಯದ ಹೊತ್ತಿನಲ್ಲೇ ನಿರ್ಭಿಡೆಯಿಂದ ಬರೆಯುತ್ತಿರುವುದು ಮುಖ್ಯ ಸಂಗತಿಯಾಗಿದೆ.

ಪರಿಣಿತ ಕತೆಗಾರರಾದ ಬೊಳುವಾರು ಅವರು ತಾತ್ವಿಕವಾಗಿ ಪ್ರಬುದ್ಧರೂ ಆಗಿರುವುದರಿಂದ ಅವರ ಕತೆಗಳು ಸಂಕೀರ್ಣವಾದ ವಸ್ತುವನ್ನೂ ಸಲೀಸಾಗಿ ನಿಭಾಯಿಸುತ್ತವೆ. ಆದರೆ ಬೊಳುವಾರರಿಗೆ ವಿಸ್ಮಯಕ್ಕಿಂತ, ವೈಚಾರಿಕವಾಗಿ ವಿಶ್ಲೇಷಿಸಿ, ಪ್ರಶ್ನೆಯ ಮೂಲಕ ಮೌಲ್ಯಗಳನ್ನೂ ಹುಡುಕಲು ಹಚ್ಚುವ ವಿಧಾನ ಇಷ್ಟ. ಇದರಿಂದ ಅವರ ಕತೆಗಳಲ್ಲಿ ಚಾತುರ್ಯವಿದೆ. (ಅಂಕ) ಈ ಬೌದ್ಧಿಕತೆಯನ್ನು ಮೀರುವ ಲಕ್ಷಣಗಳಲ್ಲಿ, ಮಾನವೀಯ ಕಳಕಳಿಯ ತೀವ್ರತೆಯಲ್ಲಿ (ರುಖಿಯಾ, ದೇವರುಗಳ ರಾಜ್ಯದಲ್ಲಿ ಮುತ್ತುಚ್ಚೇರಾ) ಅವರ ಶ್ರೇಷ್ಠ ಕತೆಗಳು ಬಂದಿವೆ. ಬೊಳುವಾರರು ವೈಚಾರಿಕವಾಗಿ ವಿಗ್ರಹ ಭಂಜಕ ನಿಲುವಿನಿಂದ ಸಾಂಪ್ರದಾಯಿಕ ಸಮಾಜಕ್ಕೆ ಸವಾಲೆಸೆದರೆ ಕಟ್ಪಾಡಿಯವರು ಒಳಗೇ ಇರುವ ಧಾರ್ಮಿಕ ಸಜ್ಜನನಂತೆ, ಇಸ್ಲಾಮಿನ ಜನಪರ ಮೂಲಭೂತ ತತ್ವಗಳ ನೆಲೆಯಿಂದಲೇ ಪ್ರಶ್ನಿಸುತ್ತಾರೆ. ಇವರ ಸಾತ್ವಿಕ ಸಿಟ್ಟಿಗೆ ವ್ಯವಸ್ಥೆಯನ್ನು ಅಲ್ಲಾಡಿಸುವ ಶಕ್ತಿ ಬಂದಿರುವುದೇ ಗಾಢ 'ತಿಳಿವಳಿಕೆ'ಯಿಂದ. ಹೀಗಾಗಿ

ವರ್ತಮಾನದ ಮುಸ್ಲಿಮ್ ಬದುಕಿನ ವೈರುಧ್ಯಗಳನ್ನು ವಿಮರ್ಶಿಸುವ ಕಟ್ಪಾಡಿಯವರ ಪ್ರಹಾರ ಹೆಚ್ಚು ತೀವ್ರವಾಗಿದೆ. ಇವರ ಗರ್ಜಿಸುವ ಕ್ರಾಂತಿಕಾರಿ ನಾಯಕರಿಗಿಂತ (ಕ್ರೌರ್ಯ, ದ್ವೇಷ) ಮುಗ್ಧವಾದ ಮಕ್ಕಳ ವಿಸ್ಮಯ ಪ್ರಜ್ಞೆಯಿಂದ ಹಾಯುವ ವಿಷಾದದ ವ್ಯಂಗ್ಯವು (ಹತ್ಯೆ, ಅಪ್ಪ, ಅಕ್ಕನ ಮದುವೆ, ನೋಂಬು) ಪರಿಣಾಮಕಾರಿಯಾಗಿದೆ. ಬೊಳುವಾರರು, ವೈರುಧ್ಯಗಳನ್ನು ವ್ಯಂಗ್ಯದ ಮೂಲಕ ಸೂಚಿಸುತ್ತಾರೆ. ಇವನ್ನು ಕಟ್ಪಾಡಿ ಪಾತ್ರಗಳು ಪಡುವ ಪಾಡಿನಲ್ಲಿ, ಅವರ ಮುಗ್ಧತೆಯಲ್ಲಿ ವಿಷಾದವಾಗಿ ಹೊಳೆಸುತ್ತಾರೆ. ಸಾರಾ ಅವರದು ನೇರವಾದ, ಆಕ್ರೋಶದ ಅಭಿವ್ಯಕ್ತಿ. ಅವರು ಭಾವುಕವಾಗಿ ತಾವೂ ಕತೆಯ ಪಾತ್ರಗಳಲ್ಲಿ ಒಳಗಾಗುವುದರಿಂದ ವಾಚ್ಯವಾಗಿ ಅನ್ಯಾಯಗಳನ್ನು ಹೇಳುತ್ತಾರೆ. ಅವರ ಕಥೆಗಳ ಸತ್ವ ನೋವುಣ್ಣುವ ಪ್ರಾಮಾಣಿಕತೆ ಮತ್ತು ಅನ್ಯಾಯಗಳನ್ನು ಎತ್ತಿ ತೋರಿಸುವ ನ್ಯಾಯಗುಣವಾಗಿದೆ. ಅಸಹಾಯಕರನ್ನು ಪ್ರೀತಿಯಿಂದ ಚಿತ್ರಿಸುವ ಈ ಕಥೆಗಾರರು ಜನವಿರೋಧಿ ಶಕ್ತಿಗಳನ್ನು ವ್ಯಂಗ್ಯ ಸಿಟ್ಟಿಲ್ಲದೆ, ಕರುಣೆಯಿಂದ ಅಥವಾ comic ಆಗಿ ಯಾಕೆ ನೋಡಲು ಸಾಧ್ಯವಾಗಿಲ್ಲ ? ಎಂಬ ಪ್ರಶ್ನೆಗೆ ಉತ್ತರ ಬರಬೇಕಿದೆ. ಧಾರ್ಮಿಕ ಸಂಪ್ರದಾಯ ಮತ್ತು ಮನುಷ್ಯತ್ವಗಳ ಆಯ್ಕೆ ಬಂದಾಗ ಎರಡನೆಯದನ್ನು ಆರಿಸಿಕೊಳ್ಳುವ ಈ ಕಥೆಗಾರರು ಸಾಂಸ್ಕೃತಿಕವಾಗಿ ತೋರಿರುವ ಧೈರ್ಯವು ಈ ಹೊತ್ತಿನ ದೊಡ್ಡ ಪ್ರತಿಭಟನೆಯಾಗಿದೆ. ರಷೀದ್ ಸಾಂಸ್ಕೃತಿಕ ವಿವರಗಳ ಮೂಲಕ ಸಾಗುವ ವಾಸ್ತವ ಮಾರ್ಗಕ್ಕಿಂತ ಭಿನ್ನದಾರಿ ತುಳಿದು, ಆತ್ಮಜೀವಿಗಳ ನೋವೇ ಸರ್ವಸ್ವವಾಗುವ ದೊಡ್ಡ ತತ್ವಜ್ಞಾನಿಯ ಎತ್ತರದಿಂದ ಬರೆಯುತ್ತಿದ್ದಾರೆ. ಹೊಸತೂ, ವಿಶಿಷ್ಟವೂ ಆದ ಈ ಪ್ರತಿಭೆ ಕನ್ನಡದ ಯಾವ ಪ್ರಭಾವವೂ ಇಲ್ಲದಂತೆ ಬೆಳೆಯುತ್ತಿದೆ. ಆದರೆ ವಾಸ್ತವದ ಮೂರ್ತ ವಿವರಗಳನ್ನು ನಿರಾಕರಿಸುವ ಮಾರ್ಗ ಹೇಗೆ ಬದುಕುತ್ತದೊ ? ಮುಸ್ಲಿಂ ಲೇಖಕರಿಗೊಂದು ಇಕ್ಕಟ್ಟಿದೆ : ತಮ್ಮದಲ್ಲದ ಭಾಷೆಯಲ್ಲಿ ತಮ್ಮದಲ್ಲದ ಸಾಂಸ್ಕೃತಿಕ ಲೋಕಕ್ಕೆ ಪರಿಚಯಗೊಳ್ಳುತ್ತಾ, ಎರಡು ಸಮುದಾಯಗಳ ಪ್ರಜ್ಞೆಯನ್ನು ವಿಸ್ತರಿಸುತ್ತಾ, ಸ್ವಂತ ಸಮುದಾಯವನ್ನು ವೈಚಾರಿಕವಾಗಿ ಜಾಗ್ರತಗೊಳಿಸುತ್ತಲೇ ಅಲ್ಲಿನ ಸಂಪರ್ಕ ಕಡಿದುಕೊಳ್ಳದಂತೆ ಒಂದಾಗಿಸುತ್ತಾ—ಹೀಗೆ ಬಹುಮುಖೀ ಹೊಣೆಯನ್ನು ನಿಭಾಯಿಸಬೇಕಿದೆ. ಯಾಕೆ ಈ ಕತೆಗಾರರು ತಮ್ಮ ಸಮುದಾಯದ ಆಚೆಗಿನ ಅನುಭವವನ್ನು ಒಳಗೊಳ್ಳಲಾಗುತ್ತಿಲ್ಲ ? (ಹಿಂದೂ ಸಮಾಜದ ಸಮಸ್ಯೆಗಳಿಗೆ ಇವರ ತಾಟಸ್ಥ್ಯ ಯಾಕೆ ? ಎಂಬರ್ಥದಲ್ಲಿ) ಈ ಪ್ರಶ್ನೆಗೆ ಉತ್ತರ ಸರಳವಾಗಿಲ್ಲ. ಹಿಂದೂ–ಮುಸ್ಲಿಮರಿಬ್ಬರೂ ಕೂಡಿ ಕಟ್ಟಿಕೊಂಡ ಸಮಾಜವಂತೂ ಈ ಕಥೆಗಾರರಲ್ಲಿದೆ. ಅವರಲ್ಲೂ ಹಿಂದೂ–ಮುಸ್ಲಿಂ ಮತೀಯವಾದಿಗಳನ್ನು ಈ ಲೇಖಕರು ಅನಾವರಣ ಮಾಡಿದ್ದಾರೆ. ಒಡೆದ ನಮ್ಮ ಸಾಮಾಜಿಕ ಸಂದರ್ಭವು ಒಬ್ಬನ ಅನುಭವ ಮತ್ತು ಸಂವೇದನೆಗಳಿಗೆ ಒಡ್ಡಿರುವ ತೊಡಕು, ಕೋಮು ದ್ವೇಷದ ಫಲವಾಗಿ ಉಗ್ರವಾಗಿರುವ ವಾತಾವರಣ, ತಮ್ಮ

ಜನಾಂಗಕ್ಕೆ ಬಾಯಿಯಾಗಬೇಕಾದ ತುರ್ತು, ಇವೆಲ್ಲ ಇದಕ್ಕೆ ಕಾರಣವಾಗಿವೆಯೇ ? ಅಥವಾ ತಮ್ಮ ಜನಾಂಗದ ಬದುಕಿನಿಂದ ಹೊರಬಂದು ನೋಡುವ ಸ್ಥಿತಿ ಬಂದಿಲ್ಲವೇ?

ಕನ್ನಡಕ್ಕೆ ಮೊದಲಿಂದಲೂ ಕೌಟುಂಬಿಕ ಸಂಬಂಧಗಳ ಜಗತ್ತನ್ನೇ ಸುತ್ತುವ ಜನಪ್ರಿಯ ಕತೆಗಾರ್ತಿಯರು ವ್ಯವಸ್ಥೆಯ ಅಪೇಕ್ಷೆಗಳನ್ನು ತಣಿಸುತ್ತಾ ಬಂದಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯಕ್ಕೆ ಪ್ರಬುದ್ಧವೆನ್ನಬಹುದಾದ ಮಹಿಳಾಪ್ರಜ್ಞೆ ಪ್ರವೇಶಗೊಂಡಿದ್ದೇ ಎಪ್ಪತ್ತರ ದಶಕದ ಕಾವ್ಯದಿಂದ ಎನ್ನಬೇಕು, ಬಹುಶಃ ಕತೆಗಳಲ್ಲಿ ವೀಣಾರಿಂದ ಇದು ಎದ್ದು ಕಾಣತೊಡಗಿತು. ಆಮೇಲೆ ವೈದೇಹಿ, ಗೀತಾ, ಪೂರ್ಣಿಮಾ ಈಗೀಗ ಗಿರಿಜಮ್ಮ, ಗಂಗಾ, ಲಲಿತಾ ನಾಯಕ, ಸಾರಾ, ಬಾನು, ಮುಷ್ತಾಕ್ ಹೆಸರುಗಳು ಕಾಣಿಸಿದವು. ತೆಲುಗಿನಲ್ಲಿ ರಂಗನಾಯಕಮ್ಮನಂಥವರು ತೋರಿದ ವೈಚಾರಿಕ ದಿಟ್ಟತನ ಕನ್ನಡದಲ್ಲಿ ಬಹುಶಃ ಇನ್ನೂ ಬಂದಿಲ್ಲವೇನೋ ? ಉರ್ದುವಿನಲ್ಲಿ ಇಸ್ಮತ್ ಚುಗ್ತಾಯಿಯನ್ನು ನಾವು ಅಧ್ಯಯನ ಮಾಡಬೇಕಿದೆ. ಹೆಣ್ಣು ಬರೆವುದೇ ಬಂಡಾಯವೆಂಬ ಸ್ಥಿತಿಯಿದೆಯಾದರೂ, ವ್ಯವಸ್ಥೆ ರೂಪಿಸಿದ ನಿಯಮಗಳಲ್ಲೇ ತುಸು ಸುಧಾರಣೆಗೆ ಯತ್ನಿಸುವುದು 'ಇಷ್ಟೇ ಸಾಧ್ಯ'ವೆಂಬ ವಾಸ್ತವವೋ, ಮಹತ್ವಾಕಾಂಕ್ಷೆಯಿಲ್ಲದ ಬರೆವಣಿಗೆಯ ಪರಿಣಾಮವೋ ಅಥವಾ ಕೂಡು ಹೋರಾಟದ ಅರಿವು ಬರದಂಥ ಸ್ಥಿತಿಯಿಂದಾದ ಪರಿಣಾಮವೋ ಗೊತ್ತಾಗಿಲ್ಲ. ಯಾಕೆಂದರೆ ಬಂಡಾಯದೊಂದಿಗೆ ಈ ಸ್ತ್ರೀ ಪ್ರಜ್ಞೆಯ ಧಾರೆಯು ಸಕ್ರಿಯವಾಗಿ ಕೂಡಿಕೊಳ್ಳದೆ ಗುಮಾನಿಯಿಂದ ತುಸು ದೂರನಿಂತಿದೆ : ಆದರೆ ಬಂಡಾಯ ಕತೆಗಳಲ್ಲಿ ಹೆಣ್ಣನ್ನು ಬದುಕಿನ ದೊಡ್ಡ ಚೈತನ್ಯವಾಗಿ ಚಿತ್ರಿಸುತ್ತಿರುವ ಬಗೆಯು ಮಾತ್ರ ಎದ್ದು ಕಾಣುವಂತಿದೆ. ವೀಣಾ ಕತೆಗಳಲ್ಲಿನ ಸಹಜತೆ ಮತ್ತು ವಾಸ್ತವ ಗುಣಗಳು ಅಪೂರ್ವವಾಗಿವೆ. ಅವರ ಇತ್ತೀಚಿನ 'ತಿರುಗಿ ಹೋದಳು' ಕಥೆ ಅಂಥ ಸುಡು ವಾಸ್ತವದಲ್ಲಿ ಹುಟ್ಟಿದ ಕತೆ. ವೈದೇಹಿ ಹೆಣ್ಣಿನಂತರಂಗವನ್ನು ಹೊಕ್ಕು ಅದನ್ನು ಕಾಣಿಸುತ್ತಿದ್ದಾರೆನಿಸಿದರೂ, ಅದರೊಳಗೆ ಅವಳ ವ್ಯಕ್ತಿತ್ವವನ್ನು ರಕ್ಷಣೆಯ/ಗೌರವದ ನೆಪದಲ್ಲೇ ಈ ವ್ಯವಸ್ಥೆ/ಸಮಾಜಗಳು ಸೂಕ್ಷ್ಮ ವಿಧಾನಗಳಲ್ಲಿ ನಾಶಮಾಡುತ್ತಿರುವುದನ್ನು ಕಾಣಿಸುತ್ತಾರೆ. ಲಲಿತಾ ನಾಯಕರಲ್ಲಿ ರೂಪದ ಯಾವ ಕಾಳಜಿಯೂ ಇಲ್ಲವಾಗಿ ಕಾಡುವ ಯಾವ ನೆನಪೂ ಉಳಿಯದಂತಾಗಿದೆ ಮತ್ತು ಮೆಲೊಡ್ರಾಮಾಟಿಕ್ ಸಂಗತಿಗಳು ಅವರ ಬರಹದ ದೋಷಗಳಾಗಿವೆ.

ಬಂಡಾಯ ಕತೆಗಳು ಪ್ರತಿ ಸಂಸ್ಕೃತಿಯೊಂದನ್ನು ನಿರ್ಮಿಸುವ ಆಶಯಗಳನ್ನು ಪಡೆದಿವೆ. ಕೆಳ ವರ್ಗಗಳು, ಸ್ತ್ರೀಯರು ಅಲ್ಪಸಂಖ್ಯಾತರು ಹೆಚ್ಚು ದಿಟ್ಟವಾಗಿ ಬರೆಯಲಾರಂಭಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ. ಬಂಡಾಯ ಕತೆಗಾರರು ಶೋಷಣೆಯ ಕಲ್ಪನೆಗೇ ಜೋತು ಬಿದ್ದಿಲ್ಲ ಎಂಬುದಕ್ಕೆ ಪಾಲಿಕಾರ, ನಾಗವಾರ, ಕರೀಗೌಡ, ರಷೀದ್

ಮೊದಲಾದವರ ಕತೆಗಳು ಉದಾಹರಣೆಯಾಗಿವೆ. ಆದರೂ ಬದುಕಿನ ಎಲ್ಲ ಚೆಲುವು ವೈವಿಧ್ಯಗಳಿಗೆ ವಿಸ್ಮಯಪಡುವ ಗುಣವೊಂದು ಕಡಿಮೆಯಾಗಿದೆಯೆನಿಸುತ್ತದೆ. ಕಲೆಯ ದೃಷ್ಟಿಯಿಂದ ಬಂಡಾಯ ಹೊಸ ಸಾಧ್ಯತೆಗಳತ್ತ ಖಂಡಿತ ನೋಡುತ್ತಿದೆ. ಕುಂವಿ, ಬೊಳುವಾರು ಇವರ ಪ್ರಯೋಗಶೀಲತೆಗಳು ಕಾಣುತ್ತಿವೆ. ಆದರೆ ಮಾಲಗತ್ತಿ, ಕಟಗಿಯಂಥ ದಲಿತ ಬರಹಗಾರರ ಕಥೆಗಳು ಭರವಸೆಯಿಂದ ಕೂಡಿಲ್ಲ. ದಲಿತ ಲೋಕದಿಂದ ಸ್ತ್ರೀ ಪ್ರಜ್ಞೆಯೊಂದು ಇನ್ನೂ ಬರಬೇಕಿದೆ. ಮುಸ್ಲಿಂ ಬದುಕನ್ನು ಕುರಿತು ಉಳಿದ ಲೇಖಕರು ಈಗೀಗ ಬರೆಯಲಾರಂಭಿಸಿದ್ದಾರೆ. ಆದರೂ ಕೋಮು ಸಂಘರ್ಷದ ವಸ್ತು ಇನ್ನೂ ಯಾಕೆ ಬಂಡಾಯ ಕತೆಗಾರರಿಗೆ ತೀವ್ರವಾಗಿ ಕಾಡಿಸಿಲ್ಲವೋ ತಿಳಿಯದು; ಬಂಡಾಯ ಕತೆಗಳನ್ನು ಮೀರುವ ಹೊಸ ಮಾರ್ಗವೊಂದು ಕಾಣಿಸುತ್ತಿದೆಯೇ? ಎಂದರೆ ಸದ್ಯಕ್ಕೆ ಇಲ್ಲವೆನ್ನಬಹುದು ಅಥವಾ ಬಂಡಾಯ ಲೇಖಕರು ಈಗೀಗ ಬರೆಯು[illegible] ಮಾಡಿರುವುದರಿಂದ ಅವರ ಸಾಧ್ಯತೆಗಳು ಮುಗಿದಿವೆಯೆಂಬಂತೆ ಯೋಚಿಸುವುದಾದರೂ ಯಾಕೆ?

ಅಳಲು

ನಿನ್ನ ಪ್ರೀತಿಗಾಗಿ ಬರೆದ ಕವಿತೆಗಳೆಲ್ಲವನ್ನು
ಇಂದು ರದ್ದಿ ಅಂಗಡಿಗೆ
ಮಾರಾಟ ಮಾಡಲು ಬಂದಿರುವೆ
ನೀನು ಚುಂಬಿಸಿದ ಪ್ರತಿ ಕವಿತೆಗಳ
ಪ್ರತಿ ಸಾಲುಗಳನ್ನು ಇಂದು ರದ್ದಿಯವ
ಕಿಲೋಗಟ್ಟಲೇ ತೂಗುತ್ತಾನೆ
ನನ್ನ ಪ್ರೀತಿ ನನ್ನ ಹತಾಶೆ ನನ್ನ ನಿಟ್ಟುಸಿರು
ನಾನು ನಿನಗೆ ಹೇಳಿದ ಅಸಂಖ್ಯಾತ ಮಾತುಗಳು
ಇಂದು ರದ್ದಿ ಅಂಗಡಿಯ
ಹೊರಗೆ ಪ್ರದರ್ಶನಕ್ಕಿಡಲಾಗುತ್ತಿದೆ
ನಿನ್ನ ವರ್ಣಿಸಿದ ಕವಿತೆಗಳೆಲ್ಲವನ್ನು
ಇಂದು ಕೇವಲ ಕಾಗದಗಳಂತೆ
ಭಜಿ ಮಿರ್ಚಿ ಕಟ್ಟಲು ಉಪಯೋಗಿಸಲಾಗುತ್ತಿದೆ
ನಿನ್ನ ಪ್ರೀತಿಗಾಗಿ ಬರೆದ ಕವಿತೆಗಳೆಲ್ಲವನ್ನು
ಪ್ರಿಯೆ, ಇಂದು ರದ್ದಿ ಅಂಗಡಿಗೆ ಮಾರಲು ಬಂದಿರುವೆ

ಮೂಲ ಉರ್ದು : ಸಾಹೀರ್ ಲುಧಿಯಾನ್ವಿ

ಕನ್ನಡಕ್ಕೆ : ಸರಜೂ ಕಾಟ್ಕರ್

ನಾ. ಮೊಗಸಾಲೆ ಅವರ ಕಾದಂಬರಿಗಳು : ಪರಾಮರ್ಶೆ

—ಡಾ|| ಸಿ. ಎನ್. ರಾಮಚಂದ್ರನ್

ಡಾ|| ನಾ. ಮೊಗಸಾಲೆಯವರ ಮೊದಲನೆಯ ಕಾದಂಬರಿ 'ಮಣ್ಣಿನ ಮಕ್ಕಳು', ೧೯೬೬ರಲ್ಲಿ ಪ್ರಕಟವಾಯಿತು. ಆಗಿನ ಜ್ವಲಂತ ಸಮಸ್ಯೆಯಾದ ಭೂ ಸುಧಾರಣಾ ಕಾಯಿದೆಯ ಸುತ್ತಾ ರಚಿಸಿರುವ ಈ ಕೃತಿಯಲ್ಲಿ (ಇದು ಪ್ರಥಮ ಕೃತಿಯಾದುದರಿಂದ) ಸಹಜವಾಗಿಯೇ ಕಾರಂತರ ಮತ್ತು ಕೃಷ್ಣಮೂರ್ತಿ ಪುರಾಣಿಕರ ಪ್ರಭಾವ ದಟ್ಟವಾಗಿದ್ದು, ಕೃತಿ ಅಷ್ಟೇನೂ ಯಶಸ್ವಿಯಾಗಿಲ್ಲ. ಸಂಕಪ್ಪ ಸೆಟ್ಟಿ-ಮಂಜಪ್ಪ ಇವರುಗಳ ಆದರ್ಶ (?) ಧಣಿ–ಒಕ್ಕಲು ಸಂಬಂಧ ಕೃತಿಯ ಕೇಂದ್ರದಲ್ಲಿದ್ದು, ಇದರ ಸುತ್ತಲೂ ಇಂದಿನ ಸ್ವಾರ್ಥಪೂರ್ಣ ರಾಜಕೀಯ ಮತ್ತು ಅಡ್ಡ ದಾರಿಗಳೆಯುವ ಆಧುನಿಕ ವಿದ್ಯಾಭ್ಯಾಸ ಇವುಗಳು ಬರುತ್ತವೆ. ಕಾರಂತರನ್ನು ಬಿಟ್ಟು ಇತರ ಕಾದಂಬರಿಕಾರರು ಆರಿಸಿಕೊಳ್ಳಲು ಹೆದರುವ ವಸ್ತುವನ್ನು 'ಮಣ್ಣಿನ ಮಕ್ಕಳು' ಆರಿಸಿಕೊಂಡಿದ್ದರೂ, ಸಮಸ್ಯೆಯನ್ನು ಮಾನವ ಸಂಬಂಧಗಳ ಮೂಲಕ ಆಳವಾಗಿ ವಿಶ್ಲೇಷಿಸುವುದರಲ್ಲಿ ಕೃತಿ ಸೋಲುತ್ತದೆ.

೧೯೬೮ರಲ್ಲಿ ಹೊರಬಂದ ಎರಡನೆಯ ಕಾದಂಬರಿ 'ಅನಂತ', ಮೊದಲನೆಯದಕ್ಕಿಂತ ಹೆಚ್ಚು ಸಫಲವಾಗಿದೆ. ಚರ್ವಿತ ಚರ್ವಣ ಕಥಾ ವಸ್ತುವಿದ್ದರೂ (ವಿಫಲ ಪ್ರೇಮ) ಈ ಕೃತಿಯ ಎರಡು ಗುಣಗಳು ಮುಖ್ಯವೆನಿಸುತ್ತವೆ. ಹವ್ಯಕ–ಬ್ರಾಹ್ಮಣ ಸಮಾಜದ ಸುತ್ತಾ ಹೆಣೆದಿರುವ ಕಾದಂಬರಿ, ಹವ್ಯಕ ಕನ್ನಡವನ್ನೇ ಉಪಯೋಗಿಸುತ್ತದೆ: ಮತ್ತು ಕಾದಂಬರಿಕಾರರು ಕೃತಿಯುದ್ದಕ್ಕೂ ಪಾತ್ರಗಳ ಸೂಕ್ಷ್ಮ ಭಾವನೆಗಳಿಗೆ ಹಾಗೂ ಮನೋವ್ಯಾಪಾರಕ್ಕೆ ಹೆಚ್ಚು ಒತ್ತು ಕೊಡುತ್ತಾರೆ. ಪಾತ್ರಗಳ ಬೆಳವಣಿಗೆ ಅಲ್ಲಲ್ಲಿ ದುರ್ಬಲವಿದ್ದರೂ ಕಾದಂಬರಿಯಲ್ಲಿ ಹವ್ಯಕ ಸಮಾಜದ ದೈನಂದಿನ ಜೀವನದ ವಿವರಗಳು ಚಿತ್ರಿತವಾಗಿ ಮೂಡಿ ಬರುತ್ತವೆ. ಓದುವಾಗ ತುಸು ಕಿರಿಕಿರಿಯಾದರೂ ಹವ್ಯಕ ಸಮಾಜದ ವಿಶಿಷ್ಟ ಪದ್ಧತಿಯೇ ಮುಖ್ಯಪಾತ್ರಗಳ ದುರಂತಕ್ಕೆ ಕಾರಣವಾಗುವುದರಿಂದ ಆ ಸಮಾಜದ ವಿಶಿಷ್ಟ ಭಾಷೆಯ ಉಪಯೋಗ ಅರ್ಥಪೂರ್ಣವಾಗಿದೆ. ಅಲ್ಲದೆ, ಮಕ್ಕಳಾಡುವ ಹುಲಿಯಾಟ ಮುಂತಾದ ಸಾಧಾರಣ ವಿವರಗಳು ಅಲ್ಲಲ್ಲಿ ಕೃತಿಯಲ್ಲಿ ಸಾಂಕೇತಿಕತೆಯನ್ನು ಪಡೆಯುತ್ತವೆ. ಈ ಕೃತಿ [illegible] ತಮ್ಮ [illegible]ತಿಯನ್ನು ಮುಗಿಸಿದ್ದಾರೆ ಮತ್ತು ಇನ್ನು ಮುಂದೆ ಯಶಸ್ವೀ [illegible] ಕೊಡಬಲ್ಲರು ಎಂದು ಸಿದ್ಧಪಡಿಸುತ್ತದೆ.

ಆದರೆ ಮುಂದಿನ ಕೃತಿಯಾದ 'ಕನಸಿನ ಬಳ್ಳಿ'ಯು (೧೯೭೨) ಯಶಸ್ಸನ್ನು ನೋಡಿದರೆ, ಹಿಂದಿನ ಸೋಲೇ ಮೇಲು ಎನಿಸುತ್ತದೆ. ಏಕೆಂದರೆ, ಸರಳವಾಗಿ ನಿರೂಪಿಸಲ್ಪಟ್ಟ, ಆಸಕ್ತಿಯಿಂದ ಓದಿಸಿಕೊಂಡು ಹೋಗುವ ಈ ಕಾದಂಬರಿ ಅಪ್ಪಟ 'ಸಿನಿಮೀಯ.'

ಕಾದಂಬರಿಕಾರರನ್ನು ಕುರಿತಾದ ನಮ್ಮ ನಿರೀಕ್ಷೆಗಳೆಲ್ಲವನ್ನೂ ಪೂರ್ಣಗೊಳಿಸುವ ಕೃತಿಯೆಂದರೆ ೧೯೭೭ರಲ್ಲಿ ಹೊರಬಂದ 'ನನ್ನದಲ್ಲದ್ದು'. 'ಕನಸಿನ ಬಳ್ಳಿ'ಯನ್ನು ಬರೆದವರೇ ಇದನ್ನೂ ಬರೆದರೇ? —ಎಂದು ನಮಗೆ ಆಶ್ಚರ್ಯವಾಗುತ್ತದೆ.) ವಸ್ತು-ನಿರೂಪಣೆ-ಶೈಲಿ-ಇವೆಲ್ಲವುಗಳಲ್ಲಿಯೂ ಹಿಂದಿನ ಕೃತಿಗಳಿಗಿಂತ ತೀರಾ ಭಿನ್ನವಾಗಿರುವ ಈ ಕೃತಿ ಬದುಕನ್ನು, ಸ್ತ್ರೀ-ಪುರುಷ ಸಂಬಂಧಗಳನ್ನು ಮತ್ತು ಸೃಜನಶೀಲ ಪ್ರಕ್ರಿಯೆಯನ್ನು ಕುರಿತು ಗಂಭೀರವಾಗಿ ವ್ಯಾಖ್ಯಾನಿಸುತ್ತದೆ. ಕಾದಂಬರಿಯ ಯಶಸ್ಸಿಗೆ ಬಹುಪಾಲು ಕಾರಣವಾಗಿರುವ 'ಸೀಮಿತ ನಿರೂಪಕ'ನ ತಂತ್ರಕ್ಕೆ ಲೇಖಕರು ಕಾರಂತರ 'ಅಳಿದ ಮೇಲೆ' ಕೃತಿಗೆ ಋಣಿಯಾಗಿದ್ದರೂ ಇಲ್ಲಿ ಬರುವ ಬದುಕಿನ ವಿಶ್ಲೇಷಣೆ ಕಾರಂತರ ಕಾದಂಬರಿಗಿಂತ ಭಿನ್ನವಾಗಿದೆ.

ಡಾ॥ ಶ್ರೀನಿವಾಸ್ ಅವರ ದುರಂತ ಬದುಕಿನ ಸುತ್ತಾ ಹೆಣೆಯಲ್ಪಟ್ಟಿರುವ ಈ ಕಾದಂಬರಿ 'ಬದುಕಿನ ನಿಗೂಢತೆ ನಮ್ಮ ಅರಿವಿನಾಚೆಯದು : ಆದ್ದರಿಂದ ಬದುಕನ್ನು ನಿಯಂತ್ರಿಸಲು ನಾನು ಮಾಡುವ ಯಾವುದೇ ಪ್ರಯತ್ನವೂ ಹಾಸ್ಯಾಸ್ಪದ' ಎಂಬ 'ಅಸಂಗತ' ತಾತ್ವಿಕ ನೆಲೆಯಲ್ಲಿ ಬೇರೂರಿದೆ.

ಇಂತಹ 'ಅಸಂಗತ' ಜೀವನ ದೃಷ್ಟಿಗೆ ಕೃತಿಯಲ್ಲಿ ಆಳ ಸಿಕ್ಕುವುದು ಕೃತಿಯ ನಿರೂಪಣಾ ತಂತ್ರದ ಮೂಲಕ. ಕೃತಿಯ ಮುಖ್ಯ ಪಾತ್ರಗಳಲ್ಲೊಂದಾದ ಸಾಹಿತಿ ಶೇಖರ್ ಕೃತಿಯ ನಿರೂಪಕನೂ ಕೂಡ. ಅವನಿಗೆ ತನ್ನದೇ ಆದ ಸಂಸಾರವಿದೆ— ತನ್ನದೇ ಆದ ಸಮಸ್ಯೆಗಳಿವೆ. ಅವನು ಎಳೆ ಎಳೆಯಾಗಿ ತನ್ನ ಮಿತ್ರ ಡಾ. ಶ್ರೀನಿವಾಸ್‌ನ ಬದುಕನ್ನು ಅರ್ಥ ಮಾಡಿಕೊಳ್ಳಲು ತೊಡಗುತ್ತಾನೆ. ಎಂದರೆ ಕೃತಿ ಎರಡು ಮಗ್ಗುಲುಗಳಲ್ಲಿ ಸಮಾನಾಂತರವಾಗಿ ಸಾಗುತ್ತದೆ. ಮುಖ್ಯವಾಗಿ ಇಂತಹ ಇಬ್ಬಗೆಯ 'ಶೋಧ' ಶೋಧವಾಗಿಯೇ ಉಳಿಯುತ್ತದೆಯೇ ಹೊರತು, ಕೃತಿ ಯಾವುದೇ ಸುಲಭ—ಸರಳ ಹೇಳಿಕೆಗಳನ್ನು ಮಂಡಿಸುವುದಿಲ್ಲ. ಬದುಕಿನ ನಿಗೂಢತೆ ಎಂದೆಂದಿಗೂ ನಿಗೂಢವಾಗಿಯೇ ಉಳಿಯುತ್ತದೆಂಬುದನ್ನು ಕಾದಂಬರಿ ಒಟ್ಟಾರೆ ಧ್ವನಿಸುತ್ತದೆ.

'ನನ್ನದಲ್ಲದ್ದು' ಕಾದಂಬರಿ ಬದುಕಿನ ನಿಗೂಢತೆಯನ್ನು ಕುರಿತಿರುವಂತೆಯೇ ಸೃಷ್ಟಿಕ್ರಿಯೆಯ ಶೋಧವೂ ಆಗಿದೆ. 'ಸೃಷ್ಟಿ' ಈ ದೃಷ್ಟಿಯಲ್ಲಿ ಜೈವಿಕ ಹಾಗೂ ಸಾಹಿತ್ಯಿಕ ಇವೆರಡೂ ನೆಲೆಗಳಲ್ಲಿ ಅರ್ಥಪೂರ್ಣವಾಗುತ್ತದೆ. (ಭೈರಪ್ಪನವರ 'ಜಲಪಾತ'ದಲ್ಲಿ ಜೈವಿಕ ಸೃಷ್ಟಿ—ಸಮಸ್ಯೆ ಕಲಾತ್ಮಕ ಸೃಷ್ಟಿ —ಸಮಸ್ಯೆಗಳಿಗೆ ರೂಪಕವಾಗು

ವಂತೆ.) ಲೇಖಕನೊಬ್ಬ ಇತರರನ್ನು ಕುರಿತು-ಎಂದರೆ 'ತನ್ನದಲ್ಲದ್ದನ್ನು' ಕುರಿತು- ಕಥೆ ರಚಿಸಲು ಪ್ರಾರಂಭಿಸುತ್ತಾನೆ. ಆದರೆ ಬಹುಬೇಗ ಕಥಾವಸ್ತು ತನ್ನನ್ನು ಕುರಿತೇ ಇರುವುದೆಂಬ-ತನ್ನದೇ ಎಂಬ ಅರಿವು ಅವನಿಗೆ ಉಂಟಾಗುತ್ತದೆ. ಏಕೆಂದರೆ, ಯಾವನೊಬ್ಬ ವ್ಯಕ್ತಿಯೂ ತನ್ನಷ್ಟಕ್ಕೆ ತಾನೇ ಸೀಮಿತಿಗೊಳ್ಳುವ ಒಂದು ದ್ವೀಪವಲ್ಲ—ಸಮಷ್ಟಿಯ ಒಂದು ಅವಿಭಾಜ್ಯ ಭಾಗ. ನಿರೂಪಕ ಒಂದೆಡೆ ಹೀಗೆ ಹೇಳುತ್ತಾನೆ.

"....ನಾನೇ ಶ್ರೀನಿವಾಸರಾಗಿ ಶ್ರೀನಿವಾಸರು ನಾನಾಗಿ ಹೋಗಿದ್ದಾರೋ ಎಂಬ ಭಯ ಸಣ್ಣಗೆ ನನ್ನನ್ನು ಕೊರೆಯುತ್ತಿತ್ತು. ಶ್ರೀನಿವಾಸರು ನಮ್ಮ ಮನೆಯ ಕನ್ನಡಿಯೆದುರು ನಿಂತಾಗ ಈ ಭಯ ಹೆಚ್ಚು ಹೆಚ್ಚು ನನ್ನ ಅನುಭವಕ್ಕೆ ಬರುತ್ತಿತ್ತು."

ಲೇಖಕನಿಗೂ ತನ್ನದೇ ಆದ ಬದುಕಿರುವುದರಿಂದ, ತನ್ನದೇ ಆದ ವ್ಯಕ್ತಿತ್ವವಿರುವುದರಿಂದ, ಇತರರನ್ನು ಕುರಿತಾದ ತನ್ನ ಗ್ರಹಿಕೆ ಅಪೂರ್ಣವಾಗಿರುವ ಅಥವಾ ಅಸಮರ್ಪಕವಾಗಿರುವ ಸಾಧ್ಯತೆಯಿರುತ್ತದೆ. ಆದ್ದರಿಂದ ಕೃತಿಯ ಸಾಹಿತಿ-ನಿರೂಪಕ ಅನೇಕಸಲ ತನ್ನನ್ನೇ ಗಂಭೀರ ವ್ಯಂಗ್ಯಕ್ಕೆ ಗುರಿಮಾಡಿಕೊಳ್ಳುತ್ತಾನೆ. ಹಾಗೆಯೇ ತನ್ನ ಗ್ರಹಿಕೆ ಅಪೂರ್ಣವಿರಬಹುದೆಂಬ ಅರಿವಿನಿಂದ ಡಾ. ಶ್ರೀನಿವಾಸ್‌ನ ಬದುಕನ್ನು ವಿವಿಧ ಕೋನಗಳಿಂದ ವ್ಯಾಖ್ಯಾನಿಸಲು ಪ್ರಯತ್ನಿಸುತ್ತಾನೆ. ಅರ್ಥಾತ್, ಸೃಷ್ಟಿಕಾರ್ಯವೆಂದರೆ ನಿರಂತರ ಶೋಧ-ಅನುಭವಗಳ ಮೂಲಕ್ಕಾಗಿ, ಅವುಗಳ ಅರ್ಥಕ್ಕಾಗಿ, ಮತ್ತು ಅವುಗಳ ಸಾಹಿತ್ಯಿಕ ರೂಪಿಗಾಗಿ. ಇಂತಹ 'ಸ್ವಾಭಿಮುಖತೆ' 'ನನ್ನದಲ್ಲದ್ದು' ಕಾದಂಬರಿಗೆ ಒಂದು ವಿಶಿಷ್ಟ ಆಯಾಮವನ್ನು ಕೊಡುತ್ತದೆ.

೧೯೮೦ರಲ್ಲಿ ಹೊರಬಂದ 'ಹದ್ದು' ಮತ್ತೊಂದು ಮಹತ್ವಾಕಾಂಕ್ಷೆಯ ಕಾದಂಬರಿ. ಬದುಕಿನಲ್ಲಿರುವ 'ಕಾಮ'ದ ವ್ಯಾಪಕತೆ ಮತ್ತು ಅಗಾಧತೆಗಳನ್ನು ಗುರುತಿಸಲು ತೊಡಗುವ ಈ ಕೃತಿಯ ಹೆಸರೂ ತುಂಬಾ ಅರ್ಥಪೂರ್ಣವಾಗಿದೆ. ಈ ಕಾದಂಬರಿ ಗಮನಾರ್ಹವಾಗುವುದೂ 'ಸೀಮಿತ ಪ್ರಜ್ಞೆಯ ನಿರೂಪಕ'ನ ಉಪಯೋಗದಿಂದ. ಕೃತಿಯ ನಿರೂಪಕ ವಿಶ್ವ ಕೃತಿಯ ಮುಖ್ಯ ಪಾತ್ರವೂ ಆಗಿರುವುದರಿಂದ ಅವನ ಅರಿವಿಗೂ ತನ್ನದೇ ಆದ ಮಿತಿಗಳಿವೆ; ಮತ್ತು ಈ ಮಿತಿಗಳನ್ನು ಲೇಖಕರು ಎಚ್ಚರಿಕೆಯಿಂದ ಉದ್ದಕ್ಕೂ ಕಾಯ್ದುಕೊಳ್ಳುತ್ತಾರೆ. ಆದ್ದರಿಂದ ಕೃತಿ ಸರಳೀಕೃತ ಹೇಳಿಕೆಗಳಿಗೆ ಆಸ್ಪದ ಕೊಡದೆ ಕಾಮದ ವಿವಿಧ ಪದರುಗಳನ್ನು ಮತ್ತು ಅದರ ದೈತ್ಯ ಪ್ರಭಾವವನ್ನು ನಿಧಾನವಾಗಿ ಶೋಧಿಸುತ್ತಾ ಹೋಗುತ್ತದೆ, ಆದರೆ ಕೃತಿಯ ಮುಕ್ತಾಯ ಅತ್ಯಂತ ಅಸಹಜವಾಗಿ ಕಾಣುತ್ತದೆ.

ಮುಂದಿನ ಕಾದಂಬರಿ 'ಪಲ್ಲಟ' (೧೯೭೯) ಲೇಖಕರ ಮೊದಲನೆಯ ಕಾದಂಬರಿಯ ವಿಸ್ತೃತ ರೂಪ ಭೂಸುಧಾರಣಾ ಶಾಸನದಿಂದ ಗ್ರಾಮ ಜೀವನ ಹೇಗೆ ಪಲ್ಲಟ'ಗೊಳ್ಳುತ್ತಿದೆಯೆಂದು ಚಿತ್ರಿಸುವ ಪ್ರಯತ್ನ. ಇದರೊಡನೆ ಲೈಂಗಿಕತೆಯ

ವಸ್ತುವಾಗಿ ಸೇರಿಕೊಂಡಿವೆ ಅಷ್ಟೆ. ಆರ್ಥಿಕ ಹಾಗೂ ಲೈಂಗಿಕ ಶೋಷಣೆಗಳು ಒಂದೇ ನಾಣ್ಯದ ಎರಡು ಮುಖಗಳು ಎಂದು ತೋರಿಸುವ ಪ್ರಯತ್ನ ಸಫಲವಾಗದೇ ಕೃತಿಯು ವೈಚಾರಿಕತೆ ಹೇಳಿಕೆಗಳ ರೂಪದಲ್ಲಿ ಕೃತಿಯ ಹೊರಗಡೆಯೇ ಉಳಿಯುತ್ತದೆ.

ಮುಂದಿನೆರಡೂ ಕಾದಂಬರಿಗಳ–'ಪ್ರಕೃತಿ' ಮತ್ತು 'ನೆಲ ಮುಗಿಲುಗಳ ಮಧ್ಯೆ' ವಸ್ತು ಸ್ಥೂಲವಾಗಿ ಒಂದೇ : ಸಾವು ಮತ್ತು ಸಾವಿನ ಅರಿವಿನಿಂದ ಬದುಕನ್ನು ಕುರಿತು ಉದ್ಭವಿಸುವ ನೂತನ ಶ್ರದ್ಧೆ.

ನಿರೂಪಣಾ ವಿಧಾನದಲ್ಲಿ 'ಪ್ರಕೃತಿ' 'ನನ್ನದಲ್ಲದ್ದು' ಕಾದಂಬರಿಯನ್ನು ಹೋಲುತ್ತದೆ. ಸಾಹಿತಿ-ನಿರೂಪಕ ಪಾಟೀಲ್ ಕಾರಂತರನ್ನು ಅವರ ವಯಸ್ಸಿನಲ್ಲಿ ಭೇಟಿಯಾಗಿ ಅವರನ್ನೂ ಮತ್ತು ಅವರ ಜೀವನ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಸಾವನ್ನು ಏಕಾಕಿಯಾಗಿ ಎದುರಿಸಲಾಗದೇ ಕಾರಂತರು ತಮ್ಮ ಇಳಿವಯಸ್ಸಿನಲ್ಲಿ ನರ್ಸ್ ಒಬ್ಬಳನ್ನು ಮದುವೆಯಾಗುತ್ತಾರೆ. ಈ ಕಥಾ ಹಂದರ ಸ್ಥೂಲವಾಗಿ ಹೆರಲ್ಡ್ ರಾಬಿನ್ಸ್‌ನ 'ಕಾರ್ಪೆಟ್ ಬ್ಯಾಗರ್ಸ್' ಕಾದಂಬರಿಯ ಒಂದು ಭಾಗವನ್ನು ಹೋಲುತ್ತದೆ. ಬಹಳಷ್ಟು ಯಶಸ್ವಿಯಾಗುವ 'ಪ್ರಕೃತಿ' ಕಾದಂಬರಿಯ ಒಂದು ಮಿತಿಯೆಂದರೆ ಅನವಶ್ಯಕವಾಗಿ ಬರುವ ಕಾರಂತರ ಮಗಳು ಶೀಲಾಳ ಸ್ವಚ್ಛಂದ ಲೈಂಗಿಕತೆ. ಇದರಿಂದಾಗಿ ಕೃತಿಯ ವೈಚಾರಿಕತೆ ಗೋಜು ಗೋಜಲಾಗುತ್ತದೆ. ಶೀಲಾಳ ಲೈಂಗಿಕ ದಾಹಕ್ಕೆ ಕಾರಣವೇನೆಂದು ಕೊನೆಗೂ ಓದುಗರಿಗೆ ತಿಳಿಯದೇ ಹೋಗುತ್ತದೆ.

ಸಾವು-ಬದುಕುಗಳ ಜಟಿಲ ಅನ್ಯೋನ್ಯ ಸಂಬಂಧವನ್ನು ಭಾವೋದ್ರೇಕವಿಲ್ಲದೆ ಗಂಭೀರವಾಗಿ ಅರ್ಥೈಸುವ ಕಾದಂಬರಿ 'ನೆಲ ಮುಗಿಲುಗಳ ಮಧ್ಯೆ.' ಕೃತಿಯ ಕೊನೆಯಲ್ಲಿ ಹೃದಯಾಘಾತದಿಂದ ಪ್ರಕಾಶ್ ಸತ್ತರೆ, ತನ್ನ ಆತ್ಮಹತ್ಯೆಯ ಉದ್ದೇಶವನ್ನು ಬದಲಾಯಿಸಿ ಎಲಿಜಾ ತನ್ನ ಮನೆಗೆ ಹಿಂದಿರುಗುತ್ತಾಳೆ. 'ಬದುಕಿಗೊಂದು ಅರ್ಥವಿದೆ : ಅದೆಂದರೆ ಸಾವು ಬರುವತನಕ ಬದುಕುವುದು' ಎಂಬ ಅರಿವನ್ನು ಕೃತಿ ಯಶಸ್ವಿಯಾಗಿ ಮಂಡಿಸುತ್ತದೆ.

'ದಿಗಂತ' (೧೯೮೮) ವೈಯಕ್ತಿಕ—ಸಾಮಾಜಿಕ ಆಯಾಮಗಳನ್ನು ಯಶಸ್ವಿಯಾಗಿ ಬೆಸೆಯುವ ಕಾದಂಬರಿ. ಆದರೆ ಈ ಕಾದಂಬರಿಯನ್ನು ಇತ್ಯಾತ್ಮಕವಾಗಿ ನೋಡುವುದು ಕಷ್ಟ. ಏಕೆಂದರೆ ಈ ಕಾದಂಬರಿಯ ಕೇಂದ್ರ ಸಂಕೇತವಾದ ಮಂಗನ ಖಾಯಿಲೆ, ವಿಜ್ಞಾನ-ಅಂಧ ಶ್ರದ್ಧೆಗಳ ನಡುವಿರುವ ವೈರುಧ್ಯ, ರಾಜಕಾರಣಿ-ಧರ್ಮಗುರುಗಳ ಸೋಗಲಾಡಿತನ—ಇವೆಲ್ಲವೂ ತೇಜಸ್ವಿಯವರ 'ಚಿದಂಬರ ರಹಸ್ಯ' ಕಾದಂಬರಿಯ ಅನುಕರಣೆಯಂತೆ ತೋರುತ್ತದೆ.

'ದೃಷ್ಟಿ', ಲೇಖಕರ ಇತರ ಕಾದಂಬರಿಗಳಿಗಿಂತಾ ಸಂಪೂರ್ಣ ಭಿನ್ನವಾಗಿದೆ. ಕೃತಿ ಎತ್ತುವ ಮತ್ತು ಉತ್ತರಗಳಿಗಾಗಿ ತಡಕಾಡುವ ಪ್ರಶ್ನೆಗಳು ಮುಖ್ಯವಾಗಿ ಹೀಗಿವೆ:

ಬದುಕಿನಲ್ಲಿ ತನ್ನದೇ ಆದ ಆಸಕ್ತಿಯೇ ಇಲ್ಲದ, ಉದ್ದಕ್ಕೂ ಇತರರ ಆಸೆ-ಆಕಾಂಕ್ಷೆ ಗಳಿಗನುಗುಣವಾಗಿ ತನ್ನ ಬದುಕನ್ನು ರೂಪಿಸಿಕೊಂಡ ವ್ಯಕ್ತಿಯೊಬ್ಬ ತನ್ನ ಇಳಿವಯಸ್ಸಿನಲ್ಲಿ ತನ್ನ ಕಳೆದ ಜೀವನವನ್ನು ವಿಶ್ಲೇಷಿಸಿದಾಗ ಆತನಿಗಾಗುವ ಅನುಭವಗಳೇನು ? ತೃಪ್ತಿಯೇ ಅಥವಾ ಗಾಢ ವಿಷಾದವೇ ? ಮತ್ತೆ, ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಸಮಾಜ ಮುಂದುವರಿದಾಗ ನಾವು ಏನನ್ನು, ಎಷ್ಟು ಕಳೆದುಕೊಳ್ಳುತ್ತೇವೆ ? ಹೊಸದಾಗಿ ದೊರಕಿಸಿಕೊಳ್ಳುವ ಮೌಲ್ಯಗಳಾದರೂ ಯಾವುವು ? ಮೌಲ್ಯಗಳು ಸಾರ್ವಕಾಲಿಕವೆ ಅಥವಾ ಸಂದರ್ಭ—ನಿಷ್ಠವೇ ? ಇವೇ ಮುಂತಾದ ಗಂಭೀರ ಪ್ರಶ್ನೆಗಳಿಗೆ ಉತ್ತರಗಳನ್ನು 'ದೃಷ್ಟಿ' ಹುಡುಕುತ್ತಾ ಹೋಗುತ್ತದೆ.

ಒಂದು ನೆಲೆಯಲ್ಲಿ 'ದೃಷ್ಟಿ' ವೈಯಕ್ತಿಕ ಬದುಕನ್ನು ವಿಶ್ಲೇಷಿಸಿದರೆ, ಮತ್ತೊಂದು ನೆಲೆಯಲ್ಲಿ ಎರಡು ತಲೆಮಾರುಗಳನ್ನೂ ತುಲನಾತ್ಮಕವಾಗಿ ನೋಡುತ್ತದೆ. ಈ ಎರಡೂ ತಲೆಮಾರುಗಳು ಘರ್ಷಿಸಿದಾಗ ಯಾವುದೇ ವಿಧದ ಸರಳ ತೀರ್ಮಾನಗಳೂ ಅಸಾಧ್ಯ ಎಂದು 'ದೃಷ್ಟಿ' ತೋರಿಸುತ್ತದೆ. ಒಂದು ಪೀಳಿಗೆಯ ಮೌಲ್ಯಗಳು ಹಾಗೂ ತತ್ವಗಳು ಮತ್ತೊಂದು ಪೀಳಿಗೆಗೆ ಅರ್ಥಹೀನವಾಗಿ, ಅಪ್ರಸ್ತುತವಾಗಿ ತೋರುತ್ತವೆ. ಇಂತಹ ಸಂದರ್ಭದಲ್ಲಿ ಸಾರ್ವಕಾಲಿಕ ಮೌಲ್ಯಗಳ ಬಗ್ಗೆ ಮಾತನಾಡುವುದು ಎಷ್ಟು ಸರಿ ? ಆದ್ದರಿಂದ, 'ದೃಷ್ಟಿ' ಯಾವುದೇ ತೀರ್ಮಾನಗಳ ಲೋಭಕ್ಕೂ ಒಳಪಡದೆ, ಸೀಮಿತ ನಿರೂಪಕನ ದೃಷ್ಟಿಕೋನದಿಂದ ಒಂದು ಕಾಲಘಟ್ಟದಲ್ಲಿ ಸಹಜವಾಗಿ ಬದಲಾಗುತ್ತಿರುವ ಸಮಾಜವನ್ನು ಯಶಸ್ವಿಯಾಗಿ ದಾಖಲಿಸುತ್ತದೆ.



ಇಲ್ಲಿಯತನಕ ಸ್ಥೂಲವಾಗಿ ಮಾಡಿದ ಮೊಗಸಾಲೆಯವರ ಕೃತಿಗಳ ಪರಾಮರ್ಶೆಯಿಂದ ಲೇಖಕರನ್ನು ಕುರಿತಾದ ಎರಡು ಸಂಗತಿಗಳು ನಮಗೆ ಅರಿವಾಗುತ್ತವೆ. ಸದಾ ಪ್ರಯೋಗಶೀಲರಾದ ಮೊಗಸಾಲೆಯವರು ಕಾದಂಬರಿಕಾರರಾಗಿ ಅನೇಕ ವಿಧದ ಸೋಲು-ಗೆಲುವುಗಳನ್ನು ಕಂಡಿದ್ದಾರೆ. ಸಾಧಾರಣವಾಗಿ, ಲೇಖಕರ ಲಕ್ಷ್ಯ ವ್ಯಕ್ತಿನಿಷ್ಠವಾದಾಗ, ಎಂದರೆ ವ್ಯಕ್ತಿಯೊಬ್ಬನ ಬದುಕಿನ ಮೂಲಕ ಸಮಷ್ಟಿಯನ್ನು ವಿಶ್ಲೇಷಿಸುವಾಗ ಅವರು ಯಶಸ್ವಿಯಾಗುತ್ತಾರೆ. ಪ್ರಾಯಶಃ ನವ್ಯ ಕಾದಂಬರಿ ತನ್ನ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ (ಅರವತ್ತರ ದಶಕದಲ್ಲಿ) ಮೊಗಸಾಲೆಯವರು ತಮ್ಮ ಸಾಹಿತ್ಯಿಕ ಜೀವನವನ್ನು ಪ್ರಾರಂಭಿಸಿದುದು ಇದಕ್ಕೆ ಕಾರಣವಿರಬಹುದು. ಹಾಗೆಯೇ, ಒಂದು ಸಮಾಜ ಅಥವಾ ಸಮಷ್ಟಿಯನ್ನೇ ತಮ್ಮ ಕೇಂದ್ರವನ್ನಾಗಿಸಿಕೊಂಡಾಗ ('ಮಣ್ಣಿನ ಮಕ್ಕಳು', 'ಪಲ್ಲಟ' ಇತ್ಯಾದಿ) ಸೋಲುತ್ತಾರೆ. ವ್ಯಕ್ತಿನಿಷ್ಠ ಅನುಭವಗಳನ್ನು ಸೂಕ್ಷ್ಮವಾಗಿ, ಪದರುಪದರಾಗಿ ವಿಶ್ಲೇಷಿಸುವ ಹಾಗೆ ಒಂದು ಇಡೀ ಸಮುದಾಯವನ್ನು ವಿಶ್ಲೇಷಿಸಲಾರರು ಎಂದರೆ ಇವರ ಯಶಸ್ವೀ ಕಾದಂಬರಿಗಳಲ್ಲಾ

ಸ್ಥೂಲವಾಗಿ ನಮ್ಮ ಪರಂಪರೆಗೇ ಸೇರುವಂತಹವುಗಳು. ಎರಡನೆಯದಾಗಿ, ಯಾವ ಕೃತಿಗಳಲ್ಲಿ ನಿರೂಪಕನ ಪ್ರಜ್ಞೆ ಸೀಮಿತವಾಗಿರುತ್ತದೋ ಮತ್ತು ಕೃತಿ ಬೆಳೆದಂತೆ ನಿರೂಪಕನೂ ಬೆಳೆಯುತ್ತಾ ಹೋಗುತ್ತಾನೋ ಆ ಕೃತಿಗಳೆಲ್ಲಾ ಯಶಸ್ಸು ಪಡೆದಿವೆ. ('ನನ್ನದಲ್ಲದ್ದು', 'ಪ್ರಕೃತಿ','ದೃಷ್ಟಿ' ಇತ್ಯಾದಿ). ಆದರೆ ಎಲ್ಲವನ್ನೂ ಬಲ್ಲ ಪ್ರಥಮ ಪುರುಷ ನಿರೂಪಕ ಮೊಗಸಾಲೆಯವರ ಸೃಜನಶೀಲತೆಗೆ ವಿರುದ್ಧವೆಂದು ಕಾಣುತ್ತದೆ. ಮೊಗಸಾಲೆಯವರು ಪ್ರಯೋಗಶೀಲರಾದ್ದರಿಂದ ಇನ್ನೂ ಇವರು ಶೋಧಿಸಬಲ್ಲ, ಶೋಧಿಸುವ ದಿಕ್ಕುಗಳು ಹಾಗೂ ಕಾಣಬಲ್ಲ ಆಯಾಮಗಳು ಸಾಕಷ್ಟಿವೆಯೆಂಬ ಭರವಸೆ ನನಗಿದೆ.

ಪರಾಮರ್ಶಿಸಿದ ಕಾದಂಬರಿಗಳು

೧. **ಮಣ್ಣಿನ ಮಕ್ಕಳು,** ೧೯೬೫, ಪ್ರಕಾಶಕರು : ವಿವೇಕ ಸಾಹಿತ್ಯಮಾಲೆ ಮಂಗಳೂರು–೩.

೨. **ಅನಂತ,** ಮೊದಲ ಮುದ್ರಣ ೧೯೬೮, ಎರಡನೇ ಮುದ್ರಣ ೧೯೮೨, ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು -೫೬೦೦೫೦.

೩. **ಕನಸಿನ ಬಳ್ಳಿ,** ೧೯೭೨, ಸಮಾಜ ಪುಸ್ತಕಾಲಯ, ಧಾರವಾಡ.

೪. **ನನ್ನದಲ್ಲದ್ದು,** ಮೊದಲ ಮುದ್ರಣ ೧೯೭೭, ಎರಡನೇ ಮುದ್ರಣ ೧೯೮೯, ಐ ಬಿ.ಎಚ್. ಪ್ರಕಾಶನ, ಬೆಂಗಳೂರು.

೫. **ಪಲ್ಲಟ,** ೧೯೭೯, **ಜ್ಯೋತಿಸ್ಮೃತಿ** ಪ್ರಕಾಶನ, ೧೨-೩-೯೩, ಅಜ್ಜರಕಾಡು, ಉಡುಪಿ, ದ.ಕ.

೬. **ಹದ್ದು,** ೧೯೮೦, ... ,, ...

೭. **ಪ್ರಕೃತಿ,** ೧೯೮೨, ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು

೮. **ನೆಲ ಮುಗಿಲುಗಳ ಮಧ್ಯೆ,** ೧೯೮೩, ,,

೯. **ದಿಗಂತ,** ೧೯೮೮, ಗೀತಾ ಬುಕ್‌ಹೌಸ್, ಪ್ರಕಾಶಕರು, ಮೈಸೂರು.

೧೦. **ದೃಷ್ಟಿ,** ೧೯೯೧, ಭಾಗ್ಯಲಕ್ಷ್ಮೀ ಪ್ರಕಾಶನ, ಬೆಂಗಳೂರು -೫೬೦೦೮೫.

○ ಡಾ॥ ಸಿ. ಎನ್. ರಾಮಚಂದ್ರನ್ ಅವರ ಸುದೀರ್ಘ ಬರಹವನ್ನು "ಅನ್ವೇಷಣೆ"ಗಾಗಿ ಎಸ್. ವೆಂಕಟವಿಶ್ವನಾಥ ಅವರು ಸಂಗ್ರಹಿಸಿಕೊಟ್ಟಿದ್ದಾರೆ. ಹಾಗು, ಡಾ॥ ನಾ. ಮೊಗಸಾಲೆಯವರ ಕಾದಂಬರಿಗಳ ಪಟ್ಟಿಯನ್ನೂ ಅವರೇ ಒದಗಿಸಿದ್ದಾರೆ.

—ಸಂಪಾದಕ

ಮಳೆ ತೊಳೆದ ಕಲ್ಲುಗಳು

—ಡಿ. ಆರ್. ಚಂದ್ರ ಮಾಗಡಿ

ಮಳೆ ತೊಳೆದ ಕಲ್ಲುಗಳು—
ಎಳೆಯ ಕಿರಣಗಳಿಗೆ ಮಿಂಚುತ್ತವೆ
ಮಿನುಗುತ್ತವೆ. ರವಿಯನ್ನ ತಮ್ಮಲ್ಲೆ
ಅದುಮಿಟ್ಟುಕೊಂಡಹಾಗೆ,
ಶಾಂತ ಪ್ರಶಾಂತ ದಾಳದಲ್ಲಿ ದನಿದನಿ
ಸುತ್ತಿರುವ ಬಳೆ ಗೆಜ್ಜೆಗಳ ಗಿಲುಕು ಪುಲುಕು.

ಮಳೆ ತೊಳೆದ ಕಲ್ಲುಗಳು—
ಜೀವಿಗೆ ಹಾಕಿ ಸವಾಲು, ಕುಡಿದು
ಸಂಜೀವನಿ ನೃತ್ಯ ಮಾಡುತ್ತವೆ.
ಸೀರೆ ಸೆರಗಿನಲ್ಲಿ ಥಣ ಥಣ, ಚನ್ನಿಗ
ರಾಯನ ಪಾದದಲ್ಲಿ ಮಿಣಮಿಣ ಸೊಣೆ
ಯೊಳಗೆ ತಣ್ ತಣ ತಣ್ ತಣ
ಬಾಲ ರವಿಯು ತಾವು ತಾವೇ ಹಂಚಿಕೊಂಡಂತೆ.

ಮಳೆ ತೊಳೆದ ಕಲ್ಲುಗಳು—
ಅಭಿಷೇಕಾನಂತರದ ಪ್ರಾಣಮೂರ್ತಿ
ಕರು ಕಪ್ಪೆ ಮರಿ ಕತ್ತೆ ಅಶ್ವ
ಐರಾವತ ರಾಜ ಮಹಾರಾಜರು ತೊಟ್ಟ
ಪೇಟ ಕೋಟು ಅಂಗಿ ಹತ್ತಾರು ಭಂಗಿ.

ಮಳೆ ತೊಳೆದ ಕಲ್ಲುಗಳು—
ಹಸುಳೆಗಳ ಹಾಗೆ ನಗುತ್ತವೆ
ಕೊಳೆ ಅಳಿದ ಶುಭ್ರ ಸ್ವಚ್ಛ ನಗ್ನ ಕನ್ನೆ,
ತೋರುತ್ತವೆ ಮೈ ಕೈ ಕಾಲು ಅಂಗಾಂಗ ಪುಲಕ

ಮಳೆ ತೊಳೆದ ಕಲ್ಲುಗಳು—
ನಮ್ಮಂತೆ ನಿಮ್ಮಂತೆ ಬೇರೆ ಯಾರ
ತೊಳೆತಕ್ಕೂ ಬಗ್ಗುವುದಿಲ್ಲ ಒಗ್ಗುವುದಿಲ್ಲ
ಈ ಚಲುವ ಬೀರುವುದಿಲ್ಲ.

ಹೊಗಿ

—ಪ್ರೊ॥ ಧರಣೇಂದ್ರ ಕುರಕುರಿ

೧

ಈ ಗುಡಿಯೊಳಗ
ಪೂಜಾರಿ ಹಾಕಿದ
ಲೋಬಾನದ ಹೊಗಿ ತುಂಬೇತಿ
ದೇವರಿಗೇ ಗೊತ್ತು
ದೇವರ ಗತಿ
ಉರಪ ಬಿದ್ದು
ಮುಚ್ಚಿದ ಕಣ್ಣು
ಮುಚ್ಚಿದಂಗs ಐತಿ
ಗುಡೀನೂ ಬರೇದ
ಆಗೇತಿ
ಹಿಂಗ್ಯಾಕ ?
ಅಂತ ವಿಚಾರಾ ಮಾಡಿದರ
ಲೋಬಾನ ಕಲಬೆರಕೀದ ಐತಿ
ಬರೇ ಗುಡಿ
ಇಡಬಾರದು ಅಂತ
ಕಣ್ಣು ಮುಚಗೊಂಡs
ಹುಡುಕಾಟ ನಡದೈತಿ

೨

ಹುಡುಕಾಟ ಹೆಚ್ಚಾಗಿ
ಬಂದೋಬಸ್ತು ಸುರೂ ಆಗೇತಿ
ಗುಲಾಬೀ ಹೂವಿನ ತೋಟದೊಳಗೂ
ಮದ್ದಿನ ವಾಸನ ತುಂಬೇತಿ
ಗುಲಾಬೀ ಗಿಡಾ ಬಾಡೇತಿ

ಈ ಮದ್ದಿನ ವಾಸನೀ
ಕುಡದೂ-ಕುಡದೂ
ಮನಶ್ಯಾನ ಎದೀನs
ಬರೇದ ಆಗೇತಿ
ಕಲಬೆರಕೀ ಲೋಬಾನ
ಮತ್ತ
ಮದ್ದಿನ ಹೊಗಿ ಸೇರಿ
ಗಾಳಿಯೊಳಗ ವಿಷ ತುಂಬೇತಿ

೩

ಅದಕs ಮದಲ
ಲೋಬಾನ ಮತ್ತ ಮದ್ದಿನ
ಹೊಗಿ ಆರಿಸಿ
ಮತ್ತ ಹೊಸದಾಗಿ
ಊದಬತ್ತೀ ಹಚ್ಚಬೇಕಾಗೇತಿ
ಹವಾ ಸುದ್ದ ಮಾಡಬೇಕಾಗೇತಿ
ಅಂದಾಗ—
ಗುಲಾಬೀ ಗಿಡಾ ಚಿಗತು
ಹೂವು ಅರಳತಾವ
ಪರಿಮಳ ಬೀರತಾವ
ಬರೇದಾದ ಗುಡಿ
ಮತ್ತ [illegible]
ತಾಪs ತುಂಬತಾವ
[illegible]

"ರಮ್ಯ ಕವಿತೆಯೂ ಬಂಡಾಯ ಕವಿಯೂ"

—ಬಿ. ಚಿನ್ನಸ್ವಾಮಿ

ಕವಿತೆ : ನಿನ್ನ ವರಿಸಲಾರೆ
ಬಿಟ್ಟುಬಿಡು ನನ್ನ
ಮತ್ತೆ ಮತ್ತೆ ಹುಯ್ಯಲಿಡುತ್ತಿದ್ದೇನೆ
ನಿಲ್ಲಲಾರೆ ನಿನ್ನೊಡನೆ ತೊರೆ ನನ್ನ

ನಾನು : ಬಾ ಕವಿತೆ ಬಾ ಬೇಡವೆನ್ನದಿರು ಈ ಬೇಡನ
ನನ್ನದೊಂದು ರಾಮಾಯಣವಿದೆ
ಮೈಯೆಲ್ಲ ರಣಗಾಯ
ಸಂತೈಸು ಬಾ ಪೊರೆ ನನ್ನನ್ನ

ಕವಿತೆ : ಒಲ್ಲೆ, ನಾ ಚಿಮ್ಮುವೆ
ಮಲ್ಲಿಗೆಯು ಮೊಗ್ಗು ಕಂಪಸೂಸುವಲ್ಲಿ
ಕಾರಂಜಿಯಾಗುವೆ ಶೃಂಗಾರ ಪುಷ್ಪಗಳು ಮಕರಂದ ಬೀರುವಲ್ಲಿ
ಹಿಮಗಿರಿ ಕಂದರ ನದಿತೊರೆ ತೀರಗಳಲ್ಲಿ ನರ್ತಿಸುವೆ
ಚಂದ್ರ ತಾರೆಯರ ಒಡನಾಟ ನನಗೆ
ಯಕ್ಷ ಕಿನ್ನರ ಲೋಕದ ಮಧುರ ವಿಹಾರಿ ನಾನು

ನಾನು : ಒಮ್ಮೆ ನೋಡು ದೇವಿ
ಹರುಕು ಮುರುಕುಟ್ಟ ಚಿಂದಿ ಜನರ ಕಡೆಗೆ
'ಬಣ್ಣಿಸುವೆ' ನಿನ್ನಿಂದ ಸುಟ್ಟು ಕರಕಾದ ಜನರ
ಹೊತ್ತಿಗೂಟ ಕಾಣದೆ ಸತ್ತ ನೋಟವಿತ್ತವರ
ಎಂಜಲು ತಿಂದು ಕಾಲತುಯ್ಯುವ ಭಿಕ್ಷುಕ ಮಂದಿಯು
ಕಸದ ಬುಟ್ಟಿಯು ಕೆದಕಿ ರುಚಿ ಹುಡುಕುವ ಬಸದಿಯವರ

ಕವಿತೆ : ಬೆಳದಿಂಗಳೆ ನನ್ನ ಮನೆ
ಶೀತಲ ಮಂದ ಮಾರುತ ಸುಳಿವಲ್ಲಿ ನನ್ನ ಹಾದಿ
ಬೆಳಗು ಬೆಳಗಿಸ ಸೂರ್ಯನ ವರ್ಣಿಸಿದ್ದದೆಷ್ಟು ಬಗೆ
ಅದೆಷ್ಟು ಸಹಸ್ರ ಹೂವುಗಳ ಅರಳಿಸಿದ್ದೇನೆ
ಕೋಟಿ ಕೋಟಿ ಹೃದಯ ಕಮಲಗಳು
ಪುಳಕಿತಗೊಂಡಿವೆ ನನ್ನಿಂದ

ನಾನು : ಎಳೆದೊಯ್ಯುವೆ ಹೊಲಗೇರಿಗೆ ನಿನ್ನ
ಮುಟ್ಟು ಬಾ ಮಾದಿಗರನ್ನ
ಕೊಚ್ಚೆಕೊಳಕು ನನ್ನಿಂದಾಗದು
ಯಾವ ಪಾಪಕ್ಕೆ ಹೆಂಡದ ದುರ್ವಾಸನೆ
ಸುಟ್ಟ ಬಾಡಿನ ಗಂಧ ಎಂದಳಿಯುವಿರು
ಹೇತಲ್ಲೆ ಕೂತುಣ್ಣುವವರ ಕಥೆ ಹೇಳಲು
ಕೊರಳಾಗು ಬಾ

ಕವಿತೆ : ಮುಕ್ಕೋಟಿ ದೇವತೆಗಳ ಹೊಗಳಿ ಹಾಡಿದ
ನನಗಿಂತ ಇಕ್ಕಟ್ಟೆ ಗೀತೋಪದೇಶ ಮಾಡಿದೆ
ವಿಷ್ಣು ಸಹಸ್ರನಾಮ ಹಾಡಿದೆ
ಕಷ್ಟವಾಗಿದೆ ನನಗೆ ಬಿಡು, ಭ್ರಷ್ಟಳಾಗಲಾರೆ

ನಾನು : ನಿನ್ನ ಅವಸ್ಥಾಂತರ ಕಾಲಾನುಸಂಧಾನ
ಬುದ್ಧ ಬಸವರೆಲ್ಲ ಇಲ್ಲೆ ಇದ್ದು ದೇವರಾದುದು
ನೀನೆ ನನ್ನ ಗಾಂಧಿ, ತಾಯಿ ಥೆರೇಸಾ
ಕಾವ್ಯದೇವಿ ಒಮ್ಮೆ ಬಂದು ನನ್ನ ಒಲಿದು ನೋಡೆ !

ಅಮ್ಮ, ನಾನು–ಆಲಿಕಲ್ಲು

—ಡಿ. ಬಿ. ಮಲ್ಲಿಕಾರ್ಜುನಸ್ವಾಮಿ

ಮಳೆ ಸುರಿಯುತ್ತಿದೆ
ಸೋರುವ ಮನೆಯೊಳಗಿನ
ಮಳೆ ಹಿಡಿಯಲು
ಅಮ್ಮ, ಇಟ್ಟಿದ್ದಾಳೆ
ಇದ್ದ ಬದ್ದ
ಮಡಕೆ–ಕುಡಿಕೆ
ನಜ್ಜುಗಜ್ಜಾದ
ಪಾತ್ರೆ–ಪರಡಿ....
ಚಿಂದಿ ಚಾದರ ಹೊದ್ದು
ಮೂಲೆಯಲ್ಲಿ ಕುಳಿತ
ನಾನು ಬೀಳುವ
ಆಲಿಕಲ್ಲಿಗೆ
ಕೈ ಚಾಚುತ್ತೇನೆ

ಸೂರ್ಯ : ಆರು ಕವಿತೆಗಳು

—ಈ. ಚಂದ್ರ ತಾಳೀಕಟ್ಟೆ

೧

ಮುಸ್ಸಂಜೆ ಸೂರ್ಯನೆದುರು
ನಡೆಯುವ ಚೆಲುವೆಗೆ
ಕೆಂಪು ಸೂರ್ಯ
ಮುತ್ತಿಟ್ಟೇ ಮುತ್ತಿಡುತ್ತಾನೆ ;
ಕೆನ್ನೆ ತುಟಿ ಗಲ್ಲ
ಎಲ್ಲೆಲ್ಲೂ !

೨

ಮೋಡಗಳು ಹೇಳುತ್ತವೆ
ಸೂರ್ಯ,
ನಿನ್ನನ್ನು ಹೊಗಳಿ ಹೊಗಳಿ
ಅಟ್ಟಕ್ಕೇರಿಸುತ್ತಿದ್ದಾರೆ ;
ತಡೆ, ನಿನ್ನ ಮುಖ ಕಾಣದ ಹಾಗೆ
ನಿನ್ನ ಸುತ್ತ-ಸುತ್ತುಗಟ್ಟಿ
ತಬ್ಬಿನಿಂತು ಯಾರ ಕಣ್ಣಿಗೂ
ಕಾಣದಂತೆ ಮಾಡುತ್ತೇವೆ

೩

ಆ ಮುಖ ಈ ಮುಖ
ನೋಡಿ
ಬೇಸತ್ತ ಹುಡುಗಿ
ಸೂರ್ಯನ ಮುಖವೇ
ಶ್ರೇಷ್ಠ ಎಂದಂ
ಕೂಗಿ ಹೇಳಿದಳು !

೪

ಹುಡುಗಿ ಹೇಳಿದಳು
ಆ ಹಾಹಾ ಇವನ
ತಂಟೆ ಬೇಡ ಕಣೆ
ಕರುಣೆಯಿಲ್ಲದೆ ಮೈಮೇಲೆ
ನೆತ್ತಿಯಿಂದ ಕೆಂಪು ಕೆಂಡ ಸುರಿಸುತ್ತಾನೆ ;
ನೆಚ್ಚಿ ಕೊಂಡವರು
ಬಾವಿಗೆ ಹೋಗಿ ಬೀಳಬೇಕು !

೫

ಸೂರ್ಯ,
ನಿನ್ನ ಕೆಂಬಣ್ಣದ ಮುಖಕ್ಕೆ
ಕಪ್ಪು ಚೆಲುವೆ
ಎಲೆ ಹೂವು ಬಣ್ಣ ಚಿಮುಕಿಸಿ
ಕೈ ಮುಗಿದು ಧ್ಯಾನಿಸುವುದನ್ನು
ನೋಡಿ ನನಗೆ ಹೊಟ್ಟೆಕಿಚ್ಚು ;
ಈ ಹಾಳು ಹುಡುಗಿಯರಿಗೆ
ಸೂರ್ಯನೇ ಬೇಕೆ ಎಂದು

೬

ಸೂರ್ಯ,
ಬಿಟ್ಟಿರಲಾರದಷ್ಟು ಗಾಢವಾಗಿತ್ತು
ನಮ್ಮಿಬ್ಬರ ಪ್ರೀತಿ—
ಸಂ[illegible]ವರೆಗೆ, ನೀನು
ಮುಳುಗಿದ ಮೇಲೆ
[illegible]ನ ಒಬ್ಬಂಟಿತನದ ಕೂಗು
[illegible] ಯಾರಿದ್ದಾರೆ ಇಲ್ಲಿ ?

ನೈರುಥ್ಯ

—ಬರಗೂರು ರಾಮಚಂದ್ರಪ್ಪ

ಆಲದ ಮರದಲ್ಲಿ
ಬೇಲದ ಹಣ್ಣು ಬಿಟ್ಟು
ಶಿವ ಶಿವಾ ಎನ್ನುವಾಗ
ಶವಗಳು ನಗುತ್ತಿದ್ದವು ನೋಡ ।

ಮಾವಿನ ಮರದಲ್ಲಿ
ಬೇವಿನ ಬಿಳಲು ಬಿಟ್ಟು
ನೋವು ನೇಣಾದಾಗ
ಭವಿಷ್ಯ ಬೆವರಿತ್ತು ನೋಡ ।

ತುಳಸಿಕಟ್ಟೆಯ ತುಂಬ
ಹಳಸಿದನ್ನದ ಚಿಗುರು
ಸರ್ಪ ಸುತ್ತಿನ ಪೂಜೆ
ದರ್ಪ ದೇವರಾಗಿತ್ತು ನೋಡ ।

ಮೌನದ ಮಾನಭಂಗಕ್ಕೆ
ಹುಟ್ಟಿದ ಮಾತಿನ ಸಂಗಕ್ಕೆ
ಅಕ್ಷರಕ್ಷರ ಅಂಗಾತ ಅರಚಿ
ಕರುಳು ಕತ್ತರಿಸಿ ಮೂಕವಾಗಿತ್ತು ನೋಡ ।

ನಾನಿರುವವರೆಗೆ...

—ಪ್ರತಿಭಾ ನಂದಕುಮಾರ್

ನೋವು ಮರೆಯಲು ಕುಡಿಪೆಯಾದರೆ
ನನ್ನ ಎದೆ ಹೀರು
ಸಿಗಬಹುದು ನಿನಗೆ ಜೀವ ಉಳಿಸುವ ನೀರು
ಮಂಜು ಕೊರಳ ತಂಪಿನಲ್ಲಿ
ನಿನ್ನ ತಲೆ ಮುದುಗಿಸು ಕಂಟಿ ತುಂಬಲಿ ಬಟ್ಟಲು
ಪ್ರೀತಿ ಕಾಣದ ಜೀವ ಕುಡಿಯಲಿ
ನಿನಗೆ ಆ ದೆಸೆ ಬರದಿರಲಿ
ಒಲವು ಕಣಿವೆಯ ಒರತೆ
ನಾನಿರುವವರೆಗೆ ಏ ಬಾಯಾರದಿರಲಿ,

ಕವಿ ಮತ್ತು ಕರವಸ್ತ್ರ ; ಪರಿಣಾಮಕಾರಿ ಪ್ರಯತ್ನ

ಕುಮಾರ ಜೋಶಿಯವರ '**ಕವಿ ಮತ್ತು ಕರವಸ್ತ್ರ**' ಮುನ್ನುಡಿಯ ಕನ್ನಡಿಯನ್ನು ಬದಿಗೊತ್ತಿ ಬಂದಿರುವ ಕವನ ಸಂಕಲನ. ವರ್ತಮಾನದ ಕಾವ್ಯ ಲಹರಿ ಸಾಗುತ್ತಿರುವ ದಿಕ್ಕಿನಲ್ಲೇ ಜೋಶಿಯವರು ಹೆಜ್ಜೆ ಹಾಕಿದ್ದಾರೆ. ಕವನ ಸಂಕಲನದಲ್ಲಿ ಶೋಷಣೆ ಮತ್ತು ಪ್ರೇಮ ಪ್ರಧಾನ ಆಶಯದ ಕವಿತೆಗಳು ಹೆಚ್ಚಿವೆ.

ಶೋಷಣಾ ಪ್ರಧಾನ ಕವಿತೆಗಳಲ್ಲಿ ಕವಿಯ ಶೋಷಿತ ವರ್ಗದ ಪರವಾದ ನಿಲುವುಗಳಿವೆ. ಜ್ಞಾನ-ವಿಜ್ಞಾನಗಳ ಬೆಳಕು ಮೂಡುವ ಮೊದಲಿನಿಂದಲೇ ಸಂಪ್ರದಾಯವಾದಿಗಳು ಮತ್ತು ಬಂಡವಾಳಶಾಹಿ ವರ್ಗದವರು ಸಮಾಜದಲ್ಲಿ ಬಿಕ್ಕಟ್ಟಿನ ಬೀಜವನ್ನು ಬಿತ್ತುತ್ತಲೇ ಬಂದಿದ್ದಾರೆ. ಅದನ್ನು ತಡೆಯುವ ಎದೆಗಾರಿಕೆ ಪ್ರಸ್ತುತ ಸಮಾಜದಲ್ಲೂ ಯಾರಿಗೂ ಇಲ್ಲದ್ದನ್ನು ಕಂಡ ಕವಿಗೆ ಕೋಪ ನೆತ್ತಿಗೇರುತ್ತದೆ. ಆ ಸಂದರ್ಭದಲ್ಲಿ ಶಬ್ದಗಳು ಕೆಂಡಗಳಾಗುತ್ತವೆ. ಆಗ "ಹಿಮಗಿರಿಯೆತ್ತರ ಕತ್ತು ಚಾಚಿ ಅಟ್ಟಹಾಸಗೈವ ; ಪಟ್ಟಭದ್ರ ಸೂತ್ರಧಾರಿಗಳಿಗಿಡಬೇಕು; ಬೆಂಕಿ ಕಿತ್ತೊಗೆಯಬೇಕು ಬೇರು"—(ಬೆಕ್ಕಿಗೆ ಗಂಟೆ) ಎಂಬ ಕ್ರಾಂತಿಕಾರಿ ಭಾವನೆಗಳು ಹೊರಹೊಮ್ಮುತ್ತವೆ. ಸಂಪ್ರದಾಯಗಳು "ನಮ್ಮ ನೆಲದ ಮುಗ್ಗಿದ ಮೌಲ್ಯ"ಗಳೆಂದು ಅವರು ಪರಿಗಣಿಸುತ್ತಾರೆ. ಸಮಾಜಕ್ಕೆ ವಿಷಬೀಜಗಳಾಗುತ್ತಿರುವ ಸಂಪ್ರದಾಯವಾದಿಗಳು "ಕೆಂಪು ರೇಶಿಮೆಯ ಮಡಿಯಲ್ಲಿ ಪೂಜೆಗೆ ಹೊರಟಾಗ ; ಪಾದದ ಕೆಳಗಿನ ಭೂಮಿ ಅಳುವುದು ಕೇಳಿಸುವುದು ; ಸಂಶಯ". (ಬೆಕ್ಕಿಗೆ ಗಂಟೆ) ಎಂಬ ವಾಕ್ಯಗಳ ಮೂಲಕ ಜೋಶಿಯವರ ಕಾವ್ಯ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯಲು ಪ್ರಯತ್ನಿಸುತ್ತದೆ. ವಿಚಾರಶಕ್ತಿಗೆ ಮಂಕು ಕವಿಸುತ್ತಿರುವ ಸಂಪ್ರದಾಯಗಳ ಬಗ್ಗೆ ಆಕ್ರೋಶ ವ್ಯಕ್ತಪಡಿಸುವ ಕವಿ ಸಮಕಾಲೀನ ಪ್ರಜ್ಞೆಯತ್ತ ಗಮನ ಹರಿಸಿದ್ದಾನೆ.

ಸಂಪ್ರದಾಯಕ್ಕೆ ಪೂರಕದಂತಿರುವ ರಾಜಕೀಯ ಸಮಾಜವನ್ನು ಬೇರೆಡೆಗೆ ಕೊಂಡೊಯ್ಯಲು ಪ್ರಯತ್ನಿಸುತ್ತಿದೆ. ಅಂತಹ ರಾಜಕೀಯವನ್ನು ಎತ್ತಿಹಿಡಿಯಲು ಹವಣಿಸುವವರನ್ನು ಕವಿ "ಉತ್ಸವ ಮೂರ್ತಿಗೆ" ಕವನದಲ್ಲಿ ವಿಡಂಬಿಸಿದ್ದಾನೆ. ಸಮಾಜ ಸೇವೆಯ ವೇಷ ತೊಟ್ಟಿರುವ ಅವರು "ನೋವು ಹತ್ತಿದಾಗ ಹೆಗಲು ಬದಲಾಯಿಸುವ" ಜನರೆಂದು ಕವಿ ಸಮಾಜವನ್ನು ಎಚ್ಚರಿಸಿದ್ದಾನೆ.

ರೈತನ ನೋವಿಗೆ ಸ್ಪಂದಿಸಲು ಒಡೆಯನನ್ನು ನೇಗಿಲಿಗೆ ಕುತ್ತಿಗೆ ಕೊಡಲು ಒತ್ತಾಯಿಸುವ ಆಕ್ರೋಶ "ಒಡೇರಲ್ಲಿ ಒಂದು ಮಾತು" ಕವನದಲ್ಲಿ ಕಿಡಿಕಾರಿದೆ. ಹೀಗೆಯೇ ಶೋಷಣೆಯ ಆಶಯವನ್ನು "ಎಳೆ ಸುಳಿಯ ಮೊದಲ ಪಾಠ", "ಸೂಚನೆ", "ಇಲ್ಲದ ಸೇತುವೆಯ ಕುರಿತು" ಮೊದಲಾದ ಕವನಗಳಲ್ಲಿ ಕಾಣಬಹುದು.

ಮುಂಬಯಿ ವಾಸಿಯಾದ ಜೋಶಿಯವರಲ್ಲಿ ಅಲ್ಲಿನ ಬಣ್ಣದ ಬದುಕಿನ ಚಿತ್ರಗಳು ಅಚ್ಚಳಿಯದಂತೆ ನಿಂತಿವೆ. ಅವುಗಳ ದರ್ಶನವನ್ನು "ಮುಂಬಯಿಯಲ್ಲಿ ಬಿದ್ದದ್ದು" "ಕಂತುಗಳ ಬದುಕಿನಲ್ಲಿ" ಕವಿತೆಗಳಲ್ಲಿ ನೀಡಿದ್ದಾರೆ. ಯಾಂತ್ರಿಕ ಬದುಕಿಗೆ ಸಿಕ್ಕಿ "ಪ್ರಶ್ನೆಯಾಗಿಯೇ" ವಾಸಿಸುವ ಮುಂಬಯಿ ವಾಸಿಗಳ ಬದುಕು ಒಂದು ಪರಿಪೂರ್ಣ ಸ್ವರೂಪ ಪಡೆಯದೆ ತುಂಡು ತುಂಡಾಗಿ ಹೋಗುವುದನ್ನು ಆ ಕವಿತೆಗಳಲ್ಲಿ ಮಾರ್ಮಿಕವಾಗಿ ಚಿತ್ರಿಸಲಾಗಿದೆ.

ಜೋಶಿಯವರ ಪ್ರೇಮ ಕವಿತೆಗಳು ನೈಸರ್ಗಿಕ ಸೆಳೆತಕ್ಕೆ ಬಲಿಯಾದ ಹೆಣ್ಣು-ಗಂಡಿನ ಪ್ರೇಮ-ಕಾಮದ ಭಾವನೆಗಳತ್ತ ಕೊಂಡೊಯ್ಯುತ್ತವೆ. ಅವರ "ಗುಮ್ಮ" ಕವಿತೆಯಲ್ಲಿ ಪ್ರೇಮಕ್ಕಿಂತ ಕಾಮವೇ ಹೆಚ್ಚಾಗಿ ಹರಿದಾಡಿದೆ. ಸ್ಥಾನ-ಮಾನಗಳನ್ನೆಲ್ಲಾ ಬದಿಗಿಟ್ಟು "ಗುಮ್ಮ" (ಕಾಮ)ನಿಗೆ ಶರಣಾಗುವ ಮಾನವನ ಪ್ರಕೃತಿ ಸಹಜ ಗುಣವನ್ನು ಅದರಲ್ಲಿ ಪರಿಚಯಿಸಲಾಗಿದೆ. ಹೆಣ್ಣಿಗಾಗಿ ಮಿಡುಕುವ ಮನದ ಹಲವು ಮುಖಗಳನ್ನು "ಬಾ ಬರುವೆಯಾ ?" ಕವಿತೆ ಬಿಂಬಿಸುತ್ತದೆ. ಗಂಡಿನ ಯೌವನಕ್ಕೆ ಕಾಂತಿ ಬರುವುದು ಹೆಣ್ಣಿನಿಂದ ಅದಕ್ಕಾಗಿ ಕವಿ "ಯೌವನದ ಸೂರ್ಯ ಇರುಳು ಇಣುಕಿ ; ನಕ್ಷತ್ರಗಳರಳುವ ಮುನ್ನ" ... ಬಾಳಿನ ದೇಗುಲಕ್ಕೆ ಅವಳನ್ನು ಆಹ್ವಾನಿಸುತ್ತಾನೆ. ಆ ದೇಗುಲದಲ್ಲಿ ಪ್ರೇಮದ ಸ್ಥಿರ ಮೂರ್ತಿಯನ್ನು ನಿಲ್ಲಿಸುವ ನಿರ್ಧಾರ ಕೈಗೊಳ್ಳುತ್ತಾನೆ. ಆದರೆ ನಗರದ ಯಾಂತ್ರಿಕ ಬದುಕಿನಲ್ಲಿ ಪ್ರೀತಿಯನ್ನು ಪ್ರಾಯೋಗಿಕ ಹಂತಕ್ಕೆ ಕೊಂಡೊಯ್ಯಲು ಸಮಯಕ್ಕೇ ಕೊರತೆ. ಆದ್ದರಿಂದ ದೈನಂದಿನ ಕೆಲಸಗಳ ಚಕ್ರಕ್ಕೆ ಸಿಕ್ಕಿ ಅನುಭವದಿಂದ ದೂರ ಉಳಿಯುವ ಮಧುರ ಕ್ಷಣಗಳನ್ನು ಮೆಲುಕುಹಾಕಿಕೊಳ್ಳುವುದರಲ್ಲೇ ಯೌವ್ವನದ ರುಚಿಯುಣ್ಣುತ್ತಾ ಗಡಿ ತಲುಪುವಂತಾಗುತ್ತಿದೆ ಎಂಬ ನೋವಿನ ಅಸಹಾಯಕತೆ "ಇಪ್ಪತ್ತೆಂಟರಲ್ಲಿ" ... ಕವನದಲ್ಲಿ ಕಾಣಿಸಿಕೊಂಡಿದೆ. ಇದೇ ರೀತಿ 'ಆದದ್ದು', 'ಆಗದ್ದು', 'ವಿರಸ-ನಾಲ್ಕು ಬಗೆ' 'ಕನವರಿಕೆ' ಮೊದಲಾದವು ಅವರ ಪ್ರೇಮ ಕವನಗಳಾಗಿವೆ.

ಸಂಕಲನದಲ್ಲಿನ ಹನಿಗವನಗಳು ಜೋಶಿಯವರ ಕಾವ್ಯ ಪ್ರತಿಭೆಯ ಗಟ್ಟಿಕಾಳುಗಳು. ಅವುಗಳಲ್ಲಿ ವ್ಯಂಗ್ಯ, ವಿಡಂಬನೆ, ವಿಷಾದ, ಚಿಂತನೆ ಮಡುಗಟ್ಟಿವೆ. ನಿದರ್ಶನಕ್ಕೆ ದೇವರ ಬಗ್ಗೆ ವ್ಯಕ್ತವಾಗಿರುವ ವ್ಯಂಗ್ಯವನ್ನು ನೋಡಬಹುದು :

ಅಪಘಾತಕ್ಕೆ ತುತ್ತಾದ/ಬಸ್ಸಿನ ಶೇಪದಲ್ಲಿ ಮುರಿದ ಚೌಕಟ್ಟಿನ/ಚೂರುಚೂರಾದ ಗಾಜುಗಳ ಡಿಗೆ ಹೆಣಗಳ ಕೆಳಗೆ/ಇನ್ನೂ ಅದೇ ಮಂದಹಾಸ ಅಭಯಹಸ್ತ- (ದೇವರು)

ಕುಮಾರ ಜೋಶಿಯವರ ಕವನಗಳಲ್ಲಿ ಶೋಷಣೆ ವಿರೋಧಿ ಧೋರಣೆ, ಸಂಪ್ರದಾಯ ಬದ್ಧ ಸಮಾಜದ ಬಗ್ಗೆ ವಿಷಾದ, ವಿಡಂಬನೆ, ಗಂಡು-ಹೆಣ್ಣಿನ ಮಾನವೀಯ ಸಂಬಂಧಗಳು ಕಾಣಿಸಿಕೊಳ್ಳುತ್ತವೆ. ಕೆಲವೆಡೆಗಳಲ್ಲಿ ಇಣುಕುವ ಸಿಟ್ಟಿನ ಅನಿಸಿಕೆಗಳು, ಏಕತಾನತೆ, ವಾಚ್ಯ ಕಾವ್ಯ ಕಲೆಯನ್ನು ಕೆಡಿಸುತ್ತವೆ. ಆದರೂ ಶಬ್ದಗಳನ್ನು ಹೆಕ್ಕಿ ಬಳಸುವುವರಲ್ಲಿ, ಪ್ರತಿಮಾ-ಪ್ರತೀಕಗಳನ್ನು ಪರಿಣಾಮಕಾರಿಯಾಗಿ ಪ್ರಯೋಗಿಸುವಲ್ಲಿ ಕುಮಾರ ಜೋಶಿಯವರು ಗಟ್ಟಿ ಕವಿಯಾಗುವ ಭರವಸೆ ತುಂಬುತ್ತಾರೆ.

—ಡಾ|| ಸೈಯದ್ ಜಮೀರುಲ್ಲಾ ಷರೀಫ್

(ಕವಿ ಮತ್ತು ಕರವಸ್ತ್ರ : ಕುಮಾರ ಜೋಶಿ, ಪ್ರಕಾಶಕರು : ಗೀತಾ ಬುಕ್‌ಹೌಸ್ ಮೈಸೂರು. ಬೆಲೆ ರೂ ೧೮, ೧೯೮೯)

ಅಕಡೆಮಿಕ್ ಓದಿನ ಜಾಡಿನಲ್ಲಿ ಆಧುನೀಕರಣ

ವಿಮರ್ಶೆಯ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರುವ ಟಿ. ಪಿ. ಅಶೋಕ ೧೯೮೨ರಲ್ಲಿ **"ಕಾರಂತರ ಕಾದಂಬರಿಯಲ್ಲಿ ಗಂಡು-ಹೆಣ್ಣು"** ಎಂಬ ಅಧ್ಯಯನಪೂರ್ಣ ವಿಮರ್ಶೆಯನ್ನು ಹೊರತಂದ ಮೇಲೆ ಈಗ ಕಾರಂತರ ಕಾದಂಬರಿಗಳ ಕುರಿತು ಮತ್ತೊಂದು ಮಹತ್ತ್ವದ ಕೃತಿಯನ್ನು ತಂದಿದ್ದಾರೆ. ಬರಿಯ ನಂಬಿಗೆ ಮತ್ತು ಅಭಿಪ್ರಾಯದ ಸ್ಫೂರ್ತಿಗಳಷ್ಟೆ ವಿಮರ್ಶೆಗೆ ಚಾಲನೆ ನೀಡುತ್ತಿರುವ ಈ ಅವಸರದ ಕಾಲದಲ್ಲಿ ಗ್ರಂಥಸ್ಥ ಆಧಾರಗಳಿಗೆ ಬದ್ಧವಾಗಿ ಯೋಚಿಸುತ್ತ ಕಾರಂತರ ಸೃಜನಶೀಲ ಮನಸ್ಸಿನ ಸಫಲತೆ ಮತ್ತು ವಿಸ್ತಾರಗಳನ್ನು ಅರಿಯುವ ಪ್ರಾಮಾಣಿಕ ಯತ್ನ ಇಲ್ಲಿದೆ. ಆದರೆ ಟಿ. ಪಿ. ಅಶೋಕ ತಾವೇ ಹಾಕಿಕೊಂಡ ಬಾಣದ ಗುರುತಿನಲ್ಲಿ ಸಾಗುತ್ತ ಕಾರಂತರ ಸಂಕೀರ್ಣ ಸಾಧನೆಯನ್ನೂ ಒಂದು ಮುಖದಿಂದ ಮಾತ್ರ ನೋಡಲು ಯತ್ನಿಸುತ್ತಾರೆ. "ಕಾದಂಬರಿಕಾರನ ಕಾದಂಬರಿಗಳನ್ನು ಸಮಗ್ರವಾಗಿ ಚರ್ಚಿಸದೆ ಒಂದೊಂದು ಮುಖವನ್ನು ಚರ್ಚಿಸುವ ವಿಮರ್ಶಾ ವಿಧಾನದ ಔಚಿತ್ಯದ ಪ್ರಶ್ನೆ" ಸ್ವತಃ ಅವರನ್ನು ಕಾಡಿವೆ. (ಪುಟ ix) ಆದರೂ ಇಲ್ಲಿಯ ಯತ್ನ, ಎರಡನೇ ದರ್ಜೆಯದಾಗುವುದಿಲ್ಲ. ಏಕೆಂದರೆ ಕಾರಂತರ ಬಗ್ಗೆ ತನಗಿರುವ ಮೆಚ್ಚುಗೆ-ಅಭಿಪ್ರಾಯಗಳನ್ನು ಅವರ ಕಾದಂಬರಿಗಳೊಡನೆ ತಾಳೆ ನೋಡುತ್ತ ಮೆಲುಕು

ಹಾಕುತ್ತ ಅಭಿಪ್ರಾಯಗಳನ್ನು ತಿದ್ದಿಕೊಳ್ಳುತ್ತ ಸಂಗ್ರಹವಾಗಿ ಹೇಳಿರುವುದು ಇಲ್ಲಿಯ ವೈಶಿಷ್ಟ್ಯ.

"ವ್ಯವಸ್ಥೆಯೊಂದು ಆಧುನಿಕ ಮೌಲ್ಯಗಳಿಗೆ ಮುಖಾಮುಖಿಯಾದಾಗ ಪಲ್ಲಟಗೊಳ್ಳುವ ಕ್ರಮ"ವೇ ಕಾರಂತರ ಕಾದಂಬರಿಗಳಲ್ಲಿ ಗೋಚರವಾಗುವ ಆಧುನೀಕರಣದ ಪ್ರಕ್ರಿಯೆ ಎನ್ನುವ ಚೌಕಟ್ಟನ್ನು ನಿರ್ಮಿಸಿಕೊಂಡು ಅವರ ಸತ್ಯದ ಜಾಡನ್ನು ಅರಸುತ್ತ ಇಲ್ಲಿಯ ವಿಮರ್ಶೆಯನ್ನು ನಿರ್ದಿಷ್ಟಗೊಳಿಸಿಕೊಳ್ಳಲಾಗಿದೆ. ಆದರೆ "(ಕಾರಂತರ) ಅಷ್ಟೊಂದು ಸಫಲವಲ್ಲದ ಕಾದಂಬರಿಗಳಲ್ಲಿ ಈ ಪ್ರಕ್ರಿಯೆ ಹೇಳಿಕೆ, ಭಾಷಣ, ವ್ಯಾಖ್ಯಾನಗಳಲ್ಲಿ ದಾಖಲಾಗಿದ್ದರೆ ಅವರ ಅತ್ಯುತ್ತಮ ಕಾದಂಬರಿಗಳಲ್ಲಿ ಒಂದು ಸಂಕೀರ್ಣ ಅನುಭವವಾಗಿ ಮೂಡಿ ಬರುತ್ತದೆ" ಎಂದು ಹೇಳಿ ಕಾರಂತರ ಕಾದಂಬರಿಗಳ ಯಶಸ್ಸಿನ ತರ—ತಮಗಳ ಅರಿವಿದ್ದರೂ ಕೂಡ ಇಲ್ಲಿ "ಕುಡಿಯರ ಕೂಸು" ಕಾದಂಬರಿಯಲ್ಲಿಯ ವಸಾಹತುಶಾಹೀ ರೂಪದ ಆಧುನೀಕರಣವನ್ನು ಮಹತ್ವದ್ದೆನ್ನುವಂತೆ ಗಮನಿಸಿರುವುದು ಅಸ್ಪಷ್ಟವಾಗಿಯೇ ಉಳಿಯುತ್ತದೆ. ಅಥವಾ, ಟಿ. ಪಿ. ಅಶೋಕ್ ಕಾರಂತರ ಸೃಜನಶೀಲತೆಯ ಯಶಸ್ಸೊಂದನ್ನೇ ಮಾನದಂಡವನ್ನಾಗಿ ಇಟ್ಟುಕೊಳ್ಳದೆ ಆಧುನೀಕರಣದ ವ್ಯಾಪ್ತಿಗೆ ಬಗ್ಗುವುದನ್ನೆಲ್ಲ ಪರಿಶೀಲಿಸಿದ್ದಾರೆ. ಇಲ್ಲಿ ಮುಖ್ಯವಾಗಿ ಪರಿಶೀಲಿಸಿರುವುದು 'ಚೋಮನ ದುಡಿ', 'ಕುಡಿಯರ ಕೂಸು' ಹಾಗು 'ಮರಳಿ ಮಣ್ಣಿಗೆ' ಕಾದಂಬರಿಗಳನ್ನು ಮಾತ್ರ. ತೌಲನಿಕ ಅಧ್ಯಯನಕ್ಕಾಗಿ 'ಸಮೀಕ್ಷೆ', 'ಮೈ ಮನಗಳ ಸುಳಿಯಲ್ಲಿ' ಮೊದಲಾದ ಕಾದಂಬರಿಗಳನ್ನು ಅಲ್ಲಲ್ಲಿ ಎತ್ತಿಕೊಂಡಿದ್ದಾರೆ. ಸೂಕ್ತ ಉದಾಹರಣೆಗಳನ್ನು ಹೆಕ್ಕಿಕೊಂಡು ಜೋಡಿಸುವ ಕ್ರಮದಿಂದಲೇ ಇಲ್ಲಿ ಆಲೋಚನೆಯ ಸ್ಪಷ್ಟತೆ ಹೆಚ್ಚುತ್ತ ಹೋಗುತ್ತದೆ.

ಟಿ. ಪಿ. ಅಶೋಕ ತಮ್ಮ ಪರಿಶೀಲನೆಗಾಗಿ ಸರಳೀಕರಿಸಿಕೊಳ್ಳುವ ಕೆಲವು ಸತ್ಯಗಳು ಅಭ್ಯಾಸ ಯೋಗ್ಯವಾಗಿವೆ : 'ಚೋಮನ ದುಡಿ'ಯಲ್ಲಿ ಮೊಳೆತು ಚಿಗುರಿ ಬಾಡಿ ಉದುರುವ ಚೋಮನ ಆಸೆಯನ್ನೇ ಆ ಕಾದಂಬರಿಯಲ್ಲಿಯ ಆಧುನೀಕರಣದ ಪ್ರಕ್ರಿಯೆ ಎನ್ನುವುದು. ಈ ಆಸೆಗೆ ಬೆಳ್ಳಿ ತೋರುವ ಪ್ರತಿಕ್ರಿಯೆ, ಸಂಕಪ್ಪಯ್ಯನ ತೊಳಲಾಟ, ಚೋಮನ ಸ್ವಂತದ ವ್ಯಥೆ, ಅಚ್ಚರಿ, ಹಿಂಜರಿತಗಳನ್ನೂ ಆಧುನೀಕರಣದ ಮಜಲಿನಲ್ಲಿ ಸೇರುವ ಪ್ರಬಲ ಕ್ರಿಯೆಯೆಂದು ಗುರುತಿಸಿರುವುದು ಮಹತ್ವದ ಗ್ರಹಿಕೆಯೇ ಆಗಿದೆ.

'ಕುಡಿಯರ ಕೂಸು' ಕಾದಂಬರಿಯಲ್ಲಿ ಆಧುನೀಕರಣ ಪ್ರವೇಶ ಮಾಡುವುದು ಮಲೆಗಳಲ್ಲಿಯ ಕುಡಿಯರ ಪರಂಪರಾಗತ ಬದುಕಿನಲ್ಲಿ ಕಾಡನ್ನು ಸವರಿ ಏಲಕ್ಕಿ ಬೆಳೆಸುವ ಯೋಜನೆಯಿಂದ ಅಲ್ಲಿಗೆ ಕಾಲಿಟ್ಟ ತಿರುಮಲ ಭಟ್ಟರ ವಸಾಹತುಶಾಹೀ ಧೋರಣೆಯ

ರೂಪದಲ್ಲಿ. ಆದರೆ ಆಧುನೀಕರಣ ಇಲ್ಲಿ ಕೂಡ ಪೂರ್ಣಗೊಳ್ಳುವುದಿಲ್ಲ ಮತ್ತು ಅದು ಕಾಲೂರಿದಷ್ಟೇ ಅಂಶದಿಂದ ನೋಡುವುದಾದರೆ ಸುಧಾರಿತವಾದ ಒಳ್ಳೆಯ ವ್ಯವಸ್ಥೆಯನ್ನು ನೀಡಲು ಅವರಿಂದ ಸಾಧ್ಯವಾಗುವುದಿಲ್ಲ. ಹಾಗಾದರೆ ಆಧುನೀಕರಣಕ್ಕೆ ಕಾರಂತರು ಒಟ್ಟೂ ಧೋರಣೆಯಲ್ಲಿ ವಿರೋಧವಾಗಿದ್ದಾರೆಯೇ ? ಇದರ ಕುರಿತು ಅಶೋಕರು ಗಮನ ಹರಿಸಿಲ್ಲ ಆದರೆ ಕಾರಂತರು ಆಧುನೀಕರಣದಲ್ಲಿ ವಿಶ್ವಾಸ ವಿರಿಸಿಲ್ಲ ಎನ್ನುವುದನ್ನು ಎತ್ತಿತೋರಿಸುವಂತೆ ಅಶೋಕ್ ಕಾದಂಬರಿಯ ಪರಿಶೀಲನೆಯನ್ನು ಪೂರೈಸುತ್ತಾರೆ.

ಆದರೆ 'ಮರಳಿ ಮಣ್ಣಿಗೆ' ಕಾದಂಬರಿಯ ಸಂದರ್ಭದಲ್ಲಿ ಈ ಪ್ರಕ್ರಿಯೆ ಯಶಸ್ವಿಯಾಗುತ್ತದೆ. "ಆಧುನಿಕ ಶಿಕ್ಷಣ ವ್ಯವಸ್ಥೆಯನ್ನು ಒಪ್ಪಿಕೊಳ್ಳುವುದೆಂದರೆ ಇಂಗ್ಲಿಷನ್ನು ಕಲಿಯುವುದರ ಜೊತೆಗೆ ಸಾಮಾಜಿಕ—ಸಾಂಸ್ಕೃತಿಕ ಬದಲಾವಣೆಗಳನ್ನು ಒಪ್ಪಿಕೊಳ್ಳುವುದೆಂದೇ ಅರ್ಥ" ಎನ್ನುವ ವಿಮರ್ಶಕರ ಮಾತು ಕಾದಂಬರಿಯಲ್ಲಿ ಸಮಸ್ತ ಸ್ಥಿತ್ಯಂತರಕ್ಕೂ ವಾಸ್ತವಿಕವಾಗಿ ಚಾಲನೆ ಕೊಡುವ ಕೇಂದ್ರ ಬಿಂದು. ಮೊಮ್ಮಗ ರಾಮನ ಮರುಳುವಿಕೆಯಲ್ಲಿ ಕಾದಂಬರಿಯ ಸೋಲನ್ನು ಕಾಣುತ್ತ, ಮರುಳುವುದೇ ಬಹು ದೊಡ್ಡ ಸೋಲಿನ ಸಂಕೇತವೆಂದು ವಾದಿಸುವ ಮಂದಿಗೆ ಕಣ್ಣಿಗೆ ಬೀಳದ ಮತ್ತೊಂದು ಅಂಶವೆಂದರೆ ಊರಿಗೆ ಮರಳಿದ ರಾಮನ ಹೊಸ ಸಂವೇದನೆ, ಪ್ರಜ್ಞೆ ಹಾಗು ಹಳ್ಳಿಯ ಬದುಕಿನ ಶ್ರಮದಲ್ಲಿ ರಾಮು ಹುಡುಕಿಕೊಳ್ಳುವ ಹೊಸ ಅರ್ಥ. ಭೌತಿಕ ಸ್ಥಿತಿಯಲ್ಲಿಯೆ ಬದಲಾವಣೆಯೊಂದೇ ಆಧುನೀಕರಣದ ಏಕೈಕ ಫಲವಲ್ಲ.

ಟಿ. ಪಿ. ಅಶೋಕ ತಮ್ಮ ವಿಮರ್ಶೆಯನ್ನು ಅಕಡೆಮಿಕ್ ಓದಿನ ಜಾಡಿನಲ್ಲಿ ಕೊಂಡೊಯ್ದರೂ ಕೂಡ ನಾನು ವೈಯಕ್ತಿಕವಾಗಿ ಮೆಚ್ಚುವ ಇದರ ಗುಣವೆಂದರೆ ಕಲಾತ್ಮಕತೆಯ ದೃಷ್ಟಿಯಿಂದ ಮಾತ್ರ, ಕಾರಂತರ ಕಾದಂಬರಿಗಳನ್ನು ತೂಗಿ ನೋಡಿ ಇಟ್ಟು ಬಿಡುವ ಇತ್ತೀಚಿನ ವರ್ಷಗಳಲ್ಲಿ ಈ ವಿಮರ್ಶೆ ಅದರಿಂದ ಮುಕ್ತವಾಗಿದೆ. ಜೊತೆಗೆ, ವಿಮರ್ಶಕರಾಗಿ ಅಶೋಕ ತಮ್ಮ ಅಭಿಪ್ರಾಯದ ಜವಾಬ್ದಾರಿಯನ್ನು ಹೊರುತ್ತಾರೆ ಎನ್ನುವುದು ಈ ಅಧ್ಯಯನದ ಪ್ಲಸ್ ಪಾಯಿಂಟ್.

—ಆರ್. ಡಿ. ಹೆಗಡೆ

(ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣ ಪ್ರಕ್ರಿಯೆ :
ಲೇ : ಟಿ. ಪಿ. ಅಶೋಕ, ಪ್ರ : ಕರ್ನಾಟಕ ಸಂಘ, ಪುತ್ತೂರು, ಬೆಲೆ ರೂ. ೧೫)

ಪುಸ್ತಕ ಸ್ವೀಕಾರ

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ., ಎಂಬಿಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು–560 001 ಇವರ ಪ್ರಕಟಣೆಗಳು .

- **ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು :** ಲೇ : ಎಸ್. ಪಿ. ಶಂಕರ ನಾರಾಯಣರಾವ್ : ಪುಟಗಳು : 564; ಬೆಲೆ : 65 ರೂ.
- **ಮಾರ್ಕ್ಸ್, ಎಂಗೆಲ್ಸ್ ಆಯ್ದ ಕೃತಿಗಳು.** ಪುಟಗಳು–334 ; ಬೆಲೆ 25 ರೂ.
- **ಲೆನಿನ್ ಆಯ್ದ ಕೃತಿಗಳು (3)** : ಪುಟಗಳು: 390, ಬೆಲೆ ರೂ. 25
- **ಲೆನಿನ್ ಆಯ್ದ ಕೃತಿಗಳು (3)** ಪುಟಗಳು 317 ; ಬೆಲೆ–25 ರೂ. ಈ ಮೂರೂ ಪುಸ್ತಕಗಳ ಅನುವಾದಕರು ಕೆ. ಎಲ್. ಗೋಪಾಲಕೃಷ್ಣರಾವ್.
- **ರಾಷ್ಟ್ರೀಯ ವಿಮೋಚನಾ ಹೋರಾಟಗಾರರು** : ಪುಟಗಳು : 234 ಬೆಲೆ : ರೂ. 20-00
- **ಕಜಾಕರು** (ನೀಳ್ಗತೆ) : ಮೂಲ : ಎವ್ಗೇನಿಯ್‌ಲನ್ ಸರೊ ; ಅನು : ಎಚ್. ಎಸ್. ಹರಿಶಂಕರ್, ಪುಟಗಳು-2[illegible]8; ಬೆಲೆ 25–00ರೂ.
- **ಮಾಧವಿ** (ನಾಟಕ) – ಮೂಲ : ಭೀಷ್ಮ ಸಹಾನಿ, ಅನು : ಗೊರೂರು ಶ್ರೀನಿವಾಸಮೂರ್ತಿ ಪುಟಗಳು: 112, ಬೆಲೆ: 15–00 ರೂ.
- **ಮಹಿಳೆ ಬಿಡುಗಡೆ ಹಾದಿಯಲ್ಲಿ :** ಲೇ : ಎಸ್. ಗಾಯತ್ರಿ : ಪುಟಗಳು 164; ಬೆಲೆ: 18-00 ರೂ.
- **ನಾನೇಕೆ ನಾಸ್ತಿಕ** ಲೇ : ಭಗತ್‌ಸಿಂಗ್ ; ಅನು : ಗಾಯತ್ರಿ ಪುಟಗಳು : 52 ಬೆಲೆ : 6–00 ರೂ.
- **ಬಾಬ್ರಿ ಮಸೀದಿ ರಾಮಜನ್ಮಭೂಮಿ ವಿವಾದ** ಲೇ : ಸಿ. ರಾಜೇಶ್ವರರಾವ್, ಶಮೀಮ್ ಫೈಜಿ : ಪುಟಗಳು : 31, ಬೆಲೆ 2-00ರೂ
- **ನಿತ್ಯ ಜೀವನದಲ್ಲಿ ಕಾನೂನು - 1** ಪುಟಗಳು : 130 ; ಬೆಲೆ : 15–00 ರೂ.
- **ನಿತ್ಯ ಜೀವನದಲ್ಲಿ ಕಾನೂನು – 2** ಪುಟಗಳು : 120 ; ಬೆಲೆ: 15-00 ರೂ. ಈ ಎರಡೂ ಪುಸ್ತಕಗಳ ಲೇಖಕರು ಎಸ್. ಆರ್. ಗೌತಮ್
- **ಬುದ್ಧಿಮಾಂದ್ಯ ಮಗುವಿನ ಆರೈಕೆ** ಪುಟಗಳು : 28: ಬೆಲೆ: 4–50 ರೂ.
- **ಇಚ್ಛಿತ್ತ ವಿಕಲತೆ :** ಪುಟಗಳು : 28, ಬೆಲೆ: 4-50 ರೂ. ಈ ಎರಡೂ ಪುಸ್ತಕಗಳ ಲೇಖಕರು ಡಾ. ಸಿ. ಆರ್. ಚಂದ್ರಶೇಖರ್.
- **ವಿಜ್ಞಾನದ ಒಗಟುಗಳು** : ಲೇ: ವೆಂಕಟೇಶ ಹುಣಶೀಕಟ್ಟಿ: ಪುಟಗಳು : 48 : ಬೆಲೆ: 5–00 ರೂ.
- **ಬಂಗಾರದ ಬಟ್ಟಲು** : ಅನು : ಕೆ. ಎಲ್. ಗೋಪಾಲಕೃಷ್ಣರಾವ್; ಪುಟಗಳು: 109, ಬೆಲೆ: 20–00 ರೂ.

ಕವನ ಸಂಕಲನ

- **ಸಲೂನಿನಲ್ಲಿ ಕಂಡ ಹುಡುಗ :** ಅರವಿಂದ ನಾಡಕರ್ಣಿ, ಪುಟ 84, ಬೆಲೆ ರೂ. 20, ಕೃತಿ ಪ್ರಕಾಶನ, 859, 14ನೇ ಕ್ರಾಸ್, 18ನೇ ಮೇನ್, ಬನಶಂಕರಿ 2ನೇ ಸ್ಟೇಜ್, ಬೆಂಗಳೂರು-560 070.
- **ಜೀವ ಝಲ್ಲರಿ :** ಬಸವರಾಜ ವಕ್ಕುಂದ, ಪುಟ 102, ಬೆಲೆ ರೂ. 15, ಶೂದ್ರ ಪ್ರಕಾಶನ, ಬೆಂಗಳೂರು 560 029.
- **ಮಣ್ಣು ನೆನಪಿನ ಮೇಲೆ :** ಜಿ. ಸುಬ್ರಾಯ ಭಟ್ ಬಕ್ಕಳ ಪುಟ 62, ಬೆಲೆ ರೂ. 10, ಬಕುಲ ಪ್ರಕಾಶನ, ಬಕ್ಕಳ—581336, ಶಿರಸಿ (ಉ.ಕ.)
- **ಮಣ್ಣಲ್ಲಿ ಬರೆದ ಅಕ್ಷರ :** ಜಂಬಣ್ಣ ಅಮರಚಿಂತ, ಪುಟ 68, ಬೆಲೆ ರೂ. 15, ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ರಾಯಚೂರು—584101.
- **ಐಕ್ಯಗೀತೆ :** ವಿ. ಮುನಿವೆಂಕಟಪ್ಪ, ಪುಟ 40, ಬೆಲೆ ರೂ. 6, ವಿಚಾರವಾದಿ ಪ್ರಕಾಶನ, 382, 4ನೇ ಮೇಯಿನ್, ಸರಸ್ವತಿಪುರಂ, ಮೈಸೂರು-570 009.
- **ರಸ್ತೆಯಂಚಿನ ಗಾಡಿ :** ಪ್ರತಿಭಾ ನಂದಕುಮಾರ್, ಪುಟ 1·6, ಬೆಲೆ ರೂ. 25, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು-560 029.
- **ಕಾವಳದ ಕವನಗಳು :** ಧರ್ಮದಾಸ್ ಬಾರ್ಕಿ, ಬೆಲೆ ರೂ. 16.
- **ಏನಾದರೊಂದಾಗು :** ಧರ್ಮದಾಸ್ ಬಾರ್ಕಿ, ಬೆಲೆ ರೂ. 18. ಮೇಲಿನ ಎರಡೂ ಪುಸ್ತಕಗಳ ಪ್ರಕಾಶಕರು ; ರಾಗಿಣಿ ಪ್ರತಿಷ್ಠಾನ, ವಿಜಯನಗರ 2ನೇ ಹಂತ, ಬೆಂಗಳೂರು—560 040.
- **ಕನ್ನಡಮ್ಮನಿಗೆ ಕಿರು ಕಾಣಿಕೆ :** ಕೆ. ಸಿ. ಪ್ರಕಾಶ್, ಕಗ್ಗೆರೆ, ಪುಟ 36, ಬೆಲೆ ರೂ. 5, (ಪ್ರಕಾಶನ ಹೆಸರಿಸಿಲ್ಲ—ಸಂಪಾದಕ.)
- **ಲಾಲ್ ಬನೋ ಗುಲಾಮಿ ಚೋಡೋ ಬೋಲೋ ವಂದೇ ಮಾತರಂ :** ಮೂಲ : ಎನ್. ಕೆ. (ಅನು : ಬಂಜಗೆರೆ ಜಯಪ್ರಕಾಶ್), ಪುಟ 56, ಬೆಲೆ ರೂ 8, ಸಾಹಿತಿ ಮಿತ್ರರು, 76, 'ಸೃಜನ' 3ನೇ ಹಂತ, ವಿನಾಯಕ ಲೇ ಔಟ್, ವಿಜಯನಗರ, ಬೆಂಗಳೂರು-560 040.

ಕಾದಂಬರಿಗಳು :

- **ಬೆಟ್ಟದ ಪುರ :** (ಅಭ್ಯಾಸ, ಪ್ರಯೋಗ, ಪರಿಣಾಮ ಭಾಗ-೧) ಆರ್ಚಿ, ಪುಟ 224, ಬೆಲೆ ರೂ. 25, ಎನ್ವಾರೆಪ್ಮೆಂಟ್ ಪ್ರಕಾಶನ, ಕೋಟೇಶ್ವರ-576222.
- **ದೃಷ್ಟಿ :** ಡಾ॥ ನಾ. ಮೊಗಸಾಲೆ, ಪುಟ 159, ಬೆಲೆ ರೂ. 18, ಭಾಗ್ಯಲಕ್ಷ್ಮಿ ಪ್ರಕಾಶನ, ಬನಶಂಕರಿ 3ನೇ ಸ್ಟೇಜ್, ಬೆಂಗಳೂರು-560085.

o **ಮುಸುಕು :** ಡಾ॥ ಎಚ್. ಗಿರಿಜಮ್ಮ, ಪುಟ 168, ಬೆಲೆ ರೂ. 20.

o **ಸೀಮಾರೇಖಾ :** ಡಾ॥ ಎಚ್. ಗಿರಿಜಮ್ಮ, ಪುಟ 72, ಬೆಲೆ ರೂ. 10. ಮೇಲಿನ ಎರಡೂ ಪುಸ್ತಕಗಳ ಪ್ರಕಾಶಕರು : ಎಸ್. ಆರ್. ಪ್ರಕಾಶನ, 177 (ಮುಪಡಿ) ಬಳೇಪೇಟೆ, ಬೆಂಗಳೂರು-560 053.

ಇತರೆ :

o **ಹೆಲನ್ ಕೆಲರ್ :** (ಜೀವನ-ಬದುಕು) ಎಂ. ಆರ್. ರಾಮಯ್ಯ, ಪುಟ 136, ಬೆಲೆ ರೂ. 20, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು-560 018.

o **ಶಂಕರಾಚಾರ್ಯ ಮತ್ತು ಪ್ರತಿಗಾಮಿತನ (7ನೇ ಮುದ್ರಣ)** ಭಗವಾನ್, ಪುಟ 112, ಬೆಲೆ ರೂ. 17, ಮಹಿಮ ಪ್ರಕಾಶನ, 10, ಹುಡ್ಕೊ ಮನೆಗಳು, ಕುವೆಂಪುನಗರ, ಮೈಸೂರು-570023.

o **ಕುವೆಂಪು ಸಾಹಿತ್ಯ ವಿಚಾರ :** ಶಿವರಾಮು ಕಾಡನಕುಪ್ಪೆ, ಪುಟ 164, ಬೆಲೆ ರೂ. 18 ಮತ್ತು 30, ಸಹ್ಯಾದ್ರಿ ಪ್ರಕಾಶನ, ಜಯಲಕ್ಷ್ಮಿಪುರಂ, ಮೈಸೂರು-570 012.

o **ಜಾನಪದ ತಡಕಾಟ :** ಡಾ॥ ಹಿ. ಶಿ. ರಾಮಚಂದ್ರೇಗೌಡ, ಪುಟ 140, ಬೆಲೆ ರೂ. 15, ಮಾನವಿ ಪ್ರಕಾಶನ, ಎಲ್ - 65, ಮಾನಸ ಗಂಗೋತ್ರಿ, ಮೈಸೂರು-570 006.

o **ಎರಡು ನಾಟಕಗಳು :** (ಮೌನಕ್ರಾಂತಿ, ಮಕ್ಕಳ ಸ್ಕೂಲ್ ಮನೇಲಿ) : ಡಿ. ಈರೇಶ್ ನಗರ್ಲೆ. ಪುಟ 46, ಬೆಲೆ ರೂ. 8, ಚಲನ ಪ್ರಕಾಶನ ಬೆಂ-32.

o **ಬಂಡಾಯ ಹತ್ತು ವರ್ಷ :** ಸಂ. ಆರ್. ಜಿ ಹಳ್ಳಿ ನಾಗರಾಜ್, ಪುಟ 88, ಬೆಲೆ ರೂ. 12. ಅನ್ವೇಷಣೆ ಪ್ರಕಾಶನ, ವಿಜಯನಗರ, ಬೆಂಗಳೂರು-560040

o **ಕಳ್ಳ ಸುಳ್ಳರ ಜಾನಪದ ಕಥೆಗಳು :** ಸಂ : ಜೇನಹಳ್ಳಿ ಸಿದ್ದಲಿಂಗಪ್ಪ, ಪುಟ 72 ಬೆಲೆ ರೂ. 8, ಪ್ರೇಮ ಪ್ರಕಾಶನ, ಜೇನಹಳ್ಳಿ, ಶಿವಮೊಗ್ಗ ಜಿಲ್ಲೆ -577223.

o **ವೇದಗಳ ಈ ನಾಡಿನಲ್ಲಿ :** ಮೂಲ : ಇ. ಎಂ. ಎಸ್. ನಂಬೂದರಿಪಾಡ್, (ಅನು : ಎ. ಅಶ್ವಥ್‌ನಾರಾಯಣರೆಡ್ಡಿ, ಎಂ. ಹೆಚ್. ಶ್ರೀಧರ್‌ಮೂರ್ತಿ) ಪುಟ 64, ಬೆಲೆ ರೂ. 8, ಜನಸ್ನೇಹ ಪ್ರಕಾಶನ, ವಿಜಯನಗರ 2ನೇ ಹಂತ, ಬೆಂಗಳೂರು 560 040.

o **ಕವಿರಾಜ ಮಾರ್ಗದ ಅಲಂಕಾರಾಂತರ್ಭಾವವಾದ :** ಬಿ. ಕೃಷ್ಣ ಶರ್ಮಾ, ಪುಟ 200, ಬೆಲೆ ರೂ. 25, ಪ್ರಸಾದ ಪ್ರಕಾಶನ, ವಿಶ್ವೇಶ್ವರಪುರಂ, ಬೆಂಗಳೂರು-560004.

ವಿ. ಜಿ. ಭಟ್ಟ : ವಿಕಟತೆಯಿಂದ ದಾರ್ಶನಿಕತೆಯೆಡೆಗೆ

—ಚಂದ್ರ ನೊಗೇರ

೧೯೯೧ರ ಏಪ್ರಿಲ್ ೬ರಂದು ಮುಂಬಯಿಯಲ್ಲಿ ನಿಧನರಾದ ವಿ. ಜಿ. ಭಟ್ಟ (ವಿಷ್ಣು ಗೋವಿಂದಭಟ್ಟ) ಕನ್ನಡದ ಪ್ರಥಮ ಶ್ರೇಣಿಯ ನವ್ಯ ಕವಿಗಳಲ್ಲೊಬ್ಬರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಜನಿಸಿ ಸಾಂಗ್ಲಿ, ಪೂನಾ, ಕೊಲ್ಹಾಪುರಗಳಲ್ಲಿ ಶಿಕ್ಷಣ (ಎಂ.ಎ) ಪಡೆದು ಖಾದಿ ಮತ್ತು ಗ್ರಾಮೋದ್ಯೋಗದಲ್ಲಿ ಹಿರಿಯ ಅಧಿಕಾರಿಯಾಗಿದ್ದರು. ಉತ್ತರ ಕನ್ನಡದ ಬಹುತೇಕ ಸಾಹಿತಿಗಳಂತೆ 'ಮುಂಬಯಿ'ಯನ್ನು ಆರಿಸಿಕೊಂಡ ವಿ. ಜಿ. ಭಟ್ಟರು ೧೯೫೬ರಲ್ಲಿ ತಮ್ಮ ಮೊದಲ ಕವನ ಸಂಕಲನ 'ಪಲಾಯನ'ದಿಂದ ಈವರೆಗೆ ಸುಮಾರು ೩೦ ಸಂಗ್ರಹಗಳನ್ನು ತಮ್ಮ ರುಕ್ಮಿಣೀ ಪ್ರಕಾಶನದಿಂದ ಹೊರತಂದಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೮೩) ಗಳಿಸಿದ್ದ ಭಟ್ಟರು ಶ್ರೇಷ್ಠ ಹೊರನಾಡ ಕನ್ನಡಿಗರಾಗಿದ್ದರು.

ಭಟ್ಟರು ನವ್ಯ ಕಾವ್ಯ ಪ್ರಕಾರದ ಆರಂಭಕ್ಕೆ ಮೊದಲೇ ಅದರ ಲಕ್ಷಣಗಳಲ್ಲೊಂದಾದ ವ್ಯಂಗ್ಯವನ್ನು ತಮ್ಮ ಕಾವ್ಯೋದ್ಯೋಗವನ್ನಾಗಿ ಮಾಡಿಕೊಂಡರು. ಇವರ ಕಾವ್ಯದ ವಸ್ತು ಕಸಬರಿಗೆಯಿಂದ ವಿಮಾನದವರೆಗೆ, ಹುಟ್ಟಿನಿಂದ ಸಾವಿನವರೆಗೂ ವ್ಯಂಗ್ಯ ವಿಡಂಬನೆಯಿಂದ ಹರಡಿತ್ತು. ವಿಲಕ್ಷಣ ವಿನೋದದಿಂದ ಚತುರ ಚಾಟೂಕ್ತಿಯಿಂದ ಕಾವ್ಯ ಹೆಣೆದ ಭಟ್ಟರು ನವ್ಯ ಮತ್ತು ನವ್ಯ ಪೂರ್ವದ ನಿಸರ್ಗ, ರಮಣೀಯತೆ, ನಾದಮಾಧುರ್ಯಗಳ ಗೋಜಿಗೆ ಸಿಗಲಿಲ್ಲ. ಇಂಗ್ಲೆಂಡಿನಲ್ಲಿ ೧೭ನೇ ಶತಮಾನದಲ್ಲಿ ರಸ ಸಂಪ್ರದಾಯ ಕಾವ್ಯದ ವಿರುದ್ಧ ಸೆಣಸಿದ ಕವಿ John Donneನ ಪ್ರಭಾವಕ್ಕೆ ಭಟ್ಟರು ಒಗ್ಗಿದ್ದರು.

ಭಾವ ನಿರ್ಭರತೆ, ನೇರತೆ, ಸಹಜ ಅಭಿವ್ಯಕ್ತಿಗಳು ಭಟ್ಟರ ಚುಟುಕುಗಳ ಪ್ರಧಾನ ಅಂಶ. ದಿನಕರ ದೇಸಾಯಿ, ಅಕಬರ ಅಲಿ, ರಾಜರತ್ನಂ, ದೊಡ್ಡುಳರಂಥ ಚುಟುಕುಗಳನ್ನು ಬರೆದ ಭಟ್ಟರು ೧೯೫೬ರಲ್ಲೇ ಮಕ್ಕಳಿಗಾಗಿ "ತುಂಟನ ಪದಗಳು" ಬರೆದರು. ಅವರಲ್ಲಿನ "ಹಳ್ಳಿಸಾಲೆ"ಯಲ್ಲಿ—

ಹಳ್ಳಿಯ ಸಾಲೆ ಚಂದ/ಪಕ್ಕಕೆ ಮಾಸ್ತರ ಬಂದ/ಹುಡುಗರಿಲ್ಲ/ಕೇರಿಯೆಲ್ಲ ಸುತ್ತಿ ಕರೆದುತಂದ !

ಗ್ರಾಮೀಣ ಏಕೋಪಾಧ್ಯಾಯ ಶಾಲೆಯ ಸ್ಪಷ್ಟ ಚಿತ್ರಣವನ್ನು ಭಟ್ಟರು ಕಟ್ಟಿದ್ದು ಹೀಗೆ

ಸಂಸ್ಕೃತದ ಮುಕ್ತಕಗಳಂತೆ, ಕನ್ನಡದ ಹನಿಗವನ, ಮಿನಿಕವನ, ಕಾಪ್ಸೂಲ್ ಕವನ, ಚೌಪದಿ ಮತ್ತು ಇಂಗ್ಲೀಷಿನ ಲಿಮರಿಕ್ಸ್ ಕೂಡಾ ಲಘುಗೀತ ಪ್ರಕಾರ. ಇದು ಜನಪ್ರಿಯವೂ ಹೌದು. ವಿ. ಜಿ. ಭಟ್ಟರಿಗೆ ಇದು ಸಿದ್ಧಿಸಿದ್ದು ಹಲವು ಕವನಗಳಲ್ಲಿ ಕಾಣಬರುತ್ತದೆ.

ಪ್ರಾಸದ ಪೋಷೆ, ಮಾತಿನ ಹದ, ಛಂದಸ್ಸಿನ ಬಿಗುವು, ನಿರೂಪಣೆಯ ಮಿತ ವ್ಯಯಗಳಿಂದ ಕಿರಿದರಲ್ಲಿ ಹಿರಿಯ ಅರ್ಥ ಹೊರಡಿಸುವ ಜಾಣ್ಮೆ ಕವಿಗಿರಬೇಕು ; ವೇದ ವನ್ನೇ ಗರ್ಭೀಕರಿಸಿಕೊಂಡ ಗಾದೆಯಂತೆ ಪರಿಣಾಮಕಾರಿಯಾಗಿ ಕ್ಷಣವೊಂದರ ಸ್ಮಾರಕ ವಾಗುವ ಚುಟುಕುಗಳು ಭಟ್ಟರ 'ಕಿಷ್ಕಿಂಧೆ', 'ಅರಣ್ಯರೋದನ', 'ಕಾವ್ಯವೇದನೆ', 'ಆತ್ಮಶೋಧನೆ', 'ರಕ್ತಾಂಜಲಿ', 'ಉತ್ತರ ಕಾಂಡ' ಮುಂತಾದ ಸಂಕಲನಗಳು ಸಾಬೀತು ಮಾಡುತ್ತವೆ. ಭಟ್ಟರ ಕಾವ್ಯವನ್ನು ಯಾವೊಂದು ಲೇಬಲ್ಲಿಗೂ ಅಂಟಿಸ ಲಾಗದು. ಅನೇಕರಿಗೂ ಭಟ್ಟರು ಪ್ರಗತಿಶೀಲರಾಗಿ ಕಂಡದ್ದು ಈ ಹಿನ್ನೆಲೆಯಲ್ಲಿಯೇ.

ಧಾರವಾಡದಲ್ಲಿದ್ದಾಗ ಬೇಂದ್ರೆಯವರ ಗಂಗಾವತರಣದ 'ಇಳಿದು ಬಾ ತಾಯಿ'' ಕವನಕ್ಕೆ ''ಓ ಗಂಗೇ, ಕವಿಗಳ ಹಿಂದೇ ಕರೆದಿದೆ ನಿನ್ನ, ಆದರೆ ನಿನಗೆ ಒಂದು ತೊಲ ಬುದ್ಧಿ ಇದ್ದರೆ ಇಳಿದು ಬರಬೇಡ, ಇಡೀ ಧಾರವಾಡವೇ ಭಂಗಿ ಕಾಲೋನಿ ಆದೀತು" ಎಂದು ಚುರುಕು ಬಾಣ ಎಸೆದಿದ್ದರು. ಮುಂದೆ ಬೇಂದ್ರೆಯವರು "ಸರಿಮರಿ ನಾಯಿ ಕುಂಯ್‌ಗುಡತ್ತಿತ್ತ. ಭಟ್ಟರಬಾಯಿ ಪಟಗುಡತ್ತಿತ್ತ" ಎಂದು ಬರೆದರಾದರೂ ಬೇಂದ್ರೆ ಅವರ ಮೂಲಕ್ಕೆ ಕೈಹಾಕಿ ಬರೀ ಪ್ರತಿಮೆಗಳನ್ನು ಕ್ರೋಢೀಕರಿಸಿ "ತಕೋ ತಮ್ಮಾ" ಅನ್ನುವುದೂ ಕಾವ್ಯವಾಗುವುದಾದರೆ ಪ್ರಾಸಗಳ ಜೋಮಾಲೆಯೂ ಕವನಕ್ಕೆ ಯಾವುದೋ ಆಕಾರ, ಜೀವಕೊಟ್ಟು ಕುಣಿಸಲು ಸಾಧ್ಯವಿಲ್ಲವೇ ಎಂದು ಸಾಧಿಸಿ 'ಬರೀ ಪ್ರಾಸ' ಎಂದೇ ತರಬೇಕೆಂದಿದ್ದ ಕವನ ಸಂಕಲನ 'ಕತ್ತೆಯ ಕನಸು' ಎಂಬ ಹೆಸರಲ್ಲಿ ೧೯೮೭ರ ಪ್ರಕಟಿಸಿದ್ದರು ಭಟ್ಟರು. ಆದರೂ "ಕೀರ್ತಿನಾಥ-ಮಲ್ಲಿನಾಥ" ಕವನವನ್ನು ತಾನು ಬದುಕಿರುವವರೆಗೂ ಪ್ರಕಟಿಸ ಬಾರದೆಂದುಕೊಂಡ ಭಟ್ಟರ ಆ ಕವನವನ್ನು ಇತ್ತೀಚೆಗೆ ಡಾ. ಹಾಮಾನಾ ಬಯಲು ಮಾಡಿದ್ದಾರೆ. ಭಟ್ಟರ ಕಾವ್ಯ ಶಕ್ತಿ, ನಿಂತು ಬಟ್ಟಲಲ್ಲಿ ಉಕ್ಕಿ ಹೊಯ್ಯುವಾಗ ಹಾಸ್ಯದ ತುಂತುರಿನಲ್ಲಿ ಸೂರ್ಯನ ಬೆಳಕಿನಿಂದ ಕಾಮನಬಿಲ್ಲಿನ ಬಣ್ಣಗಳನ್ನು ಕಾಣುವಂತಹುದು ; ಇಲ್ಲವೇ ಕಿಟ್ಟೆಲ್ ಕೋಶದ ೧೫೫ನೇ ಪುಟದಲ್ಲಿ ಆತ್ಮ ಶೋಧಿಸುವ ಪ್ರಾಮಾಣಿಕ ಧೈರ್ಯದ ಮತ್ತು ಬುದ್ಧಿವಂತಿಕೆಯ ನಿರೀಕ್ಷಣಾ ಶಕ್ತಿ ಅವರ ಕಾವ್ಯಕ್ಕಿತ್ತು

ಜಿ. ಕೃಷ್ಣಮೂರ್ತಿ, ರಜನೀಶ್‌ರ ಪ್ರಭಾವಕ್ಕೊಳಗಾದ ಭಟ್ಟರು, 'ಆತ್ಮಗೀತೆ' (೧೯೭೦), 'ಮೂರ್ತಿ' (೧೯೭೪)ಗಳ ರಚನೆಯಲ್ಲಿ ಅವರ ತತ್ವ ವಿಚಾರಗಳನ್ನು ಹರಿಸಿ ದ್ದಾರೆ. "ಸಂಭೋಗದಿ ಸುಖದೊಂದೇ ಬಿಂದು, ಸಮಾಧಿಯೇ ಸುಖಸಿಂಧು" ಎಂಬ ಲ್ಲಿಗೆ ರಜನೀಶರ ಸಂಭೋಗ ಸಮಾಧಿಗಳ ಸಮನ್ವಯ ಕುರಿತು ಹೇಳಿದ್ದಾರೆ.

ಇದ್ದುದನ್ನು ಇದ್ದಂತೆಯೇ ನೋಡುವ ನುಡಿಯುವ ಆತ್ಮತೃಪ್ತಿಯೊಂದೇ ನಂಬುತ್ತ ಬರೆಯುತ್ತ ಬದುಕುತ್ತ ಬಂದ ಭಟ್ಟರಿಗೆ "ಬದುಕುವುದು ಬಾಳಿನ ಧರ್ಮವು, ಬದುಕುವುದೆಲ್ಲಾ ಶೈಲಿ, ಇರುವುದಿಲ್ಲವೊ ; ಅದಕಾಗಿಯೇ ನಾ, ಯಾರನು ಯಾತರ ಶೈಲಿ ?" ಎಂಬ ಸಂಯಮ ಪೂರ್ಣ ಚಿಂತನೆಯೊಂದಿಗೆ ಆವೇಶ ರಹಿತವಾಗಿ ಸಾಂಪ್ರ ಬದುಕಿನ ವಿವಿಧ ಮುಖಗಳನ್ನು ಸಹಜವಾಗಿ ಚಿತ್ರಿಸುತ್ತಿದ್ದರು. ಹಾಗೆಂದೇ ಜೀವನದ ಯಾವೊಂದೂ ಅಂಶವೂ ಅವರ ಕಣ್ಣಿನಿಂದ ತಪ್ಪಿಸಿಕೊಳ್ಳಲಾಗಿಲ್ಲ. ಕನ್ನಡಕ್ಕೆ ನೂತನ ವಾದ ವಿಡಂಬನಾತ್ಮಕವಾದ ಹಾಸ್ಯಮಯ ಕಾವ್ಯ ಸಂಪತ್ತನ್ನು ಕೊಟ್ಟ ಶ್ರೇಯಸ್ಸು ವಿ. ಜಿ. ಭಟ್ಟರಿಗೆ ಸಲ್ಲುತ್ತದೆ.

ಪ್ರಯೋಗ ರಂಗದ ನಾಗರಾಜಮೂರ್ತಿ

ರಾಜಕೀಯ ಸಂಬಂಧ ಹೊಂದಿಯೂ ಸಾಂಸ್ಕೃತಿಕವಾಗಿ ಕ್ರಿಯಾಶೀಲವಾಗಿರಬಹುದೆಂದು ಕೆ. ವಿ. ನಾಗರಾಜಮೂರ್ತಿ ಈಗಾಗಲೇ ತೋರಿಸಿದ್ದಾನೆ. 'ಪ್ರಯೋಗ ರಂಗ'ದ ಮೂಲಕ ಹಲವು ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿ, ಯುವ ಉತ್ಸಾಹಿ ತಂಡವನ್ನು ಬೆಳೆಸುತ್ತ, ಹುರುಪಿನಿಂದ ಹೊಸತನ್ನು ಮಾಡುವ ನಾಗರಾಜಮೂರ್ತಿಗೆ ರಾಜಕಾರಣಿಗಳ ಸಂಬಂಧ ಇರುವ ಕಾರಣಕ್ಕೆ ಕೆಲವರು ಮೂಗು ಮುರಿದು ಮಾತಾಡುವುದುಂಟು. ದುಂಬಿನಂತೆ ಕಾಣುವ ಈ ಹುಡುಗನ ಕ್ರಿಯಾಶೀಲತೆ ಮೆಚ್ಚುವ ಜೊತೆಗೆ ಪ್ರೋತ್ಸಾಹ ಕೊಡಲು ಸಾಹಿತ್ಯ-ಸಾಂಸ್ಕೃತಿಕ ವಲಯದ ಜನಕ್ಕೆ ಒಪ್ಪದ ಮನಸ್ಥಿತಿ ಇರಲು ಬೇರೆ ಕಾರಣಗಳೇ ಇರಬಹುದು.

ಅದೇನೇ ಇದ್ದರೂ ಪ್ರಯೋಗ ರಂಗದ ಈಚಿನ ಯಶಸ್ವಿ ಪ್ರಯೋಗ ಶಿವಪ್ರಕಾಶ್‌ರ 'ಮಂಟೇಸ್ವಾಮಿ ಕಥಾ ಪ್ರಸಂಗ'. (ನಿರ್ದೇಶನ : ಸುರೇಶ್ ಅನಗಳ್ಳಿ) ಇದು ಈ ಬರಹ ಬರೆವ ಹೊತ್ತಿಗೆ 52 ಪ್ರದರ್ಶನಗಳನ್ನು ಕಂಡಿದೆ ಮುಂದಿನ ಪ್ರಯೋಗಗಳು ರಾಜ್ಯದ ಪ್ರಮುಖ ನಗರ-ಪಟ್ಟಣಗಳಲ್ಲಿ ಪ್ರದರ್ಶಗೊಳ್ಳುವ ಸುದ್ದಿಯಿದೆ.

ಭಾರತ್ ಯಾತ್ರಾ ಕೇಂದ್ರದ ಮೂಲಕ ಬಿ. ಎಲ್. ಶಂಕರ್ ಜೊತೆಗೆ ಮಾಜಿ ಪ್ರಧಾನಿ ಚಂದ್ರಶೇಖರರ ಆಪ್ತನಾಗಿರುವ ನಾಗರಾಜಮೂರ್ತಿ ಈಚೆಗೆ ಶ್ರೀ ದೇವೇಗೌಡರನ್ನು ದೆಹಲಿಯಿಂದ ಕರೆಸಿ ಎಚ್. ಎಸ್. ಶಿವಪ್ರಕಾಶ್‌ರ ನಾಟಕೋತ್ಸವ (ಜುಲೈ 28 ರಿಂದ ಆಗಸ್ಟ್ 1) ವನ್ನು ಉದ್ಘಾಟಿಸಿದ್ದಾನೆ. ಲೋಕ ಸಭೆಯಲ್ಲಿ ಕರ್ನಾಟಕದ ಸಮಸ್ಯೆಗಳ ಬಗ್ಗೆ ಎತ್ತರದ, ಸಂಯಮದ ದನಿಯಲ್ಲಿ ಹೇಳುತ್ತಿರುವ ಒಬ್ಬನೇ "ಗಂಡಸು" ಆಗಿರುವ ದೇವೇಗೌಡರಿಗೆ ಸಾಂಸ್ಕೃತಿಕ ಕ್ಷೇತ್ರದ ಸಂಬಂಧ ಬರಲು ನಾಗರಾಜಮೂರ್ತಿ ಕಾರಣನಾದ್ದರೆ ನಾವೆಲ್ಲಾ ಸಂತೋಷಪಡಬೇಕಿದೆ.

ಆಚಾರ್ಯ ನರೇಂದ್ರದೇವ, ಬೀದಿ ನಾಟಕಗಳ ಕುರಿತ ಪುಸ್ತಕ, ಮಂಟೇಸ್ವಾಮಿ ಕಥಾ ಪ್ರಸಂಗ ಇತ್ಯಾದಿ ಪ್ರಕಟಣೆಗಳನ್ನು ಹೊರ ತಂದಿರುವ ನಾಗರಾಜಮೂರ್ತಿಗೆ ಜೀವನ ಸಂಗಾತಿ ತುಂಗಾ ರೇಣುಕಾ ಸಹಾಯಕರೂ ಆಗಿ, ಅವನ ಕೆಲಸದಲ್ಲಿ ಸಹ ಭಾಗಿತ್ವ ವಹಿಸಿರುವುದು ಇನ್ನೂ ಸಂತೋಷ.

ಸಿದ್ಧಾರ್ಥನೆಂಬ ಶೂದ್ರ

ಎಡಬಿಡಂಗಿ ವಿಚಾರಗಳಿಗೆ ಶೂದ್ರ ಶ್ರೀನಿವಾಸನೆಂಬ ವ್ಯಕ್ತಿ ಹೇಗೆ ಪ್ರಸಿದ್ಧನೋ, 'ಸಿದ್ಧಾರ್ಥ'ನೆಂಬ ಹೆಸರಿನ ಇದೇ ವ್ಯಕ್ತಿಯೂ ಅಷ್ಟೇ ಎಡವಟ್ಟು ವಿಚಾರಗಳನ್ನು ಕೊಡಲೂ ಪ್ರಸಿದ್ಧ ! ಹಲವು ವರ್ಷಗಳಿಂದಲೂ ಸಿದ್ಧಾರ್ಥನೇ ಆಗಿರುವ ಈತ

ಬುದ್ಧನಾಗುವ ಕಾಲವಂತೂ ಬರುತ್ತಿಲ್ಲ. ಬುದ್ಧನಾದ ತಕ್ಷಣ ಜ್ಞಾನಿ ಆಗುವ ಕಾರಣಕ್ಕೇ ಬೆದರಿ ಈತ ಇನ್ನೂ ಸಿದ್ಧಾರ್ಥನೇ ಆಗಿ ಉಳಿದಿದ್ದಾನೆ.

ತನ್ನ ಶೂದ್ರದಲ್ಲಿ ವಿಮರ್ಶೆಗೆ ಮುನ್ನ ಎಂದು ಒಂದೇ ವಾಕ್ಯದಲ್ಲಿ ಇಡೀ ಕೃತಿಯನ್ನು 'ಡಿಸೆಕ್ಟ್' ಮಾಡುವ ಜಾದುಗಾರ ಈಚೆಗೆ 'ಲಂ. ಪ.'ದಲ್ಲೂ ಪುಸ್ತಕ ವಿಮರ್ಶೆಗಳನ್ನು ತಗ್ಗಿಲ್ಲದೆ ಬರೆಯುತ್ತಿರುವುದು ವಿಮರ್ಶೆಯ ಹೆಸರಲ್ಲಿ ಮಾಡುತ್ತಿರುವ ಅವಮಾನವಾಗಿದೆ. ಭಗವಾನ್‌ರ 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ' ಏಳು ಮುದ್ರಣ ಕಂಡ ಕೃತಿ. ಇದರ ಒಳ ವಿಚಾರಗಳು ಚರ್ಚಾರ್ಹವಾಗಿದ್ದರೂ ಈತ ಇದರಲ್ಲಿನ ವಿಚಾರಗಳನ್ನು ಓದದೆ ತನ್ನ ಶೂದ್ರದಲ್ಲಿ ಈಚೆಗೆ ಎಡಬಿಡಂಗಿ ಎಂದಿರುವುದು ಸಿದ್ಧಾರ್ಥನೆಂಬ ಎಳೆಯನ ಜ್ಞಾನವನ್ನೇ ಪ್ರದರ್ಶಿಸುತ್ತದೆ. ಈತ ಭಗವಾನ್ ಅವರನ್ನು ಪ್ರೋಲಂಕಿ ಅವರ ಜೊತೆ ಸಮೀಕರಿಸಿರುವುದೂ ಹಾಸ್ಯಾಸ್ಪದ. ಏಕೆಂದರೆ ಪ್ರೋಲಂಕಿ ಸ್ಕೂಲ್ ಆಫ್ ಥಾಟ್ಸ್‌ಗಳೆಲ್ಲಾ ಭಗವಾನ್‌ರಿಗೆ ವಿರುದ್ಧವಾಗಿವೆ. ಶೂದ್ರನಿಗೆ ನೆನಪಿದ್ದರೆ 'ಸಂಕ್ರಮಣ'ದಲ್ಲಿನ ಸೀತಾಯಣದ ಚರ್ಚೆಯನ್ನು ನೆನಪಿಸಿಕೊಳ್ಳಲಿ ನೆನಪಿಲ್ಲದಿದ್ದರೆ 'ಶಂಕರಾಚಾರ್ಯ....' ಕೃತಿಯಲ್ಲಿನ ಎಡಬಿಡಂಗಿ ವಿಚಾರಗಳೇನೆಂಬುದನ್ನು ಶೂದ್ರದಲ್ಲಿ ಬರೆದು, ಚರ್ಚೆಗೆ ವೇದಿಕೆಯಾಗಲಿ ; ಸಿದ್ಧಾರ್ಥನೆಂಬ ಶೂದ್ರನಿಗೆ ಇದು ಸಾಧ್ಯವೆ ?

ಅರಿವು ಬರಹ-1 : ಎಡ ಪಂಥೀಯ ಪತ್ರಿಕೆ

ಮಂಗಳೂರು ವಿಶ್ವವಿದ್ಯಾಲಯದಲ್ಲಿ ಹಲವಾರು ವಿಭಾಗಗಳಲ್ಲಿ ಹಂಚಿಹೋಗಿರುವ "ಎಡಪಂಥೀಯ" ಮಿತ್ರರು ಸೇರಿ ತರುತ್ತಿರುವ **"ಅರಿವು ಬರಹ-1"** ಪ್ರಕಟವಾಗಿದೆ. 4 ತಿಂಗಳಿಗೊಮ್ಮೆ ಬರುವ ಈ ಪತ್ರಿಕೆ "ಎಡಪಂಥೀಯ ಒಲವಿನ ಲೇಖನಗಳ ಸಂಗ್ರಹ"ಕ್ಕೆ ಒತ್ತುಕೊಡುವುದನ್ನು **ಒತ್ತಿ ಒತ್ತಿ** ಹೇಳಿದೆ. ಇಷ್ಟು ಒತ್ತಿಬಿದ್ದ ಮಾತುಗಳು ಸಂಶಯಕ್ಕೆ ಎಡಮಾಡಿಕೊಡುತ್ತವೆ, ..."ಲೋಹಿಯಾರ 'ಸಮಾಜವಾದ' ಎಷ್ಟು ಅಪಕಲ್ಪನೆಯಿಂದ ಬಂದದ್ದು ಎನ್ನುವುದನ್ನು ಸಾಬೀತುಪಡಿಸುವ ಜರೂರಿಯಿದೆ. ಮಾರ್ಕ್ಸ್‌ವಾದವನ್ನು 'ಯುರೋಪ್ಯ ಕೇಂದ್ರಿತ' ಎನ್ನುವ ಲೋಹಿಯಾರ ನಿಲುವುಗಳು ಎಲ್ಲಿಂದ ಬರುತ್ತವೆ"? ಎಂಬ ಸಂಪಾದಕೀಯ ಅರ್ಥಾತ್ ಪ್ರಸ್ತಾವನೆ (ಪುಟ iv) ಮಾತುಗಳು ಲೋಹಿಯಾ ಚಿಂತಕರನ್ನು ಕೊಂಚ ಕೆರಳಿಸುವಂತಿವೆ. ಬಿಟ್ಟರೆ ಅಭಿಪ್ರಾಯದಲ್ಲೂ ಲೋಹಿಯಾ ಚಿಂತನೆಗಳನ್ನು 'ಡಿಸೆಕ್ಟ್' ಮಾಡಲೆಂದೇ ಅರಿವು ಬರಹದ ಮಿತ್ರರು ಹೊರಟಿದ್ದರೆ ಅದು ತಪ್ಪಾಗುತ್ತದೆ.

ಗುಮಾನಿಯ ನಡುವೆಯೂ ಪ್ರಥಮ ಸಂಚಿಕೆ ಕುತೂಹಲಕರವಾಗಿದೆ. ಕರಪತ್ರದಲ್ಲಿ ಈ ಮುನ್ನ ಹೇಳಲುಹೋದ ಮಾತುಗಳು ಗೊಂದಲವಾಗಿದ್ದವು. ಅಸ್ಪಷ್ಟ ಹೇಳಿಕೆಗಳ ಬೌದ್ಧಿಕ ವಿಚಾರಗಳು ಅವರಲ್ಲಿದ್ದುದನ್ನು ಹಲವು ಮಿತ್ರರೇ ಚರ್ಚೆಮಾಡಿ

ತೋರಿಸಿದ್ದರು. ಪ್ರಸ್ತಾವನೆಯ ಮಾತುಗಳಲ್ಲಿ ಅಂಥ ಗೊಂದಲಗಳಿಲ್ಲದಿದ್ದರೂ ಹೇಳಿಕೆಗಳು ಮುಂಬರುವ ದಿನಗಳಲ್ಲಿ ಕಾರ್ಯಗತ ಆಗುವುದನ್ನು ನಿರೀಕ್ಷಿಸಬಹುದಾಗಿದೆ ಕಾದು ನೋಡೋಣ....

ಡಾ|| ಆರ್. ಶಶಿಧರ್ ಅವರ 'ಸಾಹಿತ್ಯ ವಿಮರ್ಶೆ'—ಹಲವು ಅಪಕಲ್ಪನೆಗಳ ಒಂದು ಕಥೆ ಮುಂದುವರೆಯುವುದರಿಂದ ಚರ್ಚೆ ಆಗಬೇಕಾದ್ದು ಸಾಕಷ್ಟಿದೆ ಎಂಬುದನ್ನು ಕಾಯುವಂತೆ ಮಾಡಿದೆ. ಜೊತೆಗೆ ಡಾ|| ರಾಜಾರಾಮ ಹೆಗ್ಡೆ, ಯಶವಂತ ಡೊಂಗ್ರೆ, ರಾಜಾ ಎಮತೋಳ್ಪಾಡಿ ಹಾಗೂ ಜಿ. ರಾಜಶೇಖರರ ಅನುವಾದಿತ ಬರಹಗಳೂ ಇಲ್ಲಿವೆ.

ವಾರ್ಷಿಕ ಚಂದಾ ರೂ. 75/-

ವಿವರಗಳಿಗೆ : **ಡಾ|| ಆರ್. ಶಶಿಧರ್**
ಅರಿವು ಬರಹ ಟ್ರಸ್ಟ್ (ರಿ.), ಇಂಗ್ಲಿಷ್ ವಿಭಾಗ
ಮಂಗಳ ಗಂಗೋತ್ರಿ-574199 (ದ.ಕ)

ಗ್ರಂಥಲೋಕ ಮತ್ತು ಅನಂತರಾಮಯ್ಯ

ನಷ್ಟಕೋದ್ಯಮಕ್ಕೆ ಸಂಬಂಧಿಸಿದ 'ಗ್ರಂಥಲೋಕ' ನಿಲ್ಲುತ್ತದೆ....ನಿಲ್ಲಿಸುತ್ತೇವೆ. ಕನ್ನಡಿಗರು ನಿರಭಿಮಾನಿಗಳು ಇತ್ಯಾದಿ ಮಾತುಗಳು ಆಗಾಗ ಕೇಳಿಬರುತ್ತವೆ. ಮೈಸೂರಿನಿಂದ ಪ್ರಕಟವಾಗುವ ಈ ಪತ್ರಿಕೆಯನ್ನು ಆರ್. ಎಲ್. ಅನಂತರಾಮಯ್ಯ ಎಂಬುವರು ಹೊರ ತರುತ್ತಿದ್ದು ; ಇತ್ತೀಚಿನ ವರ್ಷಗಳಲ್ಲಂತೂ ಬಹುತೇಕ ಜನಪ್ರಿಯ ಮಾಧ್ಯಮಗಳಲ್ಲಿ ಅನಂತರಾಮಯ್ಯ ಅವರ ಆಲಾಪನೆ ಅತಿ ಆಗಿಹೋಗಿದೆ. ಡಾ|| ಹಾ. ಮಾ. ನಾಯಕರಂಥ ಹಿರಿಯರು ಇದನ್ನು ಉಳಿಸಿಕೊಳ್ಳಬೇಕೆಂದು ಲೇಖನಗಳನ್ನೂ ಬರೆದಿದ್ದಾರೆ. ತರಂಗದ ಗುಲ್ವಾಡಿ ಅವರು, [illegible] '[illegible]' ಅವರು "ಅತಿ" ಎನ್ನುವಷ್ಟು ಪ್ರಚಾರ ನೀಡಿದ್ದಾರೆ. ಪ್ರಕ್ಕಟ್ಟ ಪ್ರಚಾರ ಸಿಕ್ಕ, simpathy ಪಡೆದರೂ ಇದರ ಉಸಿರೇ ಕಷ್ಟ ಪಡುವುದು ವೇದ್ಯವಾಗಿದೆ. ಒಂದು ರೀತಿಯ stuntನ್ನು ಅನಂತರಾಮಯ್ಯ ಮಾಡುತ್ತಲೇ ಕನ್ನಡ ಶಕ್ತಿ ಕೇಂದ್ರದ ಡಾ|| ಎಂ ಚಿದಾನಂದಮೂರ್ತಿಗಳಂಥ ಭಾವುಕರನ್ನು ಸೆಳೆದುಕೊಂಡು ಕಳೆದ ವರ್ಷ ಸರಕಾರದಿಂದ (ಕನ್ನಡ ಸಂಸ್ಕೃತಿ ನಿರ್ದೇಶನಾಲಯ) 10,000 (ಹತ್ತು ಸಾವಿರ)ರೂ.ಗಳ ಧನ ಸಹಾಯ ಪಡೆದೂ, ಜಾಹೀರಾತು ಹಾಕಿ 1990ರಲ್ಲಿ 1480 ಚಂದಾದಾರನ್ನು (ಆಗಸ್ಟ್ 'ತುಷಾರ' ಪ್ರಕಾರ) ಹೊಂದಿಯೂ ಮತ್ತೆ ಪತ್ರಿಕೆ ನಿಲ್ಲುತ್ತದೆಂಬ (ಈ ವರ್ಷ 460ರ ಪತ್ರಿಕೆಯಂತೆ!) 'ಹುಡುಗಾಟಿಕೆಯ ಆಟ' ಶುರುವಾಗಿದೆ.

ಅನಂತರಾಮಯ್ಯ ಅವರ ಸ್ಪಷ್ಟನೆ: ಐನೇ ಇನ್ನೊಂದು ಇಲ್ಲಿನ ಬಗ್ಗೆ ಪಂಪ ಪ್ರಶ್ನೆ : ಪ್ರತೀ ವರ್ಷವೂ ಸ್ವಂತ ಓದುಗನನ್ನು ಹೊರಡಿಸು ಪ್ರಯೋಜನ ಏನು? ಘಟಾವುನೇ ಪತ್ರಿಕೆಗಳಲ್ಲಿನ ವಿಷಯ ಪ್ರಿಯವಾದವರಿ ಕತೆ ಅವನ್ನು ಸಂಗ್ರಹಿತಾ ಸ್ವೀಕರಿಸುತ್ತಾನೆ. ಸಾಹಿತ್ಯಕ ಮೌಲ್ಯಗಳಿಲ್ಲದ ಪತ್ರಿಕೆ ಕಟ್ಟಿಕೊಂಡು ಮಾಡುವುದಾದರೂ ಏನು? ತೀರ ತಿರುಕಾಟದಲ್ಲಿ ಪತ್ರಿಕೆ ಬರುವುದೇ ಬೇಡ, ಅತಿ ಕಷ್ಟವಾದರೆ 'ಗ್ರಂಥಲೋಕ' ನಿಲ್ಲಲಿ ಬಿಡಿ, ಇದರಿಂದ ಕನ್ನಡಿಗರಿಗೇನು ನಷ್ಟವಾಗದು. ಗ್ರಂಥಲೋಕದ ಪುಸ್ತಕ ಪ್ರಕಟಣಾಪಟ್ಟಿ ಪ್ರತೀ ಭಾನುವಾರದ ಸಾಪ್ತಾಹಿಕ ಪುರವಣಿಗಳಲ್ಲಿ, ಸಾಹಿತ್ಯಕ ಪತ್ರಿಕೆಗಳಲ್ಲಿ ಪ್ರಕಟವಾಗುವುದರಿಂದ, ಇದೇನು ಅಂಥ ಮಹಾತ್ ಕಾರ್ಯ ಮಾಡುತ್ತಿಲ್ಲ ಎಂದೇ ನನ್ನ ಭಾವನೆ. ಒಂದು ಸಮೀಕ್ಷೆ ಪ್ರಕಾರ ಸಾಪ್ತಾಹಿಕ ಪುರವಣಿಗಳ ಪಟ್ಟಿಯೇ ಸಾಹಿತ್ಯಾಸಕ್ತರಿಗೆ ನಿಜವಾಗಿ ತಲುಪುವ ವ್ಯವಸ್ಥೆಯಾಗಿದೆ.

— **ಸಂಪಾದಕ**

ಬಂಡಾಯ ಸಂಘಟನೆ ತಿಂಗಳ ಕಾರ್ಯಕ್ರಮಗಳು

ರಾಜಧಾನಿಯ ಬಂಡಾಯ ಸಾಹಿತ್ಯ ಸಂಘಟನೆ ಈಗ ಹೆಚ್ಚು ಕ್ರಿಯಾಶೀಲವಾಗಿದೆ ಪ್ರತೀ ತಿಂಗಳು ಮೊದಲ ಶನಿವಾರ ರವೀಂದ್ರ ಕಲಾಕ್ಷೇತ್ರದ ವಿಶ್ರಾಂತಿ ಗೃಹದಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಒಂದೊಂದು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದೆ. ಜುಲೈ ೬ ರಂದು ಎಚ್. ಎಸ್. ಶಿವಪ್ರಕಾಶ್ ಉದ್ಘಾಟಿಸಿದ ತಿಂಗಳ ಕಾರ್ಯಕ್ರಮ ಕವಿಗೋಷ್ಠಿಯಿಂದ ಆರಂಭವಾಯಿತು. ಪ್ರಸಿದ್ಧ ಕವಿ ಕೆ. ಸ. ಶಿವತೀರ್ಥನ್ ಅಧ್ಯಕ್ಷತೆ ವಹಿಸಿದ್ದರು. ಸುಮಾರು ಇಪ್ಪತ್ತು ಯುವ ಕವಿಗಳು ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

ಆಗಸ್ಟ್ ೩ರಂದು ಡಾ|| ಬೆಸಗರಹಳ್ಳಿ ರಾಮಣ್ಣ ಅವರು 'ಕತೆಗಾರನ ಅನುಭವ' ಕುರಿತು ಸ್ವಾರಸ್ಯಕರವಾಗಿ ಮಾತನಾಡಿದರು. ಗ್ರಾಮೀಣ ಪ್ರದೇಶದ ವಸ್ತುಗಳನ್ನೇ ತಮ್ಮ ಕತೆಗಳಲ್ಲಿ ತಂದಿರುವ ರಾಮಣ್ಣ ಅವರ ಅನುಭವಗಳು ಸಭಿಕರ ಮನಸ್ಸನ್ನು ರಾಜಧಾನಿಯಿಂದ ಹಳ್ಳಿಗಳ ಕಡೆ ಕೊಂಡೊಯ್ದದ್ದು ನಿಜ. ನಂತರ ಚರ್ಚಾರೂಪದ ಸಂವಾದ ಸಹ ಏರ್ಪಟ್ಟಿತ್ತು. ಎಸ್. ಜಿ. ಚಂದ್ರಮೋಹನ್ ಅಧ್ಯಕ್ಷತೆ ವಹಿಸಿದ್ದರು.

ಸೆಪ್ಟಂಬರ್ ೭ ರಂದು (ಶನಿವಾರ) ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿರುವ "ಬಂಡಾಯ ಕಾವ್ಯ" (ಸಂ : ಬರಗೂರು ರಾಮಚಂದ್ರಪ್ಪ) ಕುರಿತು ಡಾ|| ಕೆ. ವಿ. ನಾರಾಯಣ ಅವರು; "ಬಂಡಾಯ ಕತೆಗಳು" (ಸಂ: ರಮಜಾನ್ ದರ್ಗಾ, ಚಂದ್ರಶೇಖರ ಆಲೂರು) ಕುರಿತು ಡಾ|| ರಹಮತ್ ತರೀಕೆರೆ ಅವರು ಮಾತನಾಡಿದ್ದಾರೆ.

ಸಾಹಿತ್ಯಾಸಕ್ತ ಮಿತ್ರರು ಪ್ರತೀ ತಿಂಗಳ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಬಂಡಾಯ ಸಾಹಿತ್ಯ ಸಂಘಟನೆ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಸಂಪಾದಕೀಯ ಬರಹ ಕುರಿತು......

ಆತ್ಮೀಯ ಬಂಧು ಆರ್. ಜಿ. ಹಳ್ಳಿ ನಾಗರಾಜ್,
'ಅನ್ವೇಷಣೆ' ಸಂ ೪೩ ಬಂದಿದೆ.
ಸೃಷ್ಟಿ (ಸಂಪಾದಕೀಯ) ಭರ್ಜರಿಯಾಗಿದೆ ; ಆರ್. ಜಿ. ಹಳ್ಳಿಯ ವಾಸ್ತವ ಪ್ರಜ್ಞೆಗೆ, ವಸ್ತುನಿಷ್ಠ ವಿವೇಚನೆಗೆ, ಧೈರ್ಯಕ್ಕೆ, ನಿರ್ಭಿಡೆಗೆ ಇನ್ನೂ ಕೆಲವು ಗುಣಗಳಿಗೆ ಈ ಲೇಖನ ರನ್ನಗನ್ನಡಿ. ಇಂಥ ಬರವಣಿಗೆ ಮಾಡಿರುವ ನಿಮ್ಮ ಬೆನ್ನಿಗೆ ನನ್ನ ಪ್ರೀತಿಯ ಗುದ್ದು! ಬಹು ಜನ ಲೇಖಕರ ಸಂವೇದನೆಗಳನ್ನು ನೀವು ಹರಳುಗೊಳಿಸಿ ಹೇಳಿದ್ದೀರಿ ಎಂದೆನಿಸುತ್ತದೆ – ಸಂತೋಷ.

(ದೇವನೂರ ಬರೆದಿರುವ ಎ ಲವ್ ಲೆಟರ್ ಟು ಟೂ ಡಾರ್ಲಿಂಗ್ಸ್ ನೆನಪಾಯಿತು–ನಿಮ್ಮ ಸಂಪಾದಕೀಯ ಓದುವಾಗ ; ಸಂಕ್ರಮಣದಲ್ಲಿ ಚಂಪಾ ಕಾಲಂ ಕೂಡ ಓದಿದ್ದೇನೆ.)

ಶುಭಾಶಯಗಳು

ಬೆಂಗಳೂರು-೫೬೦ ೦೧೦. —**ಡಾ. ಹಂಪ. ನಾಗರಾಜಯ್ಯ**

o ಈ ಸಲದ 'ಅನ್ವೇಷಣೆ' (ಸಂ. ೪೩) ಬಂದಿತು. ತುಂಬಾ ದಿಟ್ಟವಾಗಿ ರಾಜಧಾನಿಯ ಸಾಹಿತ್ಯ ರಾಜಕಾರಣಿಗಳನ್ನು ತರಾಟೆಗೆ ತೆಗೆದುಕೊಂಡಿದ್ದೀರಿ......

ಶಿವಮೊಗ್ಗ-೫೭೭೨೦೧. —**ಡಾ. ರಹಮತ್ ತರೀಕೆರೆ**

o 'ಅನ್ವೇಷಣೆ'ಯ-ನಿಮ್ಮ ಸಂಪಾದಕೀಯ ಚೆನ್ನಾಗಿದೆ. ಪ್ರತಿ ಸಂಚಿಕೆಯಲ್ಲೂ ಬರೆಯಿರಿ.

ಧಾರವಾಡ-೫೮೦ ೦೦೮. —**ಚಂದ್ರಶೇಖರ ಪಾಟೀಲ**

o ನಿಮ್ಮ 'ಸೃಷ್ಟಿ' (ಸಂಪಾದಕೀಯ) ಎಲ್ಲರಿಗೆ ಮೆಚ್ಚಿಗೆಯಾಗಿದೆ. ಆದರೂ ರಾಜಧಾನಿಯ ಆ 'ಲಂ' ಮತ್ತು ಪಟಾಲಂಗಳ ಉಸಾಬರಿಬೇಡ ಅನ್ನಿಸುತ್ತದೆ. ಗೂಂಡಾಗಳನ್ನು ಬಿಟ್ಟಾರು .. ಏನಿದ್ದರೂ ನಿಮಗೆ ಬಿಟ್ಟ ವಿಚಾರ.

ಸಿರಸಿ-೫೮೧೪೦೧. —**ನಜೀರ್ ಚಂದಾವರ**

ಪ್ರಿಯ ನಾಗರಾಜ್,

o ಅನ್ವೇಷಣೆ ಸಂಚಿಕೆ ೪೩ರಲ್ಲಿ ನಿಮ್ಮ ಸಂಪಾದಕೀಯ ಟಿಪ್ಪಣಿ ಓದಿದೆ. ನಿಮ ಸಾತ್ವಿಕ ಕೋಪದ ಹಿಂದಿನ ಕಳಕಳಿಯನ್ನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ 'ಅನ್ವೇಷಣೆ'ಯ ಬಗ್ಗೆ, ನಿಮ್ಮ ಬಗ್ಗೆ ಪ್ರೀತಿಯಿರುವ ನನಗೆ, ಟಿಪ್ಪಣಿಯ ಭಾಷೆ ಕೊಂಚ ಮೃದುವಾಗಬಹುದಿತ್ತಲ್ಲ ಎಂದು ಅನಿಸಿದೆ. ಒಬ್ಬ ವ್ಯಕ್ತಿ, ಒಂದು ಪತ್ರಿಕೆ

ಹೆಚ್ಚು ಹೆಚ್ಚಾಗಿ ಜನಪ್ರಿಯವಾದಂತೆ ಆತನ,ಪತ್ರಿಕೆಯ ನೈತಿಕ ಜವಾಬ್ದಾರಿ ಕೂಡ ಮೇಲ್ಮಟ್ಟದ್ದಾಗಿರಬೇಕೆಂದು ನಿರೀಕ್ಷಿಸುವುದು ಸಹಜ. ಆದರೆ ನೈತಿಕತೆ ಸಾಪೇಕ್ಷವಾದುದಲ್ಲವೆ ? ಜತೆಗೆ ಮನುಷ್ಯನ ಇತಿ, ಮಿತಿಗಳು, ಕೊಂಕು ಡೊಂಕುಗಳೂ ಜೀವನದ ಒಂದು ಭಾಗತಾನೆ ?

ಚನ್ನಪಟ್ಟಣ-೫೭೧೫೦೧ —ಮು. ಅ. ಶ್ರೀರಂಗ

('ಲಂಕೇಶ್ ಮತ್ತು ಬಂದಳಿಕೆಗಳು' ಎಂಬ ನನ್ನ ಸಂಪಾದಕೀಯ ಕುರಿತು ಬಂದ ಪ್ರತಿಕ್ರಿಯೆಗಳಲ್ಲಿ ಕೆಲವನ್ನಷ್ಟೇ ಪ್ರಕಟಿಸಿದ್ದೇನೆ-ಮೆಚ್ಚಿದ, ಮೆಚ್ಚದ ಎಲ್ಲರಿಗೂ ಈ ಮೂಲಕ ಕೃತಜ್ಞತೆಗಳು—ಸಂಪಾದಕ.)

o ಅನ್ವೇಷಣೆಗೆ ಈಚೆಗೆ 'ಪ್ರಬುದ್ಧತೆ'ಯ 'Qura' ಆವರಿಸುತ್ತಿದೆ........

ಬೆಂಗಳೂರು-೫೬೦೦೭೯ — ಬಿ. ಚಿನ್ನಸ್ವಾಮಿ

ಮನ ಕಲಕುವ ಕಾವ್ಯ

ಮಾನ್ಯರೆ,

'ಅನ್ವೇಷಣೆ'ಯಲ್ಲಿ ಪ್ರಕಟವಾಗುವ ಕವಿತೆಗಳ ಗುಣಮಟ್ಟ ಉತ್ತಮ. ನಿಮ್ಮ ಆಯ್ಕೆ ಯೋಗ್ಯ. ಕೆಲವು ಭಾವಪೂರ್ಣವಾಗಿದ್ದರೆ ಮತ್ತೆ ಕೆಲವು ಕ್ರಾಂತಿಕಾರಕ ವಿಚಾರ ಒಳಗೊಂಡಿರುತ್ತವೆ. ಅದರಲ್ಲೂ ಬಂಡಾಯ ಧ್ವನಿಗಳು ನಮ್ಮನ್ನು ತಟ್ಟುತ್ತವೆ. ಹಳೆಯ ಸಂಚಿಕೆ (40)ಯಲ್ಲಿನ ಪ್ರಹ್ಲಾದ್ ಅಗಸನಕಟ್ಟೆ ಅವರ ಕವನ **'ಕಲ್ಲು ಗಂಭಗಳಲಿ ಗುಲಾಬಿ ಮುರಳುವುದು'** ತುಂಬಾ ಪ್ರಭಾವ ಬೀರಿತು. ಎರಡನೇ ಮಹಾಯುದ್ಧದಲ್ಲಿ ಹಿಟ್ಲರ್‌ನ ವಿರುದ್ಧ ಹೋರಾಡಿದ ಜೆಕೊಸ್ಲಾವಾಕಿಯಾದ ಜ್ಯೂಲಿಯಸ್ ಪ್ಯೂಚಿಕ್‌ನ ಹೋರಾಟದ ನೆಲೆಗೆ ಕೊಂಡೊಯ್ದಿತು. ಹಿಟ್ಲರ್‌ನ ಸರ್ವಾಧಿಕಾರದ ಚಿತ್ರಹಿಂಸೆಯ ನಿತ್ಯನೇಣುಗಂಭಗಳು ನನ್ನ ಮುಂದೆ ಇದಿಯೋ ಏನೋ ಅನ್ನಿಸಿತು.

ನಿನಗಾಗಿ
ಸಾವಿರ ಸೆರೆಮನೆಗಳಲಿ ಸಾವಿರ ಬಾರಿ ಇರುವೆ
ಸಾವು ಬರುವವರೆಗೆ

ಈ ಸಾಲುಗಳಲ್ಲಿ ಪ್ಯೂಚಿಕ್‌ನ ಹೋರಾಟದ ಕೆಚ್ಚು ತೋರಿ ಬರುತ್ತದೆ. ಹಾಗೂ ಕವಿತೆ ಓದಿದವರೆಗೆ ಹೊಸ ಹುರುಪನ್ನು ನೀಡುತ್ತದೆ.

ಕೆನರಾಬ್ಯಾಂಕ್ —ರಘುನಾಥ ನಾಯಕ್
ಬಸವನಗುಡಿ, ಬೆಂಗಳೂರು–೫೬೦೦೦೪.

ಪ್ರಿಯರೆ,

''ಅನ್ವೇಷಣೆ''ಯ ಚಂದಾ ಬಾಕಿ ಕಳುಹಿಸಿ ಎಂದು ವೈಯಕ್ತಿಕವಾಗಿ ಎಲ್ಲಾ ಚಂದಾದಾರರಿಗೂ ಬರೆಯಲು ಸಾಧ್ಯವಾಗಿಲ್ಲ. ನೂರಾರು ಮಿತ್ರರಿಗೆ ಪತ್ರಿಕೆ ತಲುಪುತ್ತಿದ್ದರೂ 'ಮೌನವಾಗಿರುತ್ತಾರೆ . ಈಗ ಅಂಥವರು ಪತ್ರಿಕೆ ಬೇಕು/ಬೇಡಗಳ ಬಗ್ಗೆ ದಯುವಿಟ್ಟು ತಿಳಿಸಿ. ಪತ್ರಿಕೆ ಬೇಕಿದ್ದವರು 'ಬಾಕಿ' ಕಳುಹಿಸುವುದರ ಮೂಲಕ ಪತ್ರಿಕೆ ಉಳಿಸಿ ಬೆಳೆಸಲು ಸಹಕರಿಸಿ ಎಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತಿರುವೆ.

ಜೊತೆಗೆ ಕಾಲೇಜು ಅಧ್ಯಾಪಕ ಮಿತ್ರರಲ್ಲೊಂದು ಮನವಿ : ನಿಮ್ಮ ಕಾಲೇಜು ಗ್ರಂಥಾಲಯಕ್ಕೆ 'ಅನ್ವೇಷಣೆ' ತರಿಸಿಕೊಳ್ಳುವ ವ್ಯವಸ್ಥೆ ಮಾಡಿ–ಬರೆಯಿರಿ.

ಬಹಳಷ್ಟು ಮಿತ್ರರು 1991ರ ಚಂದಾ ನವೀಕರಣ ಮಾಡಿಲ್ಲ—ದಯವಿಟ್ಟು ಚಂದಾ ಕಳುಹಿಸಿಕೊಡಿ. ಮುದ್ರಣಾಲಯದ ಸ್ಥಳ ಬದಲಾವಣೆಯಿಂದ ಮೇ-ಜೂನ್ ಸಂಚಿಕೆ ಆಗಸ್ಟ್‌ನಲ್ಲಿ ಪ್ರಕಟವಾಗುತ್ತಿದೆ–ಈ ಸಾರಿ ಒಟ್ಟು 64 ಪುಟ ಕೊಡಲಾಗಿದೆ.

–ಸಂಪಾದಕ

ಈ ಸಂಚಿಕೆಯ ಲೇಖಕರು/ವಿಳಾಸ

o ಡಾ|| ವಿಜಯಶ್ರೀ ಸಬರದ, 'ಪಲ್ಲವಿ' 9-1-245, ಕೆ.ಇ ಬಿ.ರಸ್ತೆ, ಬೀದರ್–1
o ಡಾ|| ರಹಮತ್ ತರೀಕೆರೆ, 3ನೇ ಕ್ರಾಸ್, ಜೇಲುರಸ್ತೆ, ಶಿವಮೊಗ್ಗ–577202
o ಡಾ|| ಸಿ. ಎನ್. ರಾಮಚಂದ್ರನ್, ಇಂಗ್ಲಿಷ್ ವಿಭಾಗ, ಮಂಗಳಗಂಗೋತ್ರಿ-(ದ.ಕ)
o ಸರಜೂ ಕಾಟ್ಕರ್, 'ಕಾವ್ಯ' ಎಂ.ಐ.ಜಿ. 215, ಮಹಾಂತೇಶನಗರ, ಬೆಳಗಾಂ-16
o ನೈಷಧಂ, ಶಿವಲಿಂಗಯ್ಯ ಕಾಲೋನಿ, H A L, ಬೆಂಗಳೂರು - 560032.
o ಚಂದ್ರಮಾಗಡಿ, ಹೊಂಬಾಳಮ್ಮನಪೇಟೆ, ಮಾಗಡಿ-562120.
o ಪ್ರೊ|| ಧರಣೇಂದ್ರ ಕುರಕುರಿ, ಎಂ. ಎಂ. ಕಲಾ ಮತ್ತು ವಿಜ್ಞಾನ ಕಾಲೇಜು, ಸಿರಸಿ-581402. o ಬಿ. ಚಿನ್ನಸ್ವಾಮಿ, ಎಂ. ಎಫ್. 14/7, ಬಿ. ಟಿ. ಎಂ. (SFHS) ಲೇ ಔಟ್, ಬೆಂಗಳೂರು-560076. o ಬರಗೂರು ರಾಮಚಂದ್ರಪ್ಪ, ರೀಡರ್, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು–560056.
o ಪ್ರತಿಭಾ ನಂದಕುಮಾರ್, 68ಎ, 8ನೇ 'ಸಿ' ಮೇಯಿನ್, 4ನೇ ಬ್ಲಾಕ್ ಪಶ್ಚಿಮ, ಜಯನಗರ, ಬೆಂಗಳೂರು–560 011. o ಡಿ. ಬಿ.ಮಲ್ಲಿಕಾರ್ಜುನ ಸ್ವಾಮಿ. 1245, ಬನಶಂಕರಿ 1ನೇ ಹಂತ, ಬೆಂಗಳೂರು – 560 050.
o ಈ. ಚಂದ್ರತಾಳೀಕಟ್ಟೆ, ತಾಳೀಕಟ್ಟೆ – 577 539, ಹೊಳಲ್ಕೆರೆ – ತಾ||.
o ಡಾ|| ಸೈಯದ್ ಜಮೀರುಲ್ಲಾ ಷರೀಫ್, ಕನ್ನಡ ಉಪನ್ಯಾಸಕ, ಅಂಜುಮನ್ ಕಾಲೇಜು, ಭಟ್ಕಳ-581320. o ಆರ್. ಡಿ. ಹೆಗಡೆ, 'ಕೃಷ್ಣಮನೆ', ಸಿ. ಎಂ. ರಸ್ತೆ, ಕೆ. ಆರ್. ನಗರ-571602. o ಚಂದ್ರು ನೊಗೀರ, ಪಿ.ಸಿ/ಟಿಆರ್‌ಸಿಡಬ್ಲ್ಯೂಶಿ ಭಾರತ್ ಎಲೆಕ್ಟ್ರಾನಿಕ್ಸ್, ಜಾಲಹಳ್ಳಿ, ಬೆಂಗಳೂರು–560013.

ANVESHANE MAG (5) PRB-DECL 127/85-86

ಅನ್ವೇಷಣೆ ಪ್ರಕಾಶನ, ಬೆಂಗಳೂರು-೫೬೦ ೦೪೦

೧. ಬಂಡಾಯ ಹತ್ತು ವರ್ಷ : ಸಂ : ಆರ್. ಜಿ. ಹಳ್ಳಿ ನಾಗರಾಜ್–ರೂ. 12
೨. ಅಯೋಧ್ಯೆ : ಬಾಬರ್ ಶ್ರೀರಾಮ (ವೈಚಾರಿಕ) ,, ರೂ. 4
೩. ಬೇರು ಒಣಗಿದ ಪ್ರೀತಿ (ಕಾವ್ಯ) : ಬಿ. ಎನ್. ಮಲ್ಲೇಶ್ ರೂ. 12
೪. ಮೊದಲು ಗೊತ್ತಿರಲಿಲ್ಲ* (ಕಾವ್ಯ) : ಕೆ. ಎಂ. ಮುನಿಕೃಷ್ಣಪ್ಪ ರೂ. 9

ಮುಂದಿನ ಪ್ರಕಟಣೆ : **ಬಂಡಾಯ ವಿಮರ್ಶೆ**

*ಪ್ರತಿಗಳು ಮುಗಿದಿವೆ.


ವಿವರಗಳಿಗೆ : ಸಂಪಾದಕ, ಅನ್ವೇಷಣೆ ಸಂಪರ್ಕಿಸಿ.

'ಅನ್ವೇಷಣೆ' ಸಾಹಿತ್ಯ—ಸಾಂಸ್ಕೃತಿಕ ಚಟುವಟಿಕೆಗಳಿಗೆ ಮೀಸಲಾದ ಪತ್ರಿಕೆ

o ನವ್ಯೋತ್ತರ ಕನ್ನಡ ಸಾಹಿತ್ಯದ ಮಹತ್ವದ ದಾಖಲೆಗಳಿಗೆ
o ಪ್ರಗತಿಪರ ವಿಚಾರಗಳಿಗೆ, ಸೈದ್ಧಾಂತಿಕ ಹಿನ್ನೆಲೆಯ ಮುಕ್ತ ವಿಚಾರಗಳಿಗೆ
o ಹಿರಿ-ಕಿರಿ ಬರಹಗಾರರ ತಾತ್ವಿಕ ವಿಚಾರಗಳ ಸಂವಾದಕ್ಕೆ

ಚಂದಾ ವಿವರ : ವಾರ್ಷಿಕ ಚಂದಾ ರೂ. 35–ವ್ಯಕ್ತಿಗಳಿಗೆ
ರೂ. 50-ಗ್ರಂಥಾಲಯಕ್ಕೆ
ಮೂರು ವರ್ಷಕ್ಕೆ ರೂ. 100–ವ್ಯಕ್ತಿಗಳಿಗೆ
ರೂ. 150-ಗ್ರಂಥಾಲಯಗಳಿಗೆ

ಆಜೀವ ಚಂದಾ ರೂ. 500 ಸಂಸ್ಥೆ/ಗ್ರಂಥಾಲಯಕ್ಕೆ ಮಾತ್ರ



ವಿಳಾಸ : ಸಂಪಾದಕ, "ಅನ್ವೇಷಣೆ", 478
11ನೇ ಮುಖ್ಯರಸ್ತೆ, ಎಂ. ಸಿ. ಬಡಾವಣೆ
ವಿಜಯನಗರ, ಬೆಂಗಳೂರು–560 040.

ಸಂಪಾದಕ/ಮುದ್ರಕ : ಆರ್. ಜಿ. ಹಳ್ಳಿ ನಾಗರಾಜ್, ಪ್ರಕಾಶಕರು : ಅರುಣ ಯುವ ಲೇಖಕರ ಬಳಗ, ಬೆಂಗಳೂರು-79, ಚೇತನ ಪ್ರಿಂಟರ್ಸ್, ಎಲ್. ಎನ್. ಪುರಂ, ಬೆಂಗಳೂರು-21